ಗುರುವಾರ, ಜುಲೈ 21, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ

ಆಹಾರ ಪದಾರ್ಥಗಳಿಗೆ ಜಿಎಸ್‌ಟಿ ವಿಧಿಸಿರುವುದನ್ನು ವಿರೋಧಿಸಿ ನವದೆಹಲಿಯ ಸಂಸತ್ ಭವನದ ಗಾಂಧಿ ಪ್ರತಿಮೆ ಬಳಿ ಬುಧವಾರ ರಾಜ್ಯಸಭಾ ಸದಸ್ಯೆ ಪುಲೊದೇವಿ ಅವರು ಅಡುಗೆ ಅನಿಲ ಸಿಲಿಂಡರ್ ಎತ್ತಿ ಪ್ರತಿಭಟಿಸಿದರು



ಗುರುವಾರ, ಜುಲೈ 21, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 201 | ಪುಟ 16


● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಐಬಿಪಿಎಸ್ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಇಲ್ಲಿದೆ



ಆಳ-ಅಗಲ
ಸಾಲದ ಸುಳಿಯಲ್ಲಿ ಹತ್ತಾರು ದೇಶಗಳು

ಹಣದುಬ್ಬರದ ನಡುವೆಯೂ ಬೆಳವಣಿಗೆ: ಐಟಿಸಿ ವಿಶ್ವಾಸ 10

ಶ್ರೀಲಂಕಾ ಅಧ್ಯಕ್ಷರಾಗಿ ರಾನಿಲ್ ಆಯ್ಕೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,397 ▲	16,520 ▲	₹52,200 (ಬೆಂಗಳೂರು)	₹56,900 (ಬೆಂಗಳೂರು)	80.05 ▼



ಮೇಕೆದಾಟು ಯೋಜನೆ ಡಿಪಿಆರ್– ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸೂಚನೆ

ಅಭಿಪ್ರಾಯ ನೀಡಬೇಡಿ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮೇಕೆದಾಟು ಬಳಿ ಸಮತೋಲನ ಜಲಾಶಯ ನಿರ್ಮಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಸಲ್ಲಿಸಿರುವ ವಿಸ್ತೃತ ಯೋಜನಾ ವರದಿಯ (ಡಿಪಿಆರ್) ಕುರಿತು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಚರ್ಚೆ ನಡೆಸಬಹುದು. ಆದರೆ, ಕರ್ನಾಟಕ ಸರ್ಕಾರದ ಪ್ರಸ್ತಾವನೆಯ ಆಧಾರದಲ್ಲಿ ಅಧಿಕೃತವಾಗಿ ಯಾವುದೇ ಅಭಿಪ್ರಾಯಕ್ಕೆ ಬರುವಂತಿಲ್ಲ' ಎಂದು ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಯೋಜನೆಯ ಡಿಪಿಆರ್‌ಗೆ ಪ್ರಾಧಿಕಾರದಿಂದ ಅಭಿಪ್ರಾಯ ಪಡೆಯಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಜಲ ಆಯೋಗ ಸೂಚಿಸಿತ್ತು.

ಡಿಪಿಆರ್ ಬಗ್ಗೆ ಚರ್ಚಿಸಲು ಪ್ರಾಧಿಕಾರದ ಅಂತಿಮ ಸಭೆ ಶುಕ್ರವಾರಕ್ಕೆ (ಜುಲೈ 22) ನಿಗದಿಯಾಗಿತ್ತು. ಯೋಜನೆಯ ಪರವಾಗಿ ಪ್ರಾಧಿಕಾರವು ಅಭಿಪ್ರಾಯ ನೀಡಲಿದೆ ಎಂಬ ವಿಶ್ವಾಸದಲ್ಲಿ ಕರ್ನಾಟಕ ಸರ್ಕಾರ ಇತ್ತು. ಸುಪ್ರೀಂ ಕೋರ್ಟ್ ನಿರ್ದೇಶನದಿಂದ ಕರ್ನಾಟಕ ಸರ್ಕಾರಕ್ಕೆ ತಾತ್ಕಾಲಿಕ ಹಿನ್ನಡೆ ಆಗಿದೆ.

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್, ಅಭಯ್ ಎಸ್.ಓಕಾ ಹಾಗೂ ಜೆ.ಬಿ.ಪಾರ್ದಿವಾಲಾ ಅವರಿದ್ದ ನ್ಯಾಯಪೀಠ, ಕಾವೇರಿ ಪ್ರಾಧಿಕಾರ ಹಾಗೂ ಇತರರಿಗೆ ನೋಟಿಸ್ ಜಾರಿಗೊಳಿಸಿದೆ.

ತಮಿಳುನಾಡು ಸರ್ಕಾರದ ಪರವಾಗಿ ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿ, 'ಮೇಕೆದಾಟು ಯೋಜನೆಯು ತಮಿಳುನಾಡು ರೈತರ ಹಿತಾಸಕ್ತಿಗೆ ಹಾನಿಕಾರಕವಾಗಲಿದೆ' ಎಂದು ವಾದಿಸಿದರು.

6ನೇ ಪುಟ ನೋಡಿ

ಗೆಲುವು ದೊರೆಯುವ ವಿಶ್ವಾಸ: ಸಿ.ಎಂ ಬೊಮ್ಮಾಯಿ

ಮಂಡ್ಯ: 'ಸುಪ್ರೀಂ ಕೋರ್ಟ್‌ನಲ್ಲಿರುವ ಮೇಕೆದಾಟು ಅರ್ಜಿಯ ಅಂತಿಮ ವಿಚಾರಣೆ ಮಂಗಳವಾರ (ಜುಲೈ 26) ನಡೆಯಲಿದೆ. ನಮ್ಮ ವಕೀಲರು ಸಮರ್ಥ ವಾದ ಮಂಡನೆ ಮಾಡಿದ್ದು, ನಮಗೆ ಗೆಲುವು ದೊರೆಯುವ ವಿಶ್ವಾಸವಿದೆ. ಕೇಂದ್ರ ಸರ್ಕಾರ ಡಿಪಿಆರ್‌ಗೆ ಅನುಮೋದನೆ ನೀಡಿದ ಕೂಡಲೇ ಕಾಮಗಾರಿ ಆರಂಭಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ತಿಳಿಸಿದರು.

ಶ್ರೀರಂಗಪಟ್ಟಣ ತಾಲ್ಲೂಕು ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಿಸಿ ಮಾತನಾಡಿದ ಅವರು, 'ನದಿಯ ಕೆಳ ಮಟ್ಟದಲ್ಲಿ ಕಾಮಗಾರಿ ನಡೆಸಿದರೆ ಯಾರಿಗೂ ತೊಂದರೆ ಆಗುವುದಿಲ್ಲ. ಬೇಸಿಗೆಯಲ್ಲಿ ನೀರಿನ ಸದ್ಬಳಕೆಗೆ ಯೋಜನೆ ಸಹಾಯಕವಾಗುತ್ತದೆ. ಆದರೆ ತಮಿಳುನಾಡು ಸರ್ಕಾರ ಅನಾವಶ್ಯಕವಾಗಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ' ಎಂದರು.

'ಕಬಿನಿ ಎಡದಂಡೆ ನಾಲೆ, ಕೆಆರ್‌ಎಸ್ ವ್ಯಾಪ್ತಿಯ ವಿಶ್ವೇಶ್ವರಯ್ಯ ನಾಲೆ ಹಾಗೂ ಹಾರಂಗಿ ಜಲಾಶಯದ ನಾಲೆಗಳ ಆಧುನೀಕರಣಕ್ಕೆ ಸರ್ಕಾರ ₹ 480 ಕೋಟಿ ಮೀಸಲಿಟ್ಟಿದೆ. ಕೆಆರ್‌ಎಸ್ ಜಲಾಶಯದ ಕ್ರೆಸ್ಟ್ ಗೇಟ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದ್ದು ಈಗಾಗಲೇ 69 ಗೇಟ್ ಅಳವಡಿಕೆಯಾಗಿದೆ, ಇನ್ನೂ 62 ಗೇಟ್‌ಗಳ ಅಳವಡಿಕೆ ನಡೆಯಬೇಕಾಗಿದೆ' ಎಂದರು.

'ಒಂದು ಹನಿ ನೀರು ಪಡೆಯುವುದಕ್ಕೂ ನಾವು ಸುಪ್ರೀಂ ಕೋರ್ಟ್ ಬಾಗಿಲು ತಟ್ಟಬೇಕಾಗಿದೆ. ಹೀಗಾಗಿ ಜಲಾಶಯದ ಸುರಕ್ಷತೆ ಕಾಪಾಡಿಕೊಂಡು ನೀರನ್ನು ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ' ಎಂದರು.

'ಜಲ ಆಯೋಗದ ಒಪ್ಪಿಗೆ ಅಗತ್ಯ'

'ಮೇಕೆದಾಟು ಯೋಜನೆಯ ಡಿಪಿಆರ್‌ಗೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಅಭಿಪ್ರಾಯವನ್ನಷ್ಟೇ ನೀಡಲಿದೆ. ಯೋಜನಾ ವರದಿಗೆ ಕೇಂದ್ರ ಜಲ ಆಯೋಗದಿಂದಲೇ ಒಪ್ಪಿಗೆ ಪಡೆಯಬೇಕಿದೆ' ಎಂದು ಕರ್ನಾಟಕ ಜಲಸಂಪನ್ಮೂಲ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದರು.

'ಡಿಪಿಆರ್ ಬಗ್ಗೆ ಪ್ರಾಧಿಕಾರದಲ್ಲಿ ಚರ್ಚೆ ಆಗಬೇಕು ಎಂದು ತಮಿಳುನಾಡು ಸರ್ಕಾರ 2019ರಲ್ಲಿ ವಾದಿಸಿತ್ತು. ವಿಷಯದ ಬಗ್ಗೆ ಚರ್ಚೆ ನಡೆಸಲು ಪ್ರಾಧಿಕಾರಕ್ಕೆ ಅಧಿಕಾರ ಇಲ್ಲ ಎಂದು ಈಗ ಹೇಳುತ್ತಿದೆ. ತಮಿಳುನಾಡಿನ ದ್ವಂದ್ವ ನಿಲುವನ್ನು ಸುಪ್ರೀಂ ಕೋರ್ಟ್‌ನ ಗಮನಕ್ಕೆ ತರಲಾಗಿದೆ' ಎಂದೂ ಹೇಳಿದರು.

ಈಶ್ವರಪ್ಪಗೆ 'ಬಿ' ರಿಪೋರ್ಟ್

ಗುತ್ತಿಗೆದಾರ ಸಂತೋಷ್ ಪಾಟೀಲ ಆತ್ಮಹತ್ಯೆ ಪ್ರಕರಣ

ಉಡುಪಿ: ಬೆಳಗಾವಿ ಜಿಲ್ಲೆಯ ಗುತ್ತಿಗೆದಾರ ಸಂತೋಷ್ ಪಾಟೀಲ ಅನುಮಾನಾಸ್ಪದ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ 'ಬಿ' ರಿಪೋರ್ಟ್ ಸಲ್ಲಿಸಲಾಗಿದೆ. ಪ್ರಕರಣದಲ್ಲಿ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಪ್ರಮುಖ ಆರೋಪಿಯಾಗಿದ್ದರು.

ಸಾಕ್ಷ್ಯಾಧಾರಗಳ ಕೊರತೆಯಿಂದ ಈಶ್ವರಪ್ಪ ವಿರುದ್ಧದ ಆರೋಪಗಳನ್ನು ಕೈಬಿಡಲಾಗಿದೆ. ಪ್ರಕರಣದ ತನಿಖೆಯ ನೇತೃತ್ವ ವಹಿಸಿದ್ದ ಉಡುಪಿ ಇನ್‌ಸ್ಪೆಕ್ಟರ್ ಪ್ರಮೋದ್ ಕುಮಾರ್ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದಾರೆ.

6ನೇ ಪುಟ ನೋಡಿ

> ಮನೆ ದೇವರು ತಾಯಿ ಚೌಡೇಶ್ವರಿ ನನ್ನನ್ನು ಆರೋಪದಿಂದ ಮುಕ್ತಳಾಗಿಸಿದ್ದಾಳೆ. ಪಕ್ಷದ ಮುಖಂಡರು, ಕಾರ್ಯಕರ್ತರು ಈಗ ಮುಜುಗರದಿಂದ ಮುಕ್ತರಾಗಿದ್ದಾರೆ. ಅಂತಿಮವಾಗಿ ಇದು ಸತ್ಯಕ್ಕೆ ಸಂದ ಜಯ
>
> **ಕೆ.ಎಸ್.ಈಶ್ವರಪ್ಪ,** ಶಾಸಕ

'ಬಿ' ರಿಪೋರ್ಟ್ ಹಾಕಿ ಅನ್ಯಾಯ: ಪತ್ನಿ ಆಕ್ರೋಶ

ಬೆಳಗಾವಿ: 'ನಮ್ಮ ಆತಂಕ ಕೊನೆಗೂ ನಿಜವೇ ಆಯಿತು. ನನ್ನ ಪತಿಯ ಸಾವಿಗೆ ಪ್ರಮುಖ ಕಾರಣರಾದ ಕೆ.ಎಸ್.ಈಶ್ವರಪ್ಪ ಅವರು ಪೊಲೀಸ್ ತನಿಖೆ ಮೇಲೆ ಪ್ರಭಾವ ಬೀರಿದ್ದಾರೆ. ಅವರ ಮೇಲೆ 'ಬಿ' ರಿಪೋರ್ಟ್ ಹಾಕಿಸಿಕೊಂಡಿದ್ದಾರೆ. ನನಗೆ ನ್ಯಾಯ ಸಿಗುವವರೆಗೂ ಸುಮ್ಮನಿರುವುದಿಲ್ಲ' ಎಂದು ಸಂತೋಷ್ ಪಾಟೀಲ ಅವರ ಪತ್ನಿ ರೇಣುಕಾ ಪ್ರತಿಕ್ರಿಯಿಸಿದರು.

'ಪೊಲೀಸರು ತನಿಖೆ ಮಾಡಿ ನ್ಯಾಯ ಕೊಡಿಸುತ್ತಾರೆ ಎಂಬ ನಿರೀಕ್ಷೆ ಹುಸಿಯಾಗಿದೆ' ಎಂದು ಬುಧವಾರ ಮಾಧ್ಯಮಗಳ ಮುಂದೆ ಆಕ್ರೋಶ ವ್ಯಕ್ತಪಡಿಸಿದರು.

6ನೇ ಪುಟ ನೋಡಿ

ಸಂಘ–ಸಂಸ್ಥೆಗಳಿಗೆ ಗರಿಷ್ಠ ₹ 2 ಲಕ್ಷದ ಮಿತಿ

ಕನ್ನಡ-ಸಂಸ್ಕೃತಿ: ನೆರವಿಗೆ ಹಲವು ನಿರ್ಬಂಧ

● ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕನ್ನಡ ಸಂಸ್ಕೃತಿಯನ್ನು ಕಟ್ಟಿ, ಬೆಳೆಸುವ ಕಾಯಕದಲ್ಲಿ ನಿರತವಾಗಿರುವ ಸಂಘ–ಸಂಸ್ಥೆಗಳಿಗೆ ನೀಡುವ ಅಲ್ಪ ಪ್ರಮಾಣದ ಆರ್ಥಿಕ ನೆರವಿಗೆ ಸರ್ಕಾರ ಹಲವು ನಿರ್ಬಂಧ ವಿಧಿಸಿದೆ.

ಪ್ರತಿವರ್ಷವೂ ಆರ್ಥಿಕ ನೆರವಿನ ಅಸಮಾನತೆ ಬಗ್ಗೆ ಕಲಾವಿದರು ಹಾಗೂ ಸಾಂಸ್ಕೃತಿಕ ಸಂಘ–ಸಂಸ್ಥೆಗಳ ಮುಖ್ಯಸ್ಥರಿಂದ ಆಕ್ಷೇಪಗಳು ವ್ಯಕ್ತವಾಗುತ್ತಿದ್ದವು. 'ಕೆಲ ಸಂಘ–ಸಂಸ್ಥೆಗಳು ಮುಖ್ಯಮಂತ್ರಿ, ಸಚಿವರ ಶಿಫಾರಸು ಬಳಸಿ, ಪೂರಕ ದಾಖಲೆ ಸಲ್ಲಿಸದೆ ನಿಯಮ ಮೀರಿ ಅನುದಾನ ಪಡೆದುಕೊಂಡಿವೆ' ಎಂಬ ಆರೋಪಗಳು ಕೇಳಿ ಬರುತ್ತಿದ್ದವು. ಧನಸಹಾಯಕ್ಕೆ ಸಂಬಂಧಿಸಿದಂತೆ ಪಾರದರ್ಶಕತೆಯ ಹೆಸರಿನಲ್ಲಿ ಪರಿಷ್ಕೃತ ಮಾರ್ಗಸೂಚಿ ಹೊರಡಿಸಿ, ಕೆಲವೊಂದು ನಿರ್ಬಂಧಗಳನ್ನು ಇಲಾಖೆಯು ವಿಧಿಸಿದೆ. ಇದಕ್ಕೆ ಆರಂಭಿಕ ಹಂತದಲ್ಲೇ ಸಾಂಸ್ಕೃತಿಕ ವಲಯದ ಪ್ರಮುಖರಿಂದ ಬಾರಿ ಅಸಮಾಧಾನ ವ್ಯಕ್ತವಾಗಿದೆ.

6ನೇ ಪುಟ ನೋಡಿ

₹ 80ರ ಗಡಿ ದಾಟಿದ ರೂಪಾಯಿ ಕುಸಿತ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ದಿನದ ವಹಿವಾಟಿನ ಅಂತ್ಯಕ್ಕೆ ಇದೇ ಮೊದಲ ಬಾರಿಗೆ ₹ 80ಕ್ಕಿಂತ ಕಡಿಮೆ ಮಟ್ಟಕ್ಕೆ ಕುಸಿದಿದೆ.

ಕೇಂದ್ರ ಸರ್ಕಾರವು ಆಕಸ್ಮಿಕ ಲಾಭ ತೆರಿಗೆಯನ್ನು ಕಡಿತಗೊಳಿಸಿದ್ದರಿಂದ ವಿತ್ತೀಯ ಕೊರತೆಯು ಹೆಚ್ಚಾಗಬಹುದು ಎಂಬ ಕಳವಳ ವ್ಯಕ್ತವಾಗಿದ್ದು ಕೂಡ ರೂಪಾಯಿ ಮೌಲ್ಯ ಕುಸಿತಕ್ಕೆ ಒಂದು ಕಾರಣವಾಯಿತು ಎಂದು ತಜ್ಞರು ಹೇಳಿದ್ದಾರೆ.

ಬುಧವಾರದ ವಹಿವಾಟಿನ ಅಂತ್ಯಕ್ಕೆ ರೂಪಾಯಿ ಮೌಲ್ಯವು ಡಾಲರ್ ಎದುರು ₹ 80.05ಕ್ಕೆ ತಲುಪಿದೆ. ಬುಧವಾರ ರೂಪಾಯಿ 13 ಪೈಸೆಯಷ್ಟು ಮೌಲ್ಯ ಕಳೆದುಕೊಂಡಿದೆ.

'ಸುಪ್ರೀಂ'ನಿಂದ ಮಧ್ಯಂತರ ಜಾಮೀನು ಮಂಜೂರು

ಜೈಲಿನಿಂದ ಜುಬೈರ್ ಬಿಡುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಕ್ಷೇಪಾರ್ಹ ಟ್ವೀಟ್‌ಗಳಿಗೆ ಸಂಬಂಧಿಸಿ ಆಲ್ಟ್ ನ್ಯೂಸ್ ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರ ವಿರುದ್ಧ ಉತ್ತರ ಪ್ರದೇಶದಲ್ಲಿ ದಾಖಲಾಗಿರುವ ಎಲ್ಲ ಆರು ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ಮಧ್ಯಂತರ ಜಾಮೀನು ನೀಡಿದ್ದು, ಬುಧವಾರ ಅವರನ್ನು ತಿಹಾರ್ ಜೈಲಿನಿಂದ ಬಿಡುಗಡೆ ಮಾಡಲಾಯಿತು. ಜುಬೈರ್ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸಲು ಉತ್ತರಪ್ರದೇಶ ಸರ್ಕಾರ ಜುಲೈ 10ರಂದು ರಚಿಸಿದ್ದ ವಿಶೇಷ ತನಿಖಾ ತಂಡವನ್ನು ವಿಸರ್ಜಿಸಿದ ಸುಪ್ರೀಂಕೋರ್ಟ್, ಅವರ ವಿರುದ್ಧದ ಎಲ್ಲ ಪ್ರಕರಣಗಳನ್ನು ದೆಹಲಿ ಪೊಲೀಸ್‌ನ ವಿಶೇಷ ಘಟಕಕ್ಕೆ ವರ್ಗಾಯಿಸುವಂತೆಯೂ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್ ಹಾಗೂ ಎ.ಎಸ್.ಬೋಪಣ್ಣ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಈಗಾಗಲೇ ತನಿಖೆ ನಡೆಯುತ್ತಿರುವ ಟ್ವೀಟ್‌ಗಳಿಗೆ ಸಂಬಂಧಿಸಿ ಭವಿಷ್ಯದಲ್ಲಿ ಅವರ ವಿರುದ್ಧ ದಾಖಲಾಗಬಹುದಾದ ಎಲ್ಲ ಎಫ್‌ಐಆರ್‌ಗಳಿಗೂ ಈ ಜಾಮೀನು ಆದೇಶ ಅನ್ವಯವಾಗಲಿದೆ' ಎಂದು ತಿಳಿಸಿದ ನ್ಯಾಯಪೀಠ, 'ಎಫ್‌ಐಆರ್‌ಗಳನ್ನು ವಜಾಗೊಳಿಸುವಂತೆ ಕೋರಿ ಜುಬೈರ್ ಅವರು ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಬಹುದು' ಎಂದು ಸ್ಪಷ್ಟಪಡಿಸಿತು.

'ಜುಬೈರ್ ಅವರ ಟ್ವೀಟ್‌ಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ದೆಹಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಹೀಗಾಗಿ, ಅವರನ್ನು ಕಸ್ಟಡಿಯಲ್ಲಿ ಇರಿಸುವುದನ್ನು ಸಮರ್ಥಿಸಲಾಗದು' ಎಂದೂ ನ್ಯಾಯಪೀಠ ಹೇಳಿತು.

7ನೇ ಪುಟ ನೋಡಿ

ಜಿ.ರಾಜಶೇಖರ್ ನಿಧನ



ಉಡುಪಿ: ಚಿಂತಕ ಹಾಗೂ ಸಾಮಾಜಿಕ ಹೋರಾಟಗಾರ ಜಿ.ರಾಜಶೇಖರ್ (75) ಬುಧವಾರ ನಗರದ ಆದರ್ಶ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಜಿ.ರಾಜಶೇಖರ್ ಅವರಿಗೆ ಹಲವು ದಿನಗಳಿಂದ ವೆಂಟಿಲೇಟರ್‌ನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ದಿನದಿಂದ ದಿನಕ್ಕೆ ಆರೋಗ್ಯ ಸ್ಥಿತಿ ಬಿಗಡಾಯಿಸುತ್ತಲೇ ಇತ್ತು. ಕೊನೆಗೆ ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು.

ರಾಜಶೇಖರ್ ಅವರ ಪಾರ್ಥಿವ ಶರೀರವನ್ನು ಗುರುವಾರ ಬೆಳಿಗ್ಗೆ 8 ಗಂಟೆಗೆ ನಗರದ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸಭಾಂಗಣ ಸಮೀಪದ ಸಂಬಂಧಿಕರ ಮನೆಯಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು. 10 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬ ಮೂಲಗಳು ತಿಳಿಸಿವೆ.


3ನೇ ಪುಟ ನೋಡಿ

ನುಡಿನಮನ 3

ಚಿನಕುರಳಿ

ಪ್ರಕಾಶ್ ಶೆಟ್ಟಿ







ನಾಮನಿರ್ದೇಶನ ರದ್ದು

ಬೆಂಗಳೂರು: ರಾಜ್ಯ ಸರ್ಕಾರ 12 ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರ ನಾಮನಿರ್ದೇಶನವನ್ನು ರದ್ದುಪಡಿಸಿದೆ.

ರದ್ದುಪಡಿಸಿದ ನಾಮನಿರ್ದೇಶನ: ಹುಬ್ಬಳ್ಳಿ-ಧಾರವಾಡ- ನಾಗೇಶ ಕಲಬುರ್ಗಿ, ಹಾವೇರಿ- ಶಿವಕುಮಾರ್ ಸಂಗೂರ, ಕೆಜಿಎಫ್- ಅಶ್ವಿನಿ, ಹೊಸ ಪೇಟೆ- ಅಶೋಕ ಜೀರೆ, ಮಂಗಳೂರು- ರವಿಶಂಕರ ಮಿಜಾರ್, ಚಿಕ್ಕಮಗಳೂರು- ಸಿ. ಆನಂದ, ಹಾಸನ- ಲಲಾಟಮೂರ್ತಿ, ಚಾಮರಾಜನಗರ- ಪಿ.ಬಿ. ಶಾಂತ ಮೂರ್ತಿ, ಮೈಸೂರು- ಎಚ್.ವಿ. ರಾಜೀವ್, ಮಡಿಕೇರಿ- ಕೆ.ಎಸ್. ರಮೇಶ್ ಹೊಳ್ಳ, ಬಾಗಲಕೋಟೆ- ಬಸವಲಿಂಗಪ್ಪ ಕಾಶೀನಾಥ್ ನಾವಲಗಿ, ಕಲಬುರಗಿ- ದಯಾಘನ್ ಪ್ರಹ್ಲಾದ್ ರಾವ್ ಧಾರವಾಡಕರ್.

6 ಸಾವಿರ ಗುಂಡಿಗಳನ್ನು ಮುಚ್ಚಲಾಗಿದೆ: ಬಿಬಿಎಂಪಿ ಆಯುಕ್ತ

'ಇನ್ನೂ 3,500 ರಸ್ತೆ ಗುಂಡಿಗಳಿವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಇನ್ನೂ ಸುಮಾರು 3 ಸಾವಿರ ರಸ್ತೆ ಗುಂಡಿಗಳು ಇವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

'ನಮ್ಮ ಯೋಜನೆ ವಿಭಾಗ ಹಾಗೂ ಪೊಲೀಸ್ ಇಲಾಖೆ ಸುಮಾರು 6 ಸಾವಿರ ರಸ್ತೆಗುಂಡಿಗಳು ಇವೆ ಎಂದು ವರದಿ ನೀಡಿದ್ದವು. ಅದರಲ್ಲಿ ಇನ್ನೂ ಒಂದೂವರೆ ಸಾವಿರ ಮುಚ್ಚಬೇಕಾಗಿಲ್ಲ. ಇದಲ್ಲದೆ, ವಾರ್ಡ್ ಮಟ್ಟದಲ್ಲಿ ಸುಮಾರು 3 ಸಾವಿರ ರಸ್ತೆ ಗುಂಡಿಗಳಿದ್ದವು. ಅದರಲ್ಲಿ ಒಂದೂವರೆ ರಸ್ತೆಗುಂಡಿಗಳು ಇನ್ನೂ ಉಳಿದುಕೊಂಡಿವೆ' ಎಂದು ಸುದ್ದಿಗಾರರಿಗೆ ಬುಧವಾರ ವಿವರ ನೀಡಿದರು.

'ಹಳೆಯ ವಾರ್ಡ್ ಪ್ರಕಾರವೇ ರಸ್ತೆಗುಂಡಿಗಳನ್ನು ಮುಚ್ಚಲು ಪ್ರತಿ ವಾರ್ಡ್‌ಗೆ ₹30 ಲಕ್ಷ ಹಣ ಇದೆ. ಇದಲ್ಲದೆ ಪ್ರಕೃತಿ ವಿಕೋಪ ಪ್ರಕರಣಗಳಿಗೆ ಹಣ ವಿನಿಯೋಗವಾಗಲಿದೆ. ಒಟ್ಟಾರೆ ಹಣ ಅಷ್ಟೇ ಇರುತ್ತದೆ. ಬಜೆಟ್‌ನಲ್ಲಿ ಏನು ಘೋಷಿಸಲಾಗಿತ್ತೋ ಅದನ್ನು ಮರು ಹಂಚಿಕೆ ಮಾಡಲಾಗಿದೆ ಅಷ್ಟೆ' ಎಂದರು.

'ಮಂಕಿ ಪಾಕ್ಸ್‌ಗೆ ಸಂಬಂಧಿಸಿದಂತೆ ನಮ್ಮಿಂದ ನಿಗಾವಹಿಸುವ ಕಾರ್ಯ ನಡೆದಿದೆ. ಸರ್ಕಾರದ ಮುಂದಿನ ಸೂಚನೆಯಂತೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಹೇಳಿದರು.



ಸಾಂದರ್ಭಿಕ ಚಿತ್ರ

'ಪುನರ್ ವಿಂಗಡಣೆಯಾದ ವಾರ್ಡ್‌ಗಳ ಗಡಿಯನ್ನು ಗುರುತಿಸಲು, ವಾರ್ಡ್ ಸಮಿತಿಗಳನ್ನು ರಚಿಸಲು ಆಯಾ ಗಡಿಯಲ್ಲಿ ಫಲಕಗಳನ್ನು ಹಾಕುವ ಕಾರ್ಯವನ್ನು ಒಂದೆರಡು ದಿನಗಳಲ್ಲಿ ಆರಂಭಿಸಲಾಗುತ್ತದೆ. ವಾರ್ಡ್ ಕಚೇರಿಗಳನ್ನು ತಾತ್ಕಾಲಿಕವಾಗಿ 800 ಚದರ ಅಡಿಯಲ್ಲಿ ನಿರ್ಮಿಸಲಾಗುತ್ತದೆ. ಮುಂದೆ ಸುಮಾರು 2,500 ಚದರ ಅಡಿಯಲ್ಲಿ ಸ್ಥಳ ಗುರುತಿಸಿ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತದೆ' ಎಂದರು.

'ನಮಗೆ ಸಿಬ್ಬಂದಿ ಕೊರತೆ ಇದ್ದೇ ಇದೆ. 400 ಜನರ ನೇಮಕಕ್ಕೆ ಪ್ರಸ್ತಾವ ಕಳಿಸಿದ್ದೇವೆ. 100 ಸಹಾಯಕ ಎಂಜಿನಿಯರ್‌ಗಳ ಕೊರತೆ ಇದೆ. ಪ್ರತಿ ವಾರ್ಡ್‌ಗೂ ಎಇ ಬೇಕು. ಹೀಗಾಗಿ ಎಷ್ಟು ಸಿಬ್ಬಂದಿ ಬೇಕೆಂದು ಎಲ್ಲ ವಿಭಾಗದಿಂದ ಮಾಹಿತಿ ನೀಡಲು ತಿಳಿಸಿದ್ದೇವೆ' ಎಂದು ಅವರು ಹೇಳಿದರು.

'ಪ್ಲಾಸ್ಟಿಕ್ ನಿಷೇಧ ಸಂಬಂಧ ನಮ್ಮ ಮಾರ್ಷಲ್‌ಗಳು ತುಂಬಾ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ. ಸಾಕಷ್ಟು ನಿಯಂತ್ರಣದಲ್ಲಿದೆ. ಪ್ಲಾಸ್ಟಿಕ್ ರಾಷ್ಟ್ರೀಯ ಧ್ವಜಗಳಿಗೂ ಅನುಮತಿ ಇಲ್ಲ' ಎಂದರು.

ಕೆಲವೆಡೆ ಬೀದಿಬದಿ ವ್ಯಾಪಾರ ಇಲ್ಲ

'ಬೀದಿಬದಿ ವ್ಯಾಪಾರಿಗಳಿಗೆ ಯಾವ ರಸ್ತೆಯಲ್ಲಿ ವ್ಯಾಪಾರ ಮಾಡಬೇಕು, ಮಾಡಬಾರದು ಎಂಬ ನಿಯಮವನ್ನು ಜಾರಿಗೊಳಿಸಲಾಗಿದೆ. ಪ್ರಮುಖ ರಸ್ತೆಯಲ್ಲಿಯಂತೂ ವ್ಯಾಪಾರ ಮಾಡುವಂತಿಲ್ಲ. ಏಕೆಂದರೆ ಸಂಚಾರಕ್ಕೆ ತೊಂದರೆ ಆಗುತ್ತದೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

'ಬೀದಿಬದಿ ವ್ಯಾಪಾರಿಗಳನ್ನು ನೋಂದಣಿ ಮಾಡಿಕೊಳ್ಳುವಾಗಲೇ ಅವರಿಗೆ ಈ ಬಗ್ಗೆ ತಿಳಿಸಲಾಗಿದೆ. ಅವರಿಗೆ ಬೇಕಾದ ಸೌಲಭ್ಯಗಳನ್ನು ನಾವು ನೀಡುತ್ತೇವೆ. ಆದರೆ ಅದರಿಂದ ತೊಂದರೆ ಆಗಬಾರದು. ನಾಗರಿಕರು ಹಾಗೂ ಬೀದಿಬದಿ ವ್ಯಾಪಾರಿಗಳಿಗೆ ಅನುಕೂಲವಾಗುವ ಸ್ಥಳದಲ್ಲಿ ಮಾತ್ರ ವ್ಯಾಪಾರಕ್ಕೆ ಅನುಕೂಲ ಮಾಡಿಕೊಡಲಾಗುತ್ತದೆ' ಎಂದರು.

ಫ್ಲೆಕ್ಸ್: ಕ್ರಿಮಿನಲ್ ಪ್ರಕರಣ ದಾಖಲು

'ಫ್ಲೆಕ್ಸ್ ತೆರವು ಕಾರ್ಯವನ್ನು ನಾವು ನಿತ್ಯ ಮಾಡುತ್ತಿದ್ದೇವೆ. ದಂಡ ವಿಧಿಸಿ, ಪ್ರಕರಣ ದಾಖಲಿಸುವುದನ್ನು ಮಾತ್ರ ನಾವು ಮಾಡಿಲ್ಲ. ಈ ವಾರದಿಂದಲೇ ಕ್ರಿಮಿನಲ್ ಪ್ರಕರಣ ಹಾಕುತ್ತೇವೆ' ಎಂದು ತುಷಾರ್ ಗಿರಿನಾಥ್ ಹೇಳಿದರು.

'ಇದು ಒಂದು ದಿನದ ಸಮಸ್ಯೆ ಅಲ್ಲ. ಹಲವು ವರ್ಷಗಳಿಂದ ನಡೆಯುತ್ತಿದೆ. ಪ್ರತಿ ವಾರ ತೆಗೆಯುತ್ತೇವೆ. ಇರುವ ಪ್ರತಿ ದಿನವೂ ತೆಗೆಯುತ್ತಿದ್ದೇವೆ. ಒಂದೇ ದಿನ 100 ಹಾಕಿದರೆ ಅದನ್ನು ತೆಗೆಯಲು ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಹೂಳು ತೆಗೆಯುವ ಟ್ರ್ಯಾಕ್ಟರ್‌ಗಳನ್ನು ಬಳಸಿ, ಅದೇ ಮಾನವ ಸಂಪನ್ಮೂಲವನ್ನು ಉಪಯೋಗಿಸಿಕೊಂಡು ಫ್ಲೆಕ್ಸ್ ತೆರವು ಮಾಡುತ್ತಿದ್ದೇವೆ. ಅದ್ದರಿಂದ ವಲಯವಾರು ಜಂಟಿ ಆಯುಕ್ತರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ. ಎಫ್‌ಐಆರ್ ಇದುವರೆಗೂ ಹಾಕಿಲ್ಲ. ಇನ್ನು ಮುಂದೆ ಅದೂ ಆಗಲಿದೆ' ಎಂದರು.

ಕೃಷಿ ಮಾಹಿತಿಗೆ 'ಬಿಗ್ ಹಾತ್' ಆ್ಯಪ್ ಬಿಡುಗಡೆ

ಬೆಂಗಳೂರು: ಕೃಷಿಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸುವ 'ಬಿಗ್ ಹಾತ್' ಆ್ಯಪ್ ಅನ್ನು ಬುಧವಾರ ಬಿಡುಗಡೆಗೊಳಿಸಲಾಯಿತು.

ಸರ್ಕಾರ ಮತ್ತು ಖಾಸಗಿ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಕೃಷಿ ಮತ್ತು ರೈತರಿಗೆ ಸಂಬಂಧಿಸಿದ ಹೊಸ ಆವಿಷ್ಕಾರಗಳು ಹೆಚ್ಚಾಗಬೇಕು. ಕೃಷಿ ಕ್ಷೇತ್ರದ ಡಿಜಿಟಲೀಕರಣಕ್ಕೆ ಹೆಚ್ಚು ಒತ್ತು ನೀಡಬೇಕು. ರಾಜ್ಯದಲ್ಲಿ 65 ಲಕ್ಷ ರೈತರು ಬೆಳೆ ಸಮೀಕ್ಷೆಯನ್ನು ಮೊಬೈಲ್ ಮೂಲಕ ಮಾಡುತ್ತಿದ್ದಾರೆ ಎಂದು ಕೃಷಿ ಇಲಾಖೆ ಕಾರ್ಯದರ್ಶಿ ಶಿವಯೋಗಿ ಪಿ. ಕಳಸದ ಮಾಹಿತಿ ನೀಡಿದರು.

ಸಂಸ್ಥೆಯ ಕಾರ್ಯ ನಿರ್ವಾಹಕ ಅಧಿಕಾರಿ ಸತೀಶ್ ನೂಕಲಾ, ಆ್ಯಪ್ ರೈತರಿಗೆ ಆರೋಗ್ಯಕರ ಡಿಜಿಟಲ್ ಪರಿಸರ ವ್ಯವಸ್ಥೆ ಒದಗಿಸುವ ಉದ್ದೇಶ ಹೊಂದಿದೆ. ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಕನ್ನಡದಲ್ಲೇ ಈ ಆ್ಯಪ್ ಅಭಿವೃದ್ಧಿಗೊಳಿಸಲಾಗಿದೆ. ಒಟ್ಟು 61 ಬೆಳೆಗಳ ಕುರಿತು ಸಂಪೂರ್ಣ ಮಾಹಿತಿ ಒದಗಿಸಲಾಗಿದೆ ಎಂದರು.

ಕಿಸಾನ್ ಬಜಾರ್ ಮೂಲಕ ರೈತರು ಬೆಳೆದ ವಸ್ತುಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ವೇದಿಕೆ ಕಲ್ಪಿಸಲಾಗಿದೆ. ಅಗ್ರಿ ಸ್ಟೋರ್, ಕೀಟನಾಶಕ, ಗೊಬ್ಬರ, ಉತ್ತಮ ಗುಣ ಮಟ್ಟದ ಬಿತ್ತನೆ ಬೀಜಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು.

'ಸಾಮಾನ್ಯರಿಗೆ ತಲುಪದ ಆವಿಷ್ಕಾರ'

ಬೆಂಗಳೂರು: 'ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಆವಿಷ್ಕಾರಗಳು ನಡೆಯುತ್ತಿದ್ದರೂ ಜನಸಾಮಾನ್ಯರಿಗೆ ಅದರ ಲಾಭ ದೊರೆಯುತ್ತಿಲ್ಲ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಬೇಸರ ವ್ಯಕ್ತಪಡಿಸಿದರು.

ಸಾಫ್ಟ್‌ವೇರ್ ಮತ್ತು ಸೇವಾ ಸಂಸ್ಥೆಗಳ ರಾಷ್ಟ್ರೀಯ ಒಕ್ಕೂಟ (ನಾಸ್ಕಾಂ)ನಗರದಲ್ಲಿ ಬುಧವಾರ ಆಯೋಜಿಸಿದ ಹತ್ತನೇ 'ಆರೋಗ್ಯ ವಿಜ್ಞಾನ ಮತ್ತು ಆರೋಗ್ಯ ರಕ್ಷಣೆ ತಂತ್ರಜ್ಞಾನ ಆವಿಷ್ಕಾರ ಸಮಾವೇಶ'ದಲ್ಲಿ ಭಾಗವಹಿಸಿ, ಮಾತನಾಡಿದರು.

'ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುತ್ತಿದ್ದೇವೆ. ಆರೋಗ್ಯ ಕ್ಷೇತ್ರದಲ್ಲಿಯೂ ತಂತ್ರಜ್ಞಾನ ಅಳವಡಿಕೆ ಕಾರ್ಯ ವೇಗವಾಗಿ ನಡೆಯುತ್ತಿದೆ. ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ಗುಣಮಟ್ಟದ ಆರೋಗ್ಯ ಸೇವೆ ದೊರೆಯಬೇಕೆನ್ನುವುದು ತಂತ್ರಜ್ಞಾನ ಬಳಕೆಯ ಆಶಯ. ಸರ್ಕಾರದ ಪ್ರೋತ್ಸಾಹದ ಹೊರತಾಗಿಯೂ ಗ್ರಾಮೀಣ ಪ್ರದೇಶಗಳ ಜನರು ಗುಣಮಟ್ಟದ ಆರೋಗ್ಯ ಸೇವೆಯಿಂದ ವಂಚಿತರಾಗುತ್ತಿದ್ದಾರೆ' ಎಂದರು.



ನಾಸ್ಕಾಂ ಅಧ್ಯಕ್ಷೆ ದೇಬ್‌ಜಾನಿ ಘೋಷ್, 'ತಂತ್ರಜ್ಞಾನ ಕ್ಷೇತ್ರಕ್ಕೆ ಎಲ್ಲಿಲ್ಲದ ಮನ್ನಣೆ ದೊರೆಯುತ್ತಿದೆ. ಆದರೆ, ಇದೇ ವೇಳೆ ಜನರ ಮೂಲಭೂತ ಹಕ್ಕಾದ ಆರೋಗ್ಯದ ಕಡೆಯೂ ಗಮನ ಹರಿಸಬೇಕು. ತಂತ್ರಜ್ಞಾನ ಆವಿಷ್ಕಾರಗಳ ಲಾಭ ಪಡೆದು, ಗುಣಮಟ್ಟದ ಆರೋಗ್ಯ ಸೇವೆಯನ್ನು ಎಲ್ಲರಿಗೂ ಒದಗಿಸಬೇಕು' ಎಂದು ಹೇಳಿದರು.

'ಶಾಲೆಗಳ ವಿಲೀನ: ಕನ್ನಡ ಬೆಳವಣಿಗೆಗೆ ಮಾರಕ'

ಬೆಂಗಳೂರು: 'ಸರ್ಕಾರಿ ಶಾಲೆಗಳ ವಿಲೀನದಿಂದ ಕೆಲ ಮಕ್ಕಳು ಅಕ್ಷರ ವಂಚಿತರಾಗುವ ಸಾಧ್ಯತೆಯಿದೆ. ಕನ್ನಡ ಬೆಳವಣಿಗೆಗೂ ಈ ಕ್ರಮ ಮಾರಕ' ಎಂದು ಕನ್ನಡ ಗೆಳೆಯರ ಬಳಗ ತಿಳಿಸಿದೆ.

'25ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇರುವ 13,800 ಸರ್ಕಾರಿ ಶಾಲೆಗಳನ್ನು ಹತ್ತಿರದ ಶಾಲೆಗಳೊಂದಿಗೆ ವಿಲೀನಗೊಳಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದ್ದಾರೆ. ವಿಲೀನ ಎಂದರೆ ಆ ಶಾಲೆಗಳನ್ನು ಮುಚ್ಚುವುದು ಎಂದೇ ಅರ್ಥ. ಶಾಲೆಗಳ ವಿಲೀನದಿಂದ 13,800 ಊರುಗಳಲ್ಲಿ ಶಾಲೆಗಳಿರುವುದಿಲ್ಲ. ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಅಂದರೆ, ಕನ್ನಡಮಾಧ್ಯಮದ ಶಾಲೆಗಳನ್ನು ಮುಚ್ಚುವುದಾಗಿದೆ. ಕನ್ನಡ ಉಳಿಯ ಬೇಕಾದರೆ ಪ್ರಾಥಮಿಕ ಶಿಕ್ಷಣದಲ್ಲಾದರೂ ಕನ್ನಡ ಉಳಿಯಲೇಬೇಕು' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

'ಕನ್ನಡದ ಭವಿಷ್ಯಕ್ಕೆ ಮಾರಕವಾಗಿರುವ ಮತ್ತು ಕನ್ನಡ ಅಸ್ಮಿತೆಯನ್ನು ಮಸುಕಾಗಿಸುವ ಯೋಜನೆ ಇದಾಗಿದೆ. ಸರ್ಕಾರಿ ಶಾಲೆಗಳನ್ನು ಮುಚ್ಚುವ ಯೋಜನೆಯನ್ನು ಸರ್ಕಾರ ಕೂಡಲೇ ಕೈಬಿಡಬೇಕು. ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸಲು ಅಗತ್ಯವಿದ್ದರೆ ಶಿಕ್ಷಣ ಸೆಸ್ ವಿಧಿಸಿ, ರಾಜ್ಯದಲ್ಲಿರುವ ಉದ್ಯಮಗಳ ನೆರವು ಪಡೆಯಲಿ. ಕನ್ನಡದ ಮಕ್ಕಳನ್ನು ವಿದ್ಯೆಯಿಂದ ವಂಚಿಸುವ ಕೆಲಸ ಬೇಡ' ಎಂದು ಮನವಿ ಮಾಡಿದ್ದಾರೆ.

'ರಾಮಯ್ಯ ಸ್ಯಾಟ್' ನ್ಯಾನೋ ಉಪಗ್ರಹ ನಿರ್ಮಾಣಕ್ಕೆ ಒಡಂಬಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಮಯ್ಯ ಆನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಕುಲ್‌ದೀಪ್ ಕೆ. ರೈನಾ ಹಾಗೂ ಭಾರತೀಯ ತಂತ್ರಜ್ಞಾನ ಕಾಂಗ್ರೆಸ್ ಅಸೋಸಿಯೇಷನ್ ಅಧ್ಯಕ್ಷ ಡಾ.ಎಲ್.ವಿ.ಮುರಳಿಕೃಷ್ಣ ರೆಡ್ಡಿ ಅವರು 'ರಾಮಯ್ಯ ಸ್ಯಾಟ್' ಹೆಸರಿನ ನ್ಯಾನೋ ಉಪಗ್ರಹ ಅಭಿವೃದ್ಧಿಪಡಿಸುವ ಒಡಂಬಡಿಕೆಗೆ ಸಹಿ ಹಾಕಿದರು.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮೇಲ್ವಿಚಾರಣೆ ಹಾಗೂ ಭಾರತೀಯ ತಂತ್ರಜ್ಞಾನ ಕಾಂಗ್ರೆಸ್ ಅಸೋಸಿಯೇಷನ್ ಸಹಾಯದಿಂದ ವಿದ್ಯಾರ್ಥಿಗಳು ನ್ಯಾನೋ ಉಪಗ್ರಹ ಅಭಿವೃದ್ಧಿ ಪಡಿಸುತ್ತಿದ್ದಾರೆ. ಒಂದು ಉಪಗ್ರಹದ ಅಭಿವೃದ್ಧಿಗೆ ₹ 1 ಕೋಟಿ ವೆಚ್ಚವಾಗಲಿದೆ.

ಪ್ರೊ.ಕುಲ್‌ದೀಪ್ ಕೆ. ರೈನಾ ಮಾತನಾಡಿ, 'ಈ ಉಪಗ್ರಹ ನಿರ್ಮಾಣ ಕಾರ್ಯವು ನಮ್ಮ ಸಂಸ್ಥೆಗೆ ಗೌರವ ಮತ್ತು ಮನ್ನಣೆ ತರುವ ವಿಚಾರ. ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ನಮ್ಮ ಸಾಮರ್ಥ್ಯ ಪ್ರದರ್ಶಿಸಲು ಇದು ಅವಕಾಶ' ಎಂದರು.



'ರಾಮಯ್ಯ ಸ್ಯಾಟ್' ನ್ಯಾನೋ ಉಪಗ್ರಹ ನಿರ್ಮಾಣದ ಒಡಂಬಡಿಕೆ ಪ್ರತಿಯನ್ನು ರಾಮಯ್ಯ ಆನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಭಾರತೀಯ ತಂತ್ರಜ್ಞಾನ ಕಾಂಗ್ರೆಸ್ ಅಸೋಸಿಯೇಷನ್ ಪ್ರತಿನಿಧಿಗಳು ವಿನಿಮಯ ಮಾಡಿಕೊಂಡರು

'ರಾಮಯ್ಯ ಸ್ಯಾಟ್' ಉಪಗ್ರಹವು 300 ಗ್ರಾಂ ಪೇಲೋಡ್ ಹೊಂದಿದ್ದು, 1.6 ಕೆ.ಜಿ. ತೂಕ ಇರುತ್ತದೆ. ದೂರದ ಪ್ರದೇಶಗಳಿಗೆ ಸಂಪರ್ಕ ಸಂವಹನ ಜಾಲವನ್ನು ಒದಗಿಸಲು, ನೀರು ಮತ್ತು ಹವಾಮಾನದ ಗುಣಮಟ್ಟ ತಿಳಿಯಲು ಸಹಾಯ ಮಾಡುತ್ತದೆ. ಈ ಉಪಗ್ರಹದ ನಿಯಂತ್ರಣವನ್ನು ವಿಶ್ವವಿದ್ಯಾಲಯದ ಪೀಣ್ಯ ಆವರಣದಲ್ಲಿ ಸ್ಥಾಪಿಸಲಾಗುವುದು. ಆಗಸ್ಟ್‌ನಲ್ಲಿ ಉಡಾವಣೆ ಮಾಡಲಾಗುವುದು ಎಂದು ಮುರಳಿಕೃಷ್ಣ ರೆಡ್ಡಿ ತಿಳಿಸಿದರು. ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಆರ್.ಜಯರಾಂ, ಎಂ.ಆರ್.ಶ್ರೀನಿವಾಸ ಮೂರ್ತಿ ಹಾಜರಿದ್ದರು.

ಐಎಎಸ್ ಅಧಿಕಾರಿ ಜಾಮೀನು ಅರ್ಜಿ: ಎಸಿಬಿಗೆ ನೋಟಿಸ್

ಬೆಂಗಳೂರು: ಲಂಚ ಪ್ರಕರಣದ ಆರೋಪಿಯಾಗಿರುವ ಬೆಂಗಳೂರು ನಗರ ಜಿಲ್ಲೆಯ ಈ ಹಿಂದಿನ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಸಲ್ಲಿಸಿರುವ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಮಂಜುನಾಥ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪ್ರತಿವಾದಿ ಎಸಿಬಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ಆಕ್ಷೇಪಣೆ ಸಲ್ಲಿಸುವಂತೆ ಎಸಿಬಿ ಪ್ರಾಸಿಕ್ಯೂಟರ್ ಪಿ.ಎನ್. ಮನಮೋಹನ್ ಅವರಿಗೆ ಸೂಚಿಸಿ ಇದೇ 28ಕ್ಕೆ ವಿಚಾರಣೆ ಮುಂದೂಡಿದೆ.

ಕಂದಾಯ ವ್ಯಾಜ್ಯವೊಂದರಲ್ಲಿ ಪಕ್ಷಪಾತಿ ಆದೇಶ ನೀಡಲು ₹ 5 ಲಕ್ಷ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಮಂಜುನಾಥ್ ಅವರನ್ನು ಎಸಿಬಿ ಪೊಲೀಸರು ಇದೇ 4ರಂದು ಬಂಧಿಸಿದ್ದರು. ಅವರು ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

25ಕ್ಕೆ ಜೆಇಇ ಮೇನ್ ಸೆಷನ್–2 ಪರೀಕ್ಷೆ

ನವದೆಹಲಿ (ಪಿಟಿಐ): ಗುರುವಾರದಿಂದ ಆರಂಭವಾಗ ಬೇಕಿದ್ದ ಜೆಇಇ ಮೇನ್–ಸೆಷನ್ 2 ಪರೀಕ್ಷೆ ಮುಂದೂಡಲಾಗಿದ್ದು, ಇದೇ 25ರಿಂದ ಆರಂಭವಾಗಲಿದೆ ಎಂದು ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್‌ಟಿಎ) ಬುಧವಾರ ತಿಳಿಸಿದೆ. ಪರೀಕ್ಷೆ ಮುಂದೂಡಲು ಕಾರಣ ಏನೆಂದು ತಿಳಿಸಿಲ್ಲ.

ಭಾರತದ ಹೊರಗಿನ 17 ನಗರಗಳು ಸೇರಿದಂತೆ ಸುಮಾರು 500 ನಗರಗಳಲ್ಲಿ 6.29 ಲಕ್ಷ ಅಭ್ಯರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಗುರುವಾರದಿಂದ ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ತಿಳಿಸಲಾಗಿದೆ.ಈ ಮೊದಲಿನ ವೇಳಾಪಟ್ಟಿಯಂತೆ ಜುಲೈ 21ರಿಂದ 30ರ ವರೆಗೆ ಪರೀಕ್ಷೆ ನಡೆಯಬೇಕಿತ್ತು.

'ಕಮಿಷನ್ ಆರೋಪ ಸುಳ್ಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತೋಟಗಾರಿಕೆ ಇಲಾಖೆ ಸಚಿವರು ಮತ್ತು ಅಧಿಕಾರಿಗಳು ಹನಿ ನೀರಾವರಿ ಅಳವಡಿಸಲು ಮತ್ತು ಸಬ್ಸಿಡಿ ಹಣ ರೈತರಿಗೆ ಬಿಡುಗಡೆ ಮಾಡಲು ಕಮಿಷನ್ ಕೇಳಿದ್ದಾರೆ ಎಂದು ಸೂಕ್ಷ್ಮ ಹನಿ ನೀರಾವರಿ ವಿತರಕರ ಸಂಘ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ' ಎಂದು ಇರಿಗೇಶನ್ ಅಸೋಸಿಯೇಷನ್ ಆಫ್ ಕರ್ನಾಟಕದ(ಐಎಕೆ) ಅಧ್ಯಕ್ಷ ಆರ್.ಪ್ರಸಾದ್ ಸ್ಪಷ್ಟೀಕರಣ ನೀಡಿದ್ದಾರೆ.

'ತೋಟಗಾರಿಕೆ ಮತ್ತು ಕೃಷಿ ಇಲಾಖೆಯಲ್ಲಿ ಸಹಾಯಧನ ವಿತರಿಸಲು 'ಫ್ರುಟ್ಸ್ ಮತ್ತು ಹಸಿರು' ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದೆ. ಇಲಾಖೆಯ ಮಾರ್ಗಸೂಚಿಯಂತೆ ರೈತರ ತೋಟಗಳಲ್ಲಿ ಸೂಕ್ಷ್ಮ ಹನಿ ನೀರಾವರಿ ವ್ಯವಸ್ಥೆ ಅಳವಡಿಸಲಾಗಿದೆ' ಎಂದರು.

'ಸರ್ಕಾರ ಮತ್ತು ಇಲಾಖೆಗೆ ಕೆಟ್ಟ ಹೆಸರು ತರಬೇಕೆಂಬ ಉದ್ದೇಶದಿಂದ ಸೂಕ್ಷ್ಮ ನೀರಾವರಿ ವಿತರಕ ಸಂಘ ಎಂದು ಹೇಳಿಕೊಂಡು, ಅದು ಮಾಡಿರುವ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ' ಎಂದು ಅವರು ಪ್ರಕಟಣೆ ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರ

ಬೆಂಗಳೂರು: ಪಂಡಿತರತ್ನ ಎ.ಶಾಂತಿ ರಾಜಶಾಸ್ತ್ರಿ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿಯಲ್ಲಿ ಶೇ 92 ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕೂ ಹೆಚ್ಚು ಅಂಕ ಗಳಿಸಿದ ಜೈನ್ ಸಮುದಾಯದ ವಿದ್ಯಾರ್ಥಿಗಳು ಸೆ.15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ 9343094443 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

3 ಎಕರೆ 32 ಗುಂಟೆಯಲ್ಲಿ ಬಡಾವಣೆ ನಿರ್ಮಿಸಿ ಮಾರಾಟ • ಆರು ಮಂದಿ ವಿರುದ್ಧ ಎಫ್ಐಆರ್

‘ಬಿಡಿಎ ಜಮೀನು ಅಕ್ರಮ ಪರಭಾರೆ’

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಡಾವಣೆ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿದ್ದ ಸುಮಾರು ₹ 70 ಕೋಟಿಗೂ ಹೆಚ್ಚು ಮೌಲ್ಯದ 3 ಎಕರೆ 32 ಗುಂಟೆ ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ ಪರಭಾರೆ ಮಾಡಿರುವ ಆರೋಪದ ಮೇಲೆ ತಲಘಟ್ಟಪುರ ಪೊಲೀಸ್ ಠಾಣೆಯಲ್ಲಿ ಆರು ಮಂದಿ ವಿರುದ್ಧ ಎಫ್ಐಆರ್ ದಾಖಲಿಸಲಾಗಿದೆ.

‘ಬಿಡಿಎ ಸ್ವಾಧೀನದಲ್ಲಿದ್ದ ಜಮೀನನ್ನು ನಕಲಿ ದಾಖಲೆ ಸೃಷ್ಟಿಸಿ ಪರಭಾರೆ ಮಾಡಿ, ಬಳಿಕ ಖರೀದಿದಾರರು ಅನಧಿಕೃತವಾಗಿ ಬಡಾವಣೆ ನಿರ್ಮಿಸಿ ಮಾರಾಟ ಮಾಡಿದ್ದಾರೆ’ ಎಂದು ಬಿಡಿಎ ಅಧಿಕಾರಿಗಳು ದೂರು ನೀಡಿದ್ದರು. ಜಮೀನಿನ ಮೂಲ ಮಾಲೀಕರ ಕುಟುಂಬದ ಸದಸ್ಯರಾದ ಮುನಿಕೃಷ್ಣಪ್ಪ, ಪುಟ್ಟಮ್ಮ, ವೆಂಕಟೇಶ, ವಜ್ರಪ್ಪ ಹಾಗೂ ಅವರಿಂದ ಜಮೀನು ಖರೀದಿಸಿ ಬಡಾವಣೆ ನಿರ್ಮಿಸಿ ನಿವೇಶನಗಳನ್ನು ಮಾರಾಟ ಮಾಡಿರುವ ಟ್ರಿಂಕೋ ಇನ್‌ಫ್ರಾ ಪ್ರೈವೇಟ್ ಲಿಮಿಟೆಡ್‌ನ ಪಾಲುದಾರರಾದ ವಸಂತಕುಮಾರ್ ಡಿ. ಮತ್ತು ಪ್ರಸಾದ್ ಎಂ.ಎಸ್. ಎಂಬುವವರ ವಿರುದ್ಧ ಪೊಲೀಸರು, ಆಸ್ತಿ ನಾಶ, ವಂಚನೆ ಮತ್ತು ಅತಿಕ್ರಮ ಪ್ರವೇಶ ಆರೋಪಗಳಡಿ ಜೂನ್ 24ರಂದು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಮನವರ್ತೆ ಕಾವಲ್ ಗ್ರಾಮದ ಸರ್ವೆ ನಂಬರ್ 7 ರಲ್ಲಿ 92 ಎಕರೆ ಜಮೀನನ್ನು ಬಡಾವಣೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳಲು 2002 ರಲ್ಲಿ ಬಿಡಿಎ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ನಂತರ ಪರಿಹಾರ ದರ ನಿಗದಿ ಮಾಡಿ, ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು.

ಸರ್ವೆ ನಂಬರ್ 7/15ರಲ್ಲಿನ 3.32 ಎಕರೆ ಜಮೀನು ಸ್ವಾಧೀನ ಪ್ರಶ್ನಿಸಿ ಪಾಪಮ್ಮ ಎಂಬುವವರ ಹೆಸರಿನಲ್ಲಿತ್ತು. ಅವರ ಮಕ್ಕಳಾದ ಮುನಿಕೃಷ್ಣಪ್ಪ, ಪುಟ್ಟಮ್ಮ, ವೆಂಕಟೇಶ್ ಮತ್ತು ವಜ್ರಪ್ಪ ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್‌ನಲ್ಲಿ ಏಕಸದಸ್ಯ ಪೀಠ ಭೂಮಾಲೀಕರ ಪರ ತೀರ್ಪು ನೀಡಿತ್ತು. ಅದನ್ನು ಪ್ರಶ್ನಿಸಿ ಬಿಡಿಎ ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಿಭಾಗೀಯ ಪೀಠ 2019ರಲ್ಲಿ ತಿರಸ್ಕರಿಸಿತ್ತು.

ಹೈಕೋರ್ಟ್ ವಿಭಾಗೀಯ ಪೀಠದ ತೀರ್ಮಾನ ಪ್ರಶ್ನಿಸಿ ಬಿಡಿಎ ಸುಪ್ರೀಂ ಕೋರ್ಟ್‌ಗೆ 2021ರಲ್ಲಿ ಅರ್ಜಿ ಸಲ್ಲಿಸಿತ್ತು. ವಿಚಾರಣೆ ಆರಂಭಿಸಿರುವ ಸುಪ್ರೀಂ ಕೋರ್ಟ್, ಹೈಕೋರ್ಟ್ ವಿಭಾಗೀಯ ಪೀಠದ ಆದೇಶಕ್ಕೆ ತಡೆ ನೀಡಿತ್ತು. ಬಳಿಕ ಆ ಜಮೀನಿನಲ್ಲಿ ಫಲಕ ಅಳವಡಿಸಿದ್ದ ಬಿಡಿಎ ಅಧಿಕಾರಿಗಳು, ಭೂಸ್ವಾಧೀನಕ್ಕೆ ಸಂಬಂಧಿಸಿದ ವ್ಯಾಜ್ಯ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಮಾಹಿತಿ ಪ್ರಕಟಿಸಿದ್ದರು.

ನಿವೇಶನ ಸೃಜಿಸಿ ಮಾರಾಟ: ‘ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇರುವಾಗಲೇ ಮುನಿಕೃಷ್ಣಪ್ಪ ಮತ್ತು ಇತರರು ಅಕ್ರಮವಾಗಿ ಜಮೀನು ಮಾರಾಟ ಮಾಡಿದ್ದಾರೆ. ಪ್ರಸಾದ್ ಮತ್ತು ವಸಂತಕುಮಾರ್, ಬಿಡಿಎ ಆ ಜಮೀನನಲ್ಲಿ ‘ಟ್ರಿಂಕೋ ಮನವರ್ತೆ’ ಎಂಬ ಹೆಸರಿನಲ್ಲಿ ಅಕ್ರಮವಾಗಿ ಬಡಾವಣೆ ನಿರ್ಮಿಸಿ ಬಿಡಿಎ ಸ್ವಾಧೀನದಲ್ಲಿದ್ದ ಆಸ್ತಿಯನ್ನು ಸಾರ್ವಜನಿಕರಿಗೆ ಮಾರಾಟ ಮಾಡಿದ್ದಾರೆ’ ಎಂದು ಬಿಡಿಎ ಬನಶಂಕರಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪಿ. ಗಂಗಾಧರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ನಕಲಿ ದಾಖಲೆಗಳ ಬಳಕೆ

‘ಮಾರಾಟ ಮಾಡಿರುವ ಜಮೀನಿನ ಭೂಪರಿವರ್ತನೆ ಆದೇಶವನ್ನು ಬೆಂಗಳೂರು ಉಪ ವಿಭಾಗಾಧಿಕಾರಿ ಕಚೇರಿಯಿಂದ ನೀಡಲಾಗಿತ್ತು ಎಂಬಂತೆ ನಕಲಿ ದಾಖಲೆ ಸೃಷ್ಟಿರುವುದು ದಾಖಲೆಗಳ ತಪಾಸಣೆ ವೇಳೆ ಪತ್ತೆಯಾಗಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿದ ವ್ಯಾಜ್ಯ ನ್ಯಾಯಾಲಯದಲ್ಲಿನ ಇರುವಾಗಲೇ ಬಿಬಿಎಂಪಿಯಲ್ಲಿ ಅರ್ಜಿ ಸಲ್ಲಿಸಿ, ಸುಳ್ಳು ಮಾಹಿತಿ ನೀಡಿ ಖಾತೆ ಪಡೆಯಲಾಗಿದೆ. ಬಿಬಿಎಂಪಿ ಅಧಿಕಾರಿಗಳು ಸರಿಯಾಗಿ ಪರಿಶೀಲನೆ ನಡೆಸದೇ ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡಿರುವುದು ಕಂಡುಬಂದಿದೆ’ ಎಂದು ಬಿಡಿಎ ಮೂಲಗಳು ತಿಳಿಸಿವೆ.

ಕೆರೆ ಒತ್ತುವರಿ ತೆರವಿಗೆ ತಿಂಗಳ ಗಡುವು

ಬೆಂಗಳೂರು: ‘ಸುಬ್ರಹ್ಮಣ್ಯಪುರ ಹಾಗೂ ಬೇಗೂರು ಕೆರೆ ಒತ್ತುವರಿ ಪ್ರದೇಶವನ್ನು 10 ದಿನಗಳ ಒಳಗಾಗಿ ಸಮೀಕ್ಷೆ ನಡೆಸಿ, ಒತ್ತುವರಿದಾರರಿಗೆ ನೋಟಿಸ್ ನೀಡಿ ತೆರವುಗೊಳಿಸಬೇಕು’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ನ್ಯಾಯಪೀಠ ಈ ಹಿಂದಿನ ವಿಚಾರಣೆ ವೇಳೆ ನೀಡಿದ್ದ ನಿರ್ದೇಶನ ದಂತೆ ಸುಬ್ರಹ್ಮಣ್ಯಪುರ ಹಾಗೂ ಬೇಗೂರು ಕೆರೆಗೆ ಸಂಬಂಧಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಲಯದ ಎಕ್ಸಿಕ್ಯೂಟಿವ್ ಎಂಜಿನಿಯರ್‌ಗಳು ಖುದ್ದು ಹಾಜರಿದ್ದರು. ಅಧಿಕಾರಿಗಳ ಕಾರ್ಯವೈಖರಿ ಯನ್ನು ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, 'ಕೆರೆ ಒತ್ತುವರಿ ತೆರವುಗೊಳಿಸುವ ವಿಷಯದಲ್ಲಿ ನೀವು ಕೋರ್ಟ್ ಆದೇಶಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ನಿಮ್ಮನ್ನು ಅಮಾನತುಗೊಳಿಸಲು ಆದೇಶ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿತು.

‘ನೀವು ಕೇಳಿರುವಂತೆ ಮೂರು ತಿಂಗಳು ಸಮಯ ನೀಡಲಾಗದು. ಎಲ್ಲ ಕಾರ್ಯಗಳೂ ಒಂದು ತಿಂಗಳಲ್ಲಿ ಮುಗಿಯಬೇಕು. ಹತ್ತು ದಿನಗಳಲ್ಲಿ ಸಮೀಕ್ಷಾ ಕಾರ್ಯ ಮುಗಿಸಿ. ಅದಕ್ಕೆ ಎಷ್ಟು ತಹಶೀಲ್ದಾರ್, ಸಿಬ್ಬಂದಿ ಹಾಗೂ ಪೊಲೀಸ್ ನೆರವು ಅಗತ್ಯವಿದೆಯೋ ಅಷ್ಟನ್ನು ಸರ್ಕಾರ ಒದಗಿಸಬೇಕು’ ಎಂದು ಆದೇಶಿಸಿತು.

ಇದೇ ವೇಳೆ 'ಬೇಗೂರು ಮತ್ತು ಸುಬ್ರಹ್ಮಣ್ಯಪುರ ಕೆರೆಗಳ ಸುತ್ತ ಪಾದಚಾರಿ ಮಾರ್ಗ ನಿರ್ಮಾಣ ಮಾಡಲಾಗುತ್ತಿದೆ. ಇದರಿಂದ ಕೆರೆಗೆ ಧಕ್ಕೆ ಆಗಲಿದೆ' ಎಂದು ಅರ್ಜಿದಾರರ ಪರ ವಕೀಲರೊಬ್ಬರು ಆರೋಪಿಸಿದರು.

ಇದನ್ನು ತಳ್ಳಿ ಹಾಕಿದ ಬಿಬಿಎಂಪಿ ಪರ ವಕೀಲರು, ‘ಕೆರೆಯ ಸುತ್ತ ಸಂಚಾರ ಮಾದರಿಯ ಪಥವನ್ನು ನಿರ್ಮಾಣ ಮಾಡಲಾಗುತ್ತಿದೆ. ಇದಕ್ಕೆ ಸಿಮೆಂಟ್, ಮರಳು ಬಳಸುತ್ತಿಲ್ಲ. ಕೇವಲ ಕೆರೆಯ ಹೂಳನ್ನು ಸುರಿಯಲಾಗುತ್ತಿದೆ. ಈ ಪಥದಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅವಕಾಶ ಇರುವುದಿಲ್ಲ. ಕೇವಲ ಕೆರೆಗಳ ನಿರ್ವಹಣೆಗಷ್ಟೇ ಇದು ಮೀಸಲಾಗಿರುತ್ತದೆ’ ಎಂದು ಸ್ಪಷ್ಟಪಡಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಭೌತಿಕ ನೆಲೆಗಟ್ಟಿನಲ್ಲಿ ವಚನಗಳ ಅರ್ಥೈಸುವಿಕೆ ಸಲ್ಲದು: ಶಿವಪ್ರಕಾಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶರಣರ ವಚನಗಳಲ್ಲಿನ ಪ್ರತಿ ಅಕ್ಷರದ ಭೌತಿಕ ಅರ್ಥ ಶೋಧಿಸದೆ, ಬೌದ್ಧಿಕ ಭಾವಸೆಲೆಯ ಆಧಾರದ ಮೇಲೆ ಅರ್ಥೈಸಿಕೊಳ್ಳುವ ಪರಿಪಾಟ ಬೆಳೆಸಿಕೊಳ್ಳಬೇಕು ಎಂದು ಸಾಹಿತಿ ಎಚ್.ಎಸ್. ಶಿವಪ್ರಕಾಶ್ ಹೇಳಿದರು.

ದೊಮ್ಮಲೂರಿನ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ (ಬಿಐಸಿ) ಭಾರತೀಯ ಭಕ್ತಿ ಮತ್ತು ಸಿದ್ಧ ಸಂಪ್ರದಾಯಗಳ ಸಂದರ್ಭದಲ್ಲಿ ವಚನಗಳ ಪಾತ್ರ ಕುರಿತು ಬುಧವಾರ ಹಮ್ಮಿಕೊಂಡಿದ್ದ ಸರಣಿ ಉಪನ್ಯಾಸ, ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಕ್ಕ ಮಹಾದೇವಿ ಪ್ರಸ್ತಾಪ ಮಾಡಿರುವ ಕದಳಿ ವನ, ಶರಣರು ಮೇಳೈಸುತ್ತಿದ್ದ ಕಲ್ಯಾಣ, ವೈಷ್ಣವ ಮಾರ್ಗದ ಶ್ರೀಕೃಷ್ಣನ ಬೃಂದಾವನಗಳಿಗೆ ಭೌತಿಕ ಲೇಪನ ಹಚ್ಚುವುದು, ಅವು ಇಂತಹ ಸ್ಥಳಗಳು ಎಂದು ನಂಬಿಕೊಳ್ಳುವುದು ಭಕ್ತಿ ಮಾರ್ಗದ ತಿಳಿವಳಿಕೆಯ ಅರಿವಿಗೆ ತೊಡಕಾಗುತ್ತದೆ. ಅಕ್ಕನ ಕದಳಿ ತೋಟ ಶ್ರೀಗಿರಿಯ ತುತ್ತತುದಿ. ಅದು ತಾನು ನಂಬಿದ ಚನ್ನಮಲ್ಲಿಕಾರ್ಜುನ ದೇವನ ಭಕ್ತಿಯ ಪರಾಕಾಷ್ಠೆಯ ಸಂಕೇತ. ಅಧ್ಯಾತ್ಮವನ್ನು ಭೌತಿಕ ನೆಲೆಗಟ್ಟಿನಲ್ಲಿ ಅರ್ಥೈಸಲು ಸಾಧ್ಯವೇ ಇಲ್ಲ. ಅಕ್ಕನ ಕದಳಿ ಆಂಧ್ರ ಪ್ರದೇಶದಲ್ಲಿದೆ, ಬಿಜ್ಜಳ ಕಲ್ಯಾಣಕ್ಕೆ ಭೇಟಿ ಕೊಟ್ಟಿದ್ದ ಎನ್ನುವ ಅಂಶಗಳಿಗೆ ಐತಿಹಾಸಿಕ ಪುರಾವೆಗಳಿಲ್ಲ ಎಂದರು.



ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಹಮ್ಮಿಕೊಂಡಿದ್ದ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸಾಹಿತಿ ಎಚ್.ಎಸ್. ಶಿವಪ್ರಕಾಶ್

ವಚನಗಳೂ ಸೇರಿ ಎಲ್ಲ ಭಕ್ತಿ ಪಂಥಗಳೂ ಮುಕ್ತಿಯ ಕುರಿತು ವಿಭಿನ್ನ ನಿಲುವುಗಳನ್ನು ವ್ಯಕ್ತಪಡಿಸಿದ್ದರೂ, ಮುಕ್ತಿಯು ಭಕ್ತಿಯ ಜತೆಗೇ ಬೆಸೆದುಕೊಂಡಿದೆ. ಜೈನರಲ್ಲಿನ ಸಲ್ಲೇಖನ ವ್ರತ, ಶರಣರ ಲಿಂಗೈಕ್ಯತ್ವ, ಬೌದ್ಧರ ಪರಿನಿರ್ವಾಣ, ಉಸಿರಿನ ಮೂಲಕವೂ ಕ್ರಿಮಿಗಳು ಮರಣ ಹೊಂದುತ್ತವೆ ಎನ್ನುವುದಕ್ಕಾಗಿ ಕಠಿಣ ನಿಯಮಗಳ ಪಾಲನೆ. ಅಂದು ಮುಕ್ತಿಗಿದ್ದ ಪ್ರಾಮುಖ್ಯ ತೆರೆದಿಡುತ್ತವೆ ಎಂದು ವಿವರಿಸಿದರು.

‘ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು. ನುಡಿದರೆ ಲಿಂಗ ಮೆಚ್ಚಿ ಅಹುದಹುದು ಎನಬೇಕು. ಇಲ್ಲದಿ ದ್ದರೆ ದೇವ ಮೆಚ್ಚನು’ ಎನ್ನುವ ಮೂಲಕ ವಚನಗಳಲ್ಲಿ ನುಡಿದಂತೆ ನಡೆಯುವುದಕ್ಕೆ ಶರಣರು ಹೆಚ್ಚು ಮಹತ್ವ ನೀಡಿದ್ದಾರೆ. ‘ಕಲ್ಲನಾಗರ ಕಂಡರೆ ಹಾಲೆರೆಯುವರು, ದಿಟದ ನಾಗರ ಕಂಡರೆ ಕೊಲ್ಲೆನ್ನುವರು’ ಎನ್ನುವ ಮೂಲಕ ಸಮಾಜದ ಮೌಢ್ಯ ತಿದ್ದುವ ಪ್ರಯತ್ನಗಳನ್ನು ನಡೆಸಿದ್ದಾರೆ ಎಂದರು.

ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನಿರ್ವಹಣೆ ಕಾರ್ಯದ ಕಾರಣ ಜುಲೈ 21ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸ್ಥಳಗಳು: ಎಸ್‌ಎಂವಿಬಿ ರೈಲು ನಿಲ್ದಾಣ, ಜೋಗುಪಾಳ್ಯ ಮುಖ್ಯ ರಸ್ತೆ, ಗೌತಮಪುರ, ಕೇಂಬ್ರಿಡ್ಜ್ ರಸ್ತೆ, ಹಲಸೂರು, ಅಜಂತಾ ಟ್ರಿನಿಟಿ ಸರ್ಕಲ್, ಇಂದಿರಾನಗರ ಮೊದಲ ಹಂತ, ಎಚ್‌ಎಎಲ್ 2ನೇ ಹಂತ, ಆಕಾಶ ನಗರ, ಸಿ.ವಿ. ರಾಮನಗರ, ಸದಾನಂದ ನಗರ, ಕಸ್ತೂರಿ ನಗರ, ಭುವನೇಶ್ವರಿ ನಗರ, ವರ್ತೂರು ರಸ್ತೆ, ಬಾಲಾಜಿ ಬಡಾವಣೆ, ಗಂಗಪ್ಪ ಬಡಾವಣೆ, ಕಸ್ತೂರಿ ನಗರ, ವಿವೇಕಾನಂದ ರಸ್ತೆ, ಶಿವ ದೇವಾಲಯ ರಸ್ತೆ, ಅಯ್ಯಪ್ಪ ದೇವಾಲಯ ರಸ್ತೆ ಸುತ್ತಮುತ್ತ ಪ್ರದೇಶಗಳು.

ನೆಮ್ಮದಿಯ ನಾಳೆಗಾಗಿ ಬದುಕಿದ ಚಿಂತಕ ಜಿ.ರಾಜಶೇಖರ್

• ಹಯವದನ, ಮೂಡುಸಗ್ರಿ

ನುಡಿ ನಮನ

ಉಡುಪಿ: ‘ನೆಮ್ಮದಿಯ ನಾಳೆಗಾಗಿ’ ಬದುಕಿನುದ್ದಕ್ಕೂ ರಾಜೀ ರಹಿತ ಹೋರಾಟಗಳನ್ನು ಮಾಡಿದವರು ಜಿ.ರಾಜಶೇಖರ್. ಸಮಾಜದ ಹಲವು ಸ್ತರಗಳ ಅಸಮಾನತೆ, ಶೋಷಣೆ, ಮೂಢನಂಬಿಕೆಗಳು ಇಂದಲ್ಲ ನಾಳೆ ನಿರ್ಮೂಲನೆಯಾಗಬಹುದು ಎಂಬ ಆಶಯಗಳೊಂದಿಗೆ ವರ್ತಮಾನದ ಬದುಕನ್ನು ಅಪಾಯಕ್ಕೆ ಒಡ್ಡಿಕೊಂಡು ಬದುಕು ಸವೆಸಿದವರು ಜಿ.ರಾ.

ಹೊರನೋಟಕ್ಕೆ ಬಡಕಲಂತೆ ಕಂಡರೂ ಜರ್ಮನಿಯ ತತ್ವಜ್ಞಾನಿ ನೀಟ್ಸೆ ಅವರಂತೆ ದಪ್ಪ ಮೀಸೆ ಬಿಟ್ಟು ಯಾವ, ಯಾರ ಮುಲಾಜಿಗೂ ಒಳಗಾಗದೆ ಹುಲಿಯಂತೆ ಬದುಕಿದರು. ಸತ್ಯ ನುಡಿದರು, ಅದನ್ನೇ ಕೊನೆಯವರೆಗೂ ಬರೆದರು. ವಿಷಯಗಳ ಕುರಿತಾಗಿ ಅವರಲ್ಲಿದ್ದಷ್ಟು ಸ್ಪಷ್ಟತೆ, ಖಚಿತತೆ ಯಾರಲ್ಲೂ ಕಾಣಲಿಲ್ಲ.

ಒಮ್ಮೆ ಕೋಟದ ಶಿವರಾಮ ಕಾರಂತರ ಸಂದರ್ಶನ ಮಾಡುವಾಗ ಖಚಿತ ಹಾಗೂ ಹರಿತವಾದ ಪ್ರಶ್ನೆಗಳ ಮೂಲಕ ಕಾರಂತರನ್ನು ಅಲುಗಾಡಿಸಿ ಬಿಟ್ಟಿದ್ದರು. ‘ಕಾರಂತರು ಮತ್ತು ಕಮ್ಯುನಿಸ್ಟರು’ ಎಂಬ ಶೀರ್ಷಿಕೆಯಲ್ಲಿ ಸಂದರ್ಶನ ಪ್ರಕಟಿಸಿ ಅವರ ನಿಲುವುಗಳನ್ನು ಸ್ಪಷ್ಟವಾಗಿ ದಾಖಲಿಸಿದ್ದರು. ಕನ್ನಡ ಸಾಹಿತ್ಯದಲ್ಲೂ ಅವರದ್ದು ತಳಸ್ಪರ್ಶಿ ಅಧ್ಯಯನ ಜ್ಞಾನ.

ಜಿ.ರಾಜಶೇಖರ್ ಹೋರಾಟಗಳ ಜತೆಗೆ ಜನಪರ ಕಾಳಜಿಯ ಪತ್ರಕರ್ತರೂ ಹೌದು. ಶಾಂತವೇರಿ ಗೋಪಾಲಗೌಡರ ನೇತೃತ್ವದಲ್ಲಿ ಕಾಗೋಡಿನಲ್ಲಿ ಐತಿಹಾಸಿಕ ರೈತ ಚಳವಳಿ ನಡೆದು ಮುಂದೆ, ಉಳುವವನೆ ಹೊಲದೊಡೆಯ ನೀತಿಯ ಒಕ್ಕಲು ಮಸೂದೆ ಜಾರಿಗೆ ಬಂದಾಗ ಸ್ವತಃ ಕಾಗೋಡಿಗೆ ತೆರಳಿ ಸಣ್ಣ ಹಿಡುವಳಿದಾರರನ್ನು ಭೇಟಿಯಾಗಿ ಸುದೀರ್ಘ ಲೇಖನಗಳನ್ನು ಬರೆದರು.

ಅನಂತಮೂರ್ತಿ ಅವರ ಸಂಪಾದಕತ್ವದ ‘ರುಜುವಾತು’ ಪತ್ರಿಕೆಯಲ್ಲಿ ಲೇಖನಗಳು ಪ್ರಕಟವಾದವು. ಹೆಗ್ಗೋಡಿನ ಅಕ್ಷರ ಪ್ರಕಾಶನ ಹಾಗೂ ಅಭಿನವ ಪ್ರಕಾಶನ ಲೇಖನಗಳನ್ನು ಒಟ್ಟುಮಾಡಿ ಪ್ರಕಟಿಸಿದವು. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಅಧ್ಯಯನಕ್ಕೆ ಜಿ.ರಾಜಶೇಖರ್ ಲೇಖನಗಳ ಮಾಲಿಕೆ ಪಠ್ಯವಾದರೆ ಹೆಚ್ಚು ಸೂಕ್ತ.

ತೊಂಬತ್ತರ ದಶಕದಲ್ಲಿ ‘ಸೌಹಾರ್ದ ವೇದಿಕೆ’ಯಲ್ಲಿ ಸಕ್ರಿಯರಾಗಿದ್ದ ಜಿ.ರಾ, ಕೆ.ಎಲ್. ಅಶೋಕ್ ಪ್ರಧಾನ ಕಾರ್ಯದರ್ಶಿತ್ವದ ‘ಕರ್ನಾಟಕ ಕೋಮುಸೌಹಾರ್ದ ವೇದಿಕೆ’ಯ ಶಾಖೆ ಉಡುಪಿಯಲ್ಲಿ ಪ್ರಾರಂಭವಾದಾಗ ಅದರ ಅಧ್ಯಕ್ಷರಾದರು. ದೇಶದ ಯಾವುದೇ ಮೂಲೆಯಲ್ಲಿ ಕೋಮುಗಲಭೆ ನಡೆದರೆ ಉಡುಪಿಯಲ್ಲಿ ಪ್ರತಿಭಟನೆಯ ಕೂಗು ಮೊಳಗುತ್ತಿತ್ತು, ಪ್ರತಿರೋಧ ದಾಖಲಾಗುತ್ತಿತ್ತು.

ಹೋರಾಟಗಳಲ್ಲಿ ಸದಾ ಮುಂಚೂಣಿಯಲ್ಲಿದ್ದುಕೊಂಡು ಕರಪತ್ರಗಳನ್ನು ಖುದ್ದು ಬರೆದು ತರುತ್ತಿದ್ದರು. ಉಡುಪಿಯ ಬಸ್ ನಿಲ್ದಾಣ ಹತ್ತಿರವಿದ್ದ ಕಚೇರಿಯಲ್ಲಿ ಚಿಂತಕ ಫಣಿರಾಜ್ ಜತೆಗೂಡಿ ಕರಪತ್ರಗಳ ಕರಡು ತಿದ್ದುತ್ತಿದ್ದರು. ದಿನಕರ ಬೆಂಗ್ರೆ ಅವರು ಅಚ್ಚು ಹಾಕಿಸುತ್ತಿದ್ದರು.

ನೂರಾರು ಪ್ರತಿಭಟನಾ ಸಭೆಗಳಿಗೆ ರಾಜಶೇಖರ್ ಸ್ವತಃ ಕರಪತ್ರಗಳನ್ನು ಬರೆದಿದ್ದಾರೆ. ಕರ್ನಾಟಕದ ಜನಪರ ಚಳವಳಿಗಳ ಅಧ್ಯಯನಕ್ಕೆ ಅವರ ಕರಪತ್ರಗಳು ಅಮೂಲ್ಯ ದಾಖಲೆಗಳಾಗಬಲ್ಲವು. ಅವುಗಳ ಸಂಗ್ರಹ ಮತ್ತು ಪ್ರಕಟಣೆ ತುರ್ತಾಗಿ ಆಗಬೇಕಾದ ಕೆಲಸ.

ಸಂಘ ಪರಿವಾರದ ಕೋಮು ದ್ವೇಷ ರಾಜಕಾರಣವನ್ನು ಮುಲಾಜಿಲ್ಲದೆ ಖಂಡಿಸುತ್ತಿದ್ದ ಜಿ.ರಾ., ಆದಿ ಉಡುಪಿಯಲ್ಲಿ ಮುಸ್ಲಿಮರನ್ನು ಬೆತ್ತಲುಗೊಳಿಸಿ ದೌರ್ಜನ್ಯ ನಡೆಸಿದಾಗ ನಿಷ್ಠುರವಾಗಿ ಟೀಕಿಸಿ ಹಲವರನ್ನು ಎದುರು ಹಾಕಿಕೊಂಡಿದ್ದರು. ಪ್ರಕರಣದ ವಿಚಾರಣೆ ನಡೆದು ತೀರ್ಪು ಪ್ರಕಟವಾಗುವಾಗ ಎದುರಾಳಿಗಳ ಮಧ್ಯೆಯೇ ಏಕಾಂಗಿಯಾಗಿ ಕೋರ್ಟ್ ಆವರಣದಲ್ಲಿ ನಿಂತ ಗಟ್ಟಿಗ.



ಪಟ್ಟಭಿರಾಮ ಸೋಮಯಾಜಿ, ಹಯವದನ ಮೂಡುಸಗ್ರಿ, ಸಿರಿಲ್ ಮತಾಯಸ್ ಅವರೊಂದಿಗೆ ಜಿ.ರಾಜಶೇಖರ್ (ಎಡದಿಂದ ಎರಡನೆಯವರು)

ಉಡುಪಿಯ ಪ್ರಗತಿಪರರಿಗೆ, ಮುಕ್ತ ಚಿಂತಕರಿಗೆ ಗುರು ಸಮಾನರಾಗಿದ್ದುಕೊಂಡು ಹೋರಾಟಗಳಿಗೆ ಸೈದ್ಧಾಂತಿಕ ಬಲ ತುಂಬುತ್ತಿದ್ದ ಬುದ್ಧಿಜೀವಿಗೆ ಉಡುಪಿಯ ಮುಸ್ಲಿಂ ಒಕ್ಕೂಟ ‘ಮಾನವ ರತ್ನ’ ಪ್ರಶಸ್ತಿ ನೀಡಿ ಗೌರವಿಸಿತ್ತು.

ಉಡುಪಿಯ ಅಜ್ಜರಕಾಡಿನಲ್ಲಿರುವ ಜೀವ ವಿಮಾ ನಿಗಮದ ಮುಖ್ಯ ಕಚೇರಿಯಲ್ಲಿ 35 ವರ್ಷ ನೌಕರರಾಗಿ ದುಡಿದ ಜಿ. ರಾಜಶೇಖರ್ ಆಡಂಬರವಿಲ್ಲದೆ ಸರಳವಾಗಿ ಬದುಕಿದವರು. ಇಸ್ತ್ರಿ ಇಲ್ಲದ ಕಪ್ಪು ಪ್ಯಾಂಟ್ ಹಾಗೂ ಕಪ್ಪು ಚೌಕುಳಿ ಶರ್ಟ್ ಅವರ ನೆಚ್ಚಿನ ವಸ್ತ್ರ. ನೀರಿನ ಬಾಟಲಿ ಇರುವ ಕೈಚೀಲವನ್ನು ಹೆಗಲಿಗೆ ಹಾಕಿಕೊಂಡು ತಿರುಗುತ್ತಿದ್ದ ಜಿ.ರಾಜಶೇಖರ್ ಇನ್ಮುಂದೆ ನೆನಪು ಮಾತ್ರ.

ಜಿ.ರಾಜಶೇಖರ್ ನಿಧನ

ಒಂದನೇ ಪುಟದಿಂದ...

ಪ್ರಮುಖ ಸಾಮಾಜಿಕ ಹೋರಾಟಗಾರರು ಹಾಗೂ ಚಿಂತಕರಾಗಿದ್ದ ಜಿ.ರಾಜಶೇಖರ್ ಜನಪರ ಚಳವಳಿಗಳನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿದ್ದರು. ಕರಾವಳಿಯ ಕೋಮುವಾದದ ವಿರುದ್ಧ ಗಟ್ಟಿಯಾಗಿ ದನಿ ಎತ್ತುತ್ತಿದ್ದರು.

ನೇರ ನಡೆ ನುಡಿಗೆ ಹೆಸರಾಗಿದ್ದ ಅವರು ಜೀವನದುದ್ದಕ್ಕೂ ಸರಳ ವ್ಯಕ್ತಿತ್ವ ಹಾಗೂ ಆಡಂಬರವಿಲ್ಲದ ಜೀವನ ಶೈಲಿ ಪಾಲಿಸಿದವರು.

ಜಿ.ರಾಜಶೇಖರ್ 2019ರಲ್ಲಿ ಬಿದ್ದು ತಲೆಗೆ ಗಂಭೀರ ಪೆಟ್ಟುಬಿದ್ದಿತ್ತು ಪರೀಕ್ಷೆಗೊಳಪಡಿಸಿದಾಗ ಅವರಿಗೆ ಪ್ರೊಗ್ರೆಸಿವ್ ಸುಪ್ರ ನ್ಯೂಕ್ಲಿಯರ್ ಪಾಲ್ಸಿ ಎಂಬ ಅಪರೂಪದ ಪಾರ್ಕಿನ್‌ಸನ್ಸ್ ಕಾಯಿಲೆ ಇರುವುದು ದೃಢಪಟ್ಟಿತ್ತು. ಮಿದುಳಿಗೆ ಸಂಬಂಧಪಟ್ಟ ಕಾಯಿಲೆಯಿಂದ ಬಳಲುತ್ತಿದ್ದ ಅವರು

ಹಂತ ಹಂತವಾಗಿ ನೆನಪಿನ ಶಕ್ತಿ ಕಳೆದುಕೊಂಡಿದ್ದರು. ದೇಹದ ಭಾಗಗಳು ಸ್ವನಿಯಂತ್ರಣ ಕಳೆದುಕೊಂಡಿದ್ದವು.

ಮಾತನಾಡಲು ಹಾಗೂ ನಡೆದಾಡಲು ಸಾಧ್ಯವಾಗದ ಸ್ಥಿತಿ ತಲುಪಿದ ಬಳಿಕ ಸಾರ್ವಜನಿಕ ಸಭೆ, ಹೋರಾಟ ಹಾಗೂ ಪ್ರತಿಭಟನೆಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಿದ್ದರು. ಕೊನೆಗೆ ನಡೆಯಲೂ ಸಾಧ್ಯವಾಗದೆ ಹಾಗೂ ಆಹಾರ ನುಂಗಲಾಗದೆ ದೀರ್ಘ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿ ಕೊನೆಯುಸಿರೆಳೆದರು.

ಕಂದಾಯ ಜಾಗದಲ್ಲಿ ಮನೆ ನಿರ್ಮಿಸಿದ್ದರೂ ಅವಕಾಶ: ಶೀಘ್ರ ಕಾಯ್ದೆ

ಮನೆಗಳ ವಿದ್ಯುತ್ ಸಂಪರ್ಕಕ್ಕೆ ಅಡ್ಡಿ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಮೀನಿಗೆ ಸಂಬಂಧಿಸಿದ ಕಾನೂನುಗಳನ್ನು ಉಲ್ಲಂಘಿಸಿ ಮನೆಗಳನ್ನು ನಿರ್ಮಿಸಿದ್ದರೂ ವಿದ್ಯುತ್ ಸಂಪರ್ಕ ಕಲ್ಪಿಸಲು ಯಾವುದೇ ರೀತಿ ಅಡ್ಡಿ ಮಾಡಬಾರದು. ಅರ್ಜಿ ಸಲ್ಲಿಸುವ ಪ್ರತಿ ಬಡವನ ಮನೆಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಶೀಘ್ರ ಕಾಯ್ದೆ ರೂಪಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ನಗರದಲ್ಲಿ ಬುಧವಾರ ನಡೆದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 53ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಕಂದಾಯ ಜಾಗದಲ್ಲಿ ಮನೆ ನಿರ್ಮಿಸಿದವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬಾರದು ಎನ್ನುವುದು ಹಳೆಯ ಚಿಂತನೆ. ವಿದ್ಯುತ್ ಅಗತ್ಯ ಸೇವೆಯಾಗಿದೆ. ಹೀಗಾಗಿ, ಕೊಳೆಗೇರಿ ಸೇರಿದಂತೆ ಯಾವುದೇ ಜಾಗದಲ್ಲಿ ನಿರ್ಮಿಸಿದ್ದರೂ ಅರ್ಜಿ ಹಾಕಿದವರೆಲ್ಲರಿಗೂ ವಿದ್ಯುತ್ ಸಂಪರ್ಕ ಕಲ್ಪಿಸಬೇಕು' ಎಂದು ಸೂಚಿಸಿದರು.

'ಈ ಬಗ್ಗೆ ಆದೇಶ ಹೊರಡಿಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೂ (ಕೆಇಆರ್‌ಸಿ) ಸೂಚಿಸಲಾಗುವುದು. ಮಾನವೀಯತೆ ದೃಷ್ಟಿಯಿಂದಲೂ ಇದು ಉತ್ತಮ ಕ್ರಮ. ಜಮೀನಿಗೆ ಸಂಬಂಧಿಸಿದ ಕಾನೂನುಗಳು ಉಲ್ಲಂಘನೆಯಾಗಿದ್ದರೆ ಕಂದಾಯ ಇಲಾಖೆ ಪರಿಶೀಲಿಸುತ್ತದೆ' ಎಂದು ತಿಳಿಸಿದರು.

'ವಿದ್ಯುತ್ ಸಂಗ್ರಹ ಯೋಜನೆ (ಪಿಎಸ್‌ಪಿ)ಯನ್ನು ಶರಾವತಿಯಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗುವುದು. ಖಾಸಗಿ ಸಂಸ್ಥೆಗಳು ಸಹ ಪಿಎಸ್‌ಪಿ ಘಟಕಗಳನ್ನು ಸ್ಥಾಪಿಸಬಹುದು. ಈ ಮೂಲಕ ಉತ್ಪಾದನೆಯಾಗಿರುವ ವಿದ್ಯುತ್ ಅನ್ನು ಗರಿಷ್ಠವಾಗಿ ಬಳಸಲಾಗುವುದು' ಅವರು ಎಂದು ಹೇಳಿದರು.

'ಪರಿಶಿಷ್ಟರಿಗೆ 75 ಯೂನಿಟ್‌ಗಳವರೆಗೆ ಉಚಿತವಾಗಿ ವಿದ್ಯುತ್ ನೀಡುವ ಯೋಜನೆ ಮುಂದಿನ ತಿಂಗಳು ಜಾರಿಯಾಗಲಿದೆ. ರೈತರ 10 ಎಚ್‌ಪಿ ಪಂಪ್‌ಸೆಟ್‌ಗಳವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. ಒಟ್ಟಾರೆ ₹14 ಸಾವಿರ ಕೋಟಿ ಸಬ್ಸಿಡಿ ನೀಡಲಾಗುತ್ತಿದೆ. ಎಸ್ಕಾಂಗಳ ಆರ್ಥಿಕ ಸ್ಥಿತಿ ಸುಧಾರಿಸಲು ಸರ್ಕಾರ ನೆರವು ನೀಡುತ್ತಿದೆ. ಕಳೆದ ವರ್ಷ ಐದು ಸಾವಿರ ಕೋಟಿ ರೂಪಾಯಿ ನೀಡಲಾಗಿತ್ತು' ಎಂದು ಹೇಳಿದರು.

'ಎಸ್ಕಾಂಗಳು, ಕೆಪಿಟಿಸಿಎಲ್, ಕೆಪಿಸಿಗಳ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ನಿವೃತ್ತ ಐಎಎಸ್ ಅಧಿಕಾರಿ ಜಿ.ಗುರುಚರಣ್ ಸಮಿತಿ ನೀಡಿರುವ ವರದಿಯನ್ನು ಶುಕ್ರವಾರ ನಡೆಯಲಿರುವ ಸಚಿವ ಸಂಪುಟ ಮುಂದೆ ಮಂಡಿಸಲಾಗುವುದು' ಎಂದು ತಿಳಿಸಿದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಂ.ಎಸ್. ಶ್ರೀಕರ್ ಅವರು ಮಾತನಾಡಿ, 'ಕರ್ನಾಟಕ ವಿದ್ಯುತ್ ನಿಗಮವು ಕಳೆದ ಹಣಕಾಸು ವರ್ಷದಲ್ಲಿ ₹9 ಸಾವಿರ ಕೋಟಿ ವಹಿವಾಟು ನಡೆಸಿ ಲಾಭದ ಹಾದಿಯಲ್ಲಿ ಸಾಗಿದೆ' ಎಂದು ಹೇಳಿದರು.



ನಗರದಲ್ಲಿ ಬುಧವಾರ ಕರ್ನಾಟಕ ವಿದ್ಯುತ್ ನಿಗಮದ 53ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ನಿಗಮದ ನೌಕರರ ಮಕ್ಕಳನ್ನು ಗೌರವಿಸಿದರು. ಇಂಧನ ಸಚಿವ ವಿ. ಸುನೀಲ್ ಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ

'ಸೂಪಾ ಅಣೆಕಟ್ಟು ನಿರ್ಮಿಸಿದ್ದು ಸಾಹಸದ ಕಾರ್ಯ'

ಸೂಪಾ ಅಣೆಕಟ್ಟು ನಿರ್ಮಾಣ ಕಾರ್ಯವನ್ನು ತಾವು ಎಂಜಿನಿಯರಿಂಗ್ ವಿದ್ಯಾರ್ಥಿಯಾಗಿ ಪ್ರತ್ಯಕ್ಷವಾಗಿ ಕಂಡಿದ್ದನ್ನು ವಿವರಿಸಿದ ಮುಖ್ಯಮಂತ್ರಿ ಬೊಮ್ಮಾಯಿ ಅವರು, 'ಈ ಅಣೆಕಟ್ಟಿಗೆ ಅಡಿಪಾಯ ಹಾಕುವುದು ಕಷ್ಟವಾಗಿತ್ತು. ಕೊನೆಗೆ ಮಂಜುಗಡ್ಡೆಗಳನ್ನು ಹಾಕಿ ಅಡಿಪಾಯ ಹಾಕಲಾಯಿತು. ಈ ಅಣೆಕಟ್ಟು ನಿರ್ಮಾಣಕ್ಕೆ ಅಫ್ಗಾನಿಸ್ತಾನದ ಜತೆ ಹಣಕಾಸಿನ ಒಪ್ಪಂದವಾಗಿತ್ತು' ಎಂದು ನೆನಪಿಸಿಕೊಂಡರು. 'ಇದು ಭೌಗೋಳಿಕವಾಗಿಯೂ ಸವಾಲಿನ ಕಾರ್ಯವಾಗಿತ್ತು. ಎಂಜಿನಿಯರಿಂಗ್ ಕೌಶಲದಿಂದ ಈ ಯೋಜನೆಯನ್ನು ಕೈಗೊಳ್ಳಲಾಯಿತು' ಎಂದು ವಿವರಿಸಿದರು.

ಇಂದು ನೀರಿನ ಅದಾಲತ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಜುಲೈ 21ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಸೇರಿ ವಿವಿಧ ಕುಂದುಕೊರತೆಗಳನ್ನು ಪರಿಹರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಗೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ: 8762228888ಗೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ತಿಳಿಸಿದ್ದಾರೆ.

ನೀರಿನ ಸಂಪ್‌ಗೆ ಬಿದ್ದು ಮಗು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಲ್.ಆರ್. ನಗರದ ವಸತಿಗೃಹದಲ್ಲಿ ನೀರಿನ ಸಂಪ್‌ಗೆ ಬಿದ್ದು ನಾಲ್ಕು ವರ್ಷದ ಮಗು ಗುಣ ಮೃತಪಟ್ಟಿದೆ.

ಸ್ಲಂ ಬೋರ್ಡ್ ಕ್ವಾರ್ಟರ್ಸ್‌ನ ಸಿ4 ಬ್ಲಾಕ್‌ನಲ್ಲಿ ತಮಿಳುನಾಡು ಮೂಲದ ಕುಟುಂಬ ನೆಲೆಸಿತ್ತು. ವಿನೋದ್, ನಿರ್ಮಲಾ ದಂಪತಿ ಪುತ್ರ ಗುಣ ಆಟವಾಡುತ್ತಿದ್ದ ವೇಳೆ ಆಯತಪ್ಪಿ ಸಂಪಿನ ಒಳಕ್ಕೆ ಬಿದ್ದು ಈ ಅವಘಡ ಸಂಭವಿಸಿದೆ.

ಶೋಷಿಸುತ್ತಿದ್ದ ಸೋಮಾರಿ ಪತಿಯಿಂದ ಮುಕ್ತಿ ಪಡೆದ ಪತ್ನಿ

ಬೆಂಗಳೂರು: 'ಪತ್ನಿಯ ಆದಾಯದಲ್ಲೇ ಬದುಕಿ, ಆಕೆಯನ್ನು ಭಾವನಾತ್ಮಕವಾಗಿಯೂ ಶೋಷಿಸುವ ಪತಿಯ ನಡತೆ ಮಾನಸಿಕ ಕ್ರೌರ್ಯಕ್ಕೆ ಸಮಾನ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, 'ಸೋಂಬೇರಿ ಗಂಡನಿಂದ ವಿಚ್ಛೇದನ ಬೇಕು' ಎಂದು ಕೋರಿದ್ದ ಪತ್ನಿಯ ಮನವಿಯನ್ನು ಪುರಸ್ಕರಿದೆ.

'ನನ್ನ ಗಂಡ ದುಡಿಮೆಯ ಉಮ್ಮೇದು ಹೊಂದಿಲ್ಲ. ಬದಲಿಗೆ ಗಂಡ ಹಾಗೂ ಅತ್ತೆಯ ಮನೆಯವರು ಆರ್ಥಿಕವಾಗಿ ಶೋಷಿಸುತ್ತಿದ್ದಾರೆ. ಗಂಡನಿಂದ ವಿಚ್ಛೇದನ ಕೊಡಿಸಿ' ಎಂಬ ಮಧ್ಯ ವಯಸ್ಸಿನ ಮಹಿಳೆಯ ಕೋರಿಕೆಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮನ್ನಿಸಿದೆ.

ಈ ಸಂಬಂಧ ಭಾರತೀಯ ವಿಚ್ಛೇದನ ಕಾಯ್ದೆ-1860ರ ಕಲಂ 55(1)ರ ಅಡಿಯಲ್ಲಿ ಪತ್ನಿ ಸಲ್ಲಿಸಿದ್ದ ಮೇಲ್ಮನವಿಯನ್ನು ವಿಚಾರಣೆ ನಡೆಸಿದ ನ್ಯಾಯಪೀಠ, ಕಳೆದ ತಿಂಗಳ 22ರಂದು ತೀರ್ಪು ನೀಡಿದ್ದು, ಕಲಂ 10ರ ಅಡಿಯಲ್ಲಿ ವಿಚ್ಛೇದನ ಡಿಕ್ರಿ ಮಂಜೂರು ಮಾಡಿದೆ.

ಪ್ರಕರಣವೇನು?: ಅರ್ಜಿದಾರ ಮಹಿಳೆ 1999ರ ಮೇ 17ರಂದು ಮದುವೆಯಾಗಿದ್ದರು. 2001ರಲ್ಲಿ ದಂಪತಿಗೆ ಹೆಣ್ಣುಮಗು ಜನಿಸಿತು. ಸಾಲದ ಹೊರೆಯಲ್ಲಿದ್ದ ಪತಿ ಆರ್ಥಿಕವಾಗಿ ಸ್ವಾವಲಂಬಿಯಾಗದ ಕಾರಣ ಅರ್ಜಿದಾರ ಮಹಿಳೆ 2008ರಲ್ಲಿ ಅಬುಧಾಬಿಯಲ್ಲಿ ಬ್ಯಾಂಕೊಂದರಲ್ಲಿ ಕೆಲಸ ಗಿಟ್ಟಿಸಿದರು. ಪತಿಯ ಸಾಲ ತೀರಿಸಲು, ಕೃಷಿ ಜಮೀನು ಖರೀದಿಸಲು ಮತ್ತು ಕಾಲಕಾಲಕ್ಕೆ ಅಗತ್ಯ ಹಣಕಾಸಿನ ನೆರವು ನೀಡುತ್ತಾ ಬಂದಿದ್ದರು.

ಪತಿಯೂ ಅಬುಧಾಬಿಯಲ್ಲೇ ಬಂದು ಜೊತೆಯಲ್ಲೇ ದುಡಿಯುವಂತಾಗಲಿ ಎಂದು ಆಶಿಸಿ 2008ರಲ್ಲಿ ಅವರನ್ನೂ ಅಲ್ಲಿಗೆ ಕರೆಯಿಸಿಕೊಂಡು ಸಲೂನ್ ಆರಂಭಿಸಲು ಸಹಾಯ ಮಾಡಿದ್ದರು. ಆದರೆ, ಪತಿ ಸಲೂನ್ ನಿರ್ವಹಿಸಲು ಆಗದೆ ಒಂದೇ ವರ್ಷದಲ್ಲಿ ಭಾರತಕ್ಕೆ ಮರಳಿದ್ದರು. ಪತಿಯನ್ನು ಸುಧಾರಿಸದಿದ್ದಾಗ ಕಡೆಗೆ 2017ರಲ್ಲಿ ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯದಲ್ಲಿ ದಾವೆ ಹೂಡಿದರು.

ದಾವೆಗೆ ಪತಿ ಸ್ಪಂದಿಸದ ಪರಿಣಾಮ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಏಳನೇ ಹೆಚ್ಚುವರಿ ನ್ಯಾಯಾಲಯ 2018ರ ಜನವರಿ 4ರಂದು ವಿಚ್ಛೇದನ ಮನವಿ ನಿರಾಕರಿಸಿತು. ಪತ್ನಿ ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದರು. ವಿಚಾರಣೆ ನಡೆಸಿದ ನ್ಯಾಯಪೀಠ, 'ಮಾನಸಿಕ ಕ್ರೌರ್ಯ ಎಂಬುದು ಅಪಾಯಕಾರಿಯಾಗಿ ಕಣ್ಣಿಗೆ ಕಾಣುವಂತಿರಲೇಬೇಕು ಎಂದೇನಿಲ್ಲ ಎಂದು ಹೇಳಿದೆ.

ಸುದ್ದಿ 2 ನಿಮಿಷ

ಜಾಮೀನು ಅರ್ಜಿ: ಆದೇಶ ಕಾಯ್ದಿರಿಸಿದ ಹೈಕೋರ್ಟ್

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಏಳು ಜನ ಆರೋಪಿಗಳ ಜಾಮೀನು ಅರ್ಜಿ ವಿಚಾರಣೆಯನ್ನು ಬುಧವಾರ ಪೂರ್ಣಗೊಳಿಸಿದ ಹೈಕೋರ್ಟ್ ಆದೇಶ ಕಾಯ್ದಿರಿಸಿದೆ.

ಆರೋಪಿಗಳಾದ ಸಿ.ಎನ್. ಶಶಿಧರ್, ಆರ್. ಶರತ್ ಕುಮಾರ್, ಎಚ್.ಯು. ರಘುವೀರ್, ಕೆ.ಸಿ. ದಿಲೀಪ್ ಕುಮಾರ್, ಎಚ್.ಆರ್. ಪ್ರವೀಣ್ ಕುಮಾರ್, ಕೆ.ಸೂರ್ಯ ನಾರಾಯಣ್ ಜಾಮೀನು ಕೋರಿದ್ದರೆ, ತಲೆಮರೆಸಿಕೊಂಡಿರುವ ಆರೋಪಿ ಬ್ಯಾಡರಹಳ್ಳಿ ಠಾಣೆಯ ಸಬ್ ಇನ್‌ಸ್ಪೆಕ್ಟರ್ ನವೀನ್ ಪ್ರಸಾದ್ ನಿರೀಕ್ಷಣಾ ಜಾಮೀನು ಕೋರಿ ಪ್ರತ್ಯೇಕ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದಾರೆ.

ಎಲ್ಲ ಅರ್ಜಿದಾರರ ಪರ ವಕೀಲರ ವಾದ ಮತ್ತು ರಾಜ್ಯ ಪ್ರಾಸಿಕ್ಯೂಷನ್ ಪ್ರತಿವಾದವನ್ನು ಆಲಿಸಿದ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶವನ್ನು ಕಾಯ್ದಿರಿಸಿತು.

ಬೆಲೆ ಏರಿಕೆ: ಎಎಪಿ ಪ್ರತಿಭಟನೆ



ಬೆಂಗಳೂರು: ಬಿಜೆಪಿಯ ಡಬಲ್ ಎಂಜಿನ್ ಆಡಳಿತದಲ್ಲಿ ಅಗತ್ಯ ವಸ್ತುಗಳ ಬೆಲೆ ಮತ್ತು ಭ್ರಷ್ಟಾಚಾರ ಡಬಲ್ ಆಗುತ್ತಿದೆ. ಮೊಸರು, ಮಜ್ಜಿಗೆಯಂತಹ ಅಗತ್ಯ ವಸ್ತುಗಳಿಗೂ ಜಿಎಸ್‌ಟಿ ವಿಧಿಸಿ, ಜನರ ಜೇಬಿಗೆ ಕತ್ತರಿ ಹಾಕುವುದೇ ಬಿಜೆಪಿ ಸರ್ಕಾರದ ಉದ್ದೇಶ ಎಂದು ಆಮ್ ಆದ್ಮಿ ಪಕ್ಷ(ಎಎಪಿ) ಆರೋಪಿಸಿದೆ.

ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸಿರುವ ಕೇಂದ್ರ ಸರ್ಕಾರದ ನಡೆಯನ್ನು ಖಂಡಿಸಿ ಎಎಪಿ ಕಾರ್ಯಕರ್ತರು ಬುಧವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಎಎಪಿ ಮುಖಂಡ ಚನ್ನಪ್ಪ ಗೌಡ ನಲ್ಲೂರು ಮಾತನಾಡಿ, 'ಮೊಸರು, ಮಜ್ಜಿಗೆ ಮೇಲಿನ ಜಿಎಸ್‌ಟಿ ತೆರಿಗೆ ಕೇಂದ್ರ ಸರ್ಕಾರ ಕೆಎಂಎಫ್‌ಗೆ ವಾಪಸ್ ನೀಡುತ್ತದೆ ಎಂಬ ಮುಖ್ಯಮಂತ್ರಿಯವರ ಹೇಳಿಕೆ ನಿಜವಾಗಿದ್ದರೆ, ಅವುಗಳ ಬೆಲೆ ಹೆಚ್ಚಾಗಿದ್ದೇಕೆ ಎಂದು ಪ್ರಶ್ನಿಸಿದರು. ಜನರಿಗೆ ತಪ್ಪು ಮಾಹಿತಿ ನೀಡಿದ್ದು ಖಂಡನೀಯ. ಅವರು ರಾಜ್ಯದ ಜನತೆಯ ಕ್ಷಮೆ ಕೇಳಬೇಕು' ಎಂದು ಆಗ್ರಹಿಸಿದರು. ನಗರ ಮಹಿಳಾ ಘಟಕದ ಅಧ್ಯಕ್ಷೆ ಕುಶಲ ಸ್ವಾಮಿ ಮಾತನಾಡಿದರು.

ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ: ಶೇ 39.59ರಷ್ಟು ಉತ್ತೀರ್ಣ

ಬೆಂಗಳೂರು: 'ಎಸ್ಸೆಸ್ಸೆಲ್ಸಿ ಪೂರಕ ಪರೀಕ್ಷೆ ಫಲಿತಾಂಶ ಪ್ರಕಟವಾಗಿದ್ದು, 37,479 ವಿದ್ಯಾರ್ಥಿಗಳು (ಶೇ 39.59) ಉತ್ತೀರ್ಣರಾಗಿದ್ದಾರೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ಪೂರಕ ಪರೀಕ್ಷೆಗೆ 94,669 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದರು. 'ಗುರುವಾರ ಮಧ್ಯಾಹ್ನ 12 ಗಂಟೆಯ ಬಳಿಕ ವೆಬ್‌ಸೈಟ್‌ನಲ್ಲಿ (https://karresults.nic.in/) ಫಲಿತಾಂಶ ವೀಕ್ಷಿಸಬಹುದು. ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿರುವ ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್ ಕಳುಹಿಸಲಾಗುವುದು' ಎಂದೂ ಹೇಳಿದರು.

ಹೆಚ್ಚಿನ ಪೊಲೀಸ್ ಭದ್ರತೆ

ಬೆಂಗಳೂರು: ನಗರದಲ್ಲಿ ಗುರುವಾರ ಕಾಂಗ್ರೆಸ್ ಪ್ರತಿಭಟನೆ ಹಮ್ಮಿಕೊಂಡಿದ್ದು, ಬಿಗಿ ಪೊಲೀಸ್ ಭದ್ರತೆ ಕೈಗೊಳ್ಳಲಾಗಿದೆ. ಐವರು ಎಸಿಪಿ, 15 ಇನ್‌ಸ್ಪೆಕ್ಟರ್, 30 ಪಿ.ಎಸ್.ಐ ಹಾಗೂ ಎಎಸ್‌ಐ, ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್ ಸೇರಿ 600 ಮಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. 5 ಕೆಎಸ್‌ಆರ್‌ಪಿ ತುಕಡಿ ಸಹ ನಿಯೋಜಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	38,058	38,058
ಹಾರಂಗಿ	2,859	2,855.11	3,760	2,800
ಕಬಿನಿ	2284.00	2,284	9,983	13,000
ಹೇಮಾವತಿ	2,922	2,920.10	14,584	15,318
ಲಿಂಗನಮಕ್ಕಿ	1,819	1,796.90	16,868	5,008
ಸೂಪಾ (ಮೀ)	564	540.80	10,983	1,999
ಮಾಣಿ	595	583.32	2,010	-
ತುಂಗಭದ್ರಾ	1,633	1,631.53	1,47,178	1,28,247
ಮಲಪ್ರಭಾ	2079.5	2,067.40	6,181	394
ಘಟಪ್ರಭಾ	2175	2,150.08	11,596	151
ಭದ್ರಾ	186	182.7	15,112	10,413
ಆಲಮಟ್ಟಿ (ಮೀ)	519.6	517.52	1,28,957	83,784
ನಾರಾಯಣಪುರ (ಮೀ)	492.25	491.30	75,000	78,314

* ನೆಲಮಟ್ಟದಿಂದ

ಆಡಳಿತಕ್ಕೆ ಚುರುಕು: ಅಧಿಕಾರಿಗಳಿಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಜೆಟ್‌ನಲ್ಲಿ ಘೋಷಿಸಿದ ಕೆಲವು ಯೋಜನೆಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಇನ್ನೂ ಕೆಲವು ಯೋಜನೆಗಳು ಅನುಮೋದನೆ ನೀಡುವ ಹಂತದಲ್ಲಿವೆ. ಕಾಲಮಿತಿಯಲ್ಲಿ ಯೋಜನೆಗಳ ಅನುಷ್ಠಾನ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಜೊತೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳ ಜಾರಿಗಾಗಿ ಭೂಸ್ವಾಧೀನ ಮತ್ತು ಟೆಂಡರ್ ಪ್ರಕ್ರಿಯೆ ಶೀಘ್ರವಾಗಿ ಆಗಬೇಕು. ಗೊಂದಲಗಳಿದ್ದರೆ, ತಿದ್ದುಪಡಿ ಮಾಡಲು ಅವಕಾಶ ಮಾಡಿಕೊಡಲಾಗಿದೆ. ಕೆಲವು ಬಿಪಿಎಲ್ ಕಾರ್ಡ್‌ಗಳ ಬಗ್ಗೆ ಗೊಂದಲಗಳಿವೆ. ಅಸಲಿ ಮತ್ತು ನಕಲಿ ಕಾರ್ಡ್ ಬಳಕೆ ಆಗುತ್ತಿದ್ದು, ಅವುಗಳನ್ನು ತೆಗೆದು ಹಾಕಲು ಸೂಚಿಸಿದ್ದೇನೆ' ಎಂದರು.

ಕೇಂದ್ರ ವರದಿ: 'ಕೇಂದ್ರ ಸರ್ಕಾರದ ಜನಪರ ಯೋಜನೆಗಳು ರಾಜ್ಯದಲ್ಲಿ ಶೇ 100ರಷ್ಟು ಜಾರಿಯಾಗಿವೆ. ಕೇಂದ್ರದ ಜನಪರ ಯೋಜನೆಗಳ ತಕ್ಷಣ ಜಾರಿಗೆ ಸೂಚಿಸಿ, ವಿಶ್ಲೇಷಣೆ ಮಾಡಿದ್ದೇನೆ. ಪಿಎಂಜೆಎಸ್‌ವೈ, ಸ್ವ-ನಿಧಿ ಯೋಜನೆ ಶೀಘ್ರದಲ್ಲಿ ಜಾರಿಯಾಗಬೇಕು. ರಾಜ್ಯದಲ್ಲಿ ಡ್ರೋನ್ ಸರ್ವೆಗೆ ಹೆಚ್ಚಿನ ಒತ್ತು ನೀಡಲು ಸೂಚಿಸಿದ್ದೇನೆ' ಎಂದೂ ತಿಳಿಸಿದರು.

ಇಲಾಖೆ ಕ್ರಮ: 'ಈಶ್ವರಪ್ಪ ಪ್ರಕರಣದಲ್ಲಿ ಪೊಲೀಸ್ ಇಲಾಖೆಯವರು 'ಬಿ' ರಿಪೋರ್ಟ್ ಹಾಕಿದ್ದಾರೆ. ಅದು ಕೋರ್ಟ್‌ಗೆ ಸಲ್ಲಿಕೆಯಾಗಲಿದೆ' ಎಂದರು.

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಎಚ್.ವೈ. ಮೇಟಿ ಪ್ರಕರಣದಲ್ಲಿ ಎಫ್‌ಐಆರ್ ಹಾಕದೆ 'ಬಿ' ರಿಪೋರ್ಟ್ ಹಾಕಿದ್ದರು. ಅದು ಅವರು ಮೊದಲೇ ತೀರ್ಮಾನ ಮಾಡಿಕೊಂಡಿದ್ದರು. ವಿಡಿಯೋ ಸಾಕ್ಷ್ಯ ಇತ್ತಾದರೂ ಎಫ್‌ಐಆರ್ ಹಾಕಿರಲಿಲ್ಲ ಎನ್ನುವುದು ಡಿ.ಕೆ. ಶಿವಕುಮಾರ್‌ಗೆ ಮರೆತು ಹೋಗಿದೆ' ಎಂದರು.

24ರಂದು ದೆಹಲಿ ಪ್ರವಾಸ– ಬೊಮ್ಮಾಯಿ

'ನೂತನ ರಾಷ್ಟ್ರಪತಿಯ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲು ಇದೇ 24ರಂದು ನವದೆಹಲಿಗೆ ತೆರಳಲಿದ್ದೇನೆ. 25 ಮತ್ತು 26ರಂದು ದೆಹಲಿಯಲ್ಲಿರುತ್ತೇನೆ. ಈ ಸಂದರ್ಭದಲ್ಲಿ ಪಕ್ಷದ ಮುಖಂಡರು ಪ್ರಸ್ತಾಪಿಸಿದರೆ ಸಚಿವ ಸಂಪುಟ ವಿಸ್ತರಣೆ ಕುರಿತು ಸಮಾಲೋಚನೆ ನಡೆಸುತ್ತೇನೆ' ಎಂದು ಮುಖ್ಯಮಂತ್ರಿ ತಿಳಿಸಿದರು. 'ವಿವಿಧ ಇಲಾಖೆಗಳು ಮತ್ತು ಕಸ್ತೂರಿ ರಂಗನ್ ವರದಿ ವಿಚಾರವಾಗಿ ಚರ್ಚಿಸಲು ರಾಜ್ಯದ ಪ್ರತಿನಿಧಿಗಳ ನಿಯೋಗವನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುತ್ತೇನೆ' ಎಂದರು.

ಇಸ್ರೋ ಮಾಜಿ ಅಧ್ಯಕ್ಷ ಡಾ.ಎ.ಎಸ್.ಕಿರಣ್ ಕುಮಾರ್

'ಬಾಹ್ಯಾಕಾಶ ತಲುಪಿದ ವೀಕ್ಷಣಾ ಕುತೂಹಲ'

ಬೆಂಗಳೂರು: 'ನಮ್ಮ ಸುತ್ತಲೂ ನಡೆಯುವ ಘಟನೆಗಳನ್ನು ನಿರಂತರವಾಗಿ ವೀಕ್ಷಿಸುತ್ತಾ ಸಾಗಿದ ಫಲವಾಗಿ ಇಂದು ಮನುಷ್ಯ ಚಂದ್ರನ ಅಂಗಳಕ್ಕೂ ಕಾಲಿಡಲು ಸಾಧ್ಯವಾಗಿದೆ' ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೋ) ಮಾಜಿ ಅಧ್ಯಕ್ಷ ಡಾ.ಎ.ಎಸ್.ಕಿರಣ್ ಕುಮಾರ್ ಬಣ್ಣಿಸಿದರು.

ಜವಾಹರ್‌ಲಾಲ್ ನೆಹರು ತಾರಾಲಯ ಬುಧವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಚಂದ್ರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'400ರಿಂದ 700 ಮೀಟರ್ ದೂರದಲ್ಲಿನ ನಮ್ಮ ಸುತ್ತಮುತ್ತಲ ವಿದ್ಯಮಾನಗಳು ದೃಷ್ಟಿಗೆ ನಿಲುಕುತ್ತವೆ. ಚಿಕ್ಕ ದೃಷ್ಟಿಗೆ ಹಲವು ಸಂಗತಿಗಳು ಗೋಚರಿಸಿವೆ. ನೋಟ ವಿಸ್ತರಿಸಲು ಉಪಕರಣಗಳ ಮೊರೆಹೋದ ಫಲವಾಗಿ ಆಕಾಶ ಕಾಯಗಳನ್ನೂ ವೀಕ್ಷಿಸಲು ಸಾಧ್ಯವಾಯಿತು. ವೇಗವಾಗಿ ಸಾಗಲು ಕುದುರೆ ಬಳಸಿದ್ದ ನಾವು ಇಂದು ರಾಕೆಟ್ ಮೂಲಕ ಬಾಹ್ಯಾಕಾಶವನ್ನೂ ಮುಟ್ಟಿದ್ದೇವೆ. ಚಂದ್ರನ ಅಂಗಳದಲ್ಲಿ ಮನುಷ್ಯ ಹೆಜ್ಜೆ ಇಟ್ಟಿದ್ದು ಬಾಹ್ಯಾಕಾಶದ ಅನನ್ಯ ಕ್ಷಣ. 1969ರ ಆ ದಿನದ ನೆನಪಿಗಾಗಿ ಈ ವರ್ಷದಿಂದ ಅಂತರರಾಷ್ಟ್ರೀಯ ಚಂದ್ರ ದಿನ ಆಚರಿಸಲಾಗುತ್ತಿದೆ' ಎಂದು ವಿವರಿಸಿದರು.

'ಕೃತಕ ಬುದ್ಧಿಮತ್ತೆ ಇಂದಿನ ಮಹತ್ವದ ಮೈಲುಗಲ್ಲು. ತನ್ನಂತೆ ಯೋಚಿಸುವ, ಯೋಜನೆ ರೂಪಿಸುವ ರೋಬೋಗಳನ್ನು ಸೃಷ್ಟಿಸಿರುವುದು ಭವಿಷ್ಯದಲ್ಲಿ ಅನ್ಯ ಗ್ರಹಗಳಲ್ಲೂ ವಾಸಿಸುವ ಕನಸಿಗೆ ಮತ್ತಷ್ಟು ರೆಕ್ಕೆ ಮೂಡಿಸಿದೆ. ಮುಂದಿನ 100 ವರ್ಷಗಳ ಅವಧಿಯಲ್ಲಿ ಕನಸು ನನಸಾಗಬಹುದು. ವಿಶ್ವದ ಜನಸಂಖ್ಯೆ ಹೆಚ್ಚಳ, ಆಹಾರೋತ್ಪಾದನೆಯ ಸಮಸ್ಯೆಗಳಿಗೂ ಪರಿಹಾರ ದೊರಕಬಹುದು' ಎಂದು ಆಶಿಸಿದರು.

'ಚಟುವಟಿಕೆಗಳಲ್ಲಿ ಚಂದ್ರ' ಕುರಿತು ತಾರಾಲಯದ ಅಧಿಕಾರಿ ಬಿ.ಆರ್. ಲಕ್ಷ್ಮಿ, 'ಚಂದ್ರನ ಅಂಗಳದಲ್ಲಿ' ವಿಷಯ ಕುರಿತು ಎಚ್.ಆರ್.ಮಧುಸೂದನ್, 'ಚಂದ್ರನೊಂದಿಗೆ ಒಂದು ಪಯಣ' ಕುರಿತು ಡಾ.ತೀರ್ಥ ಪ್ರತಿಮ್ ದಾಸ್ ಉಪನ್ಯಾಸ ನೀಡಿದರು. ಇಸ್ರೋ ವಿಜ್ಞಾನ ಕಾರ್ಯಕ್ರಮಗಳ ಕಾರ್ಯಾಲಯದ ನಿರ್ದೇಶಕ ಸುಧೀರ್ ಕುಮಾರ್ ಉಪಸ್ಥಿತರಿದ್ದರು.



ತಾರಾಲಯದಲ್ಲಿ ಚಂದ್ರನ ಪರಿಭ್ರಮಣದ ಕುರಿತು ಶಾಲಾ ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ನೀಡಿದ ವೈಜ್ಞಾನಿಕ ಅಧಿಕಾರಿ ಬಿ.ಆರ್.ಲಕ್ಷ್ಮಿ.

ಬಿಬಿಎಂಪಿ ಶಾಲೆಗಳಲ್ಲಿ ಹೆಚ್ಚಾದ ವಿದ್ಯಾರ್ಥಿಗಳು; ಮೂಲಸೌಕರ್ಯಕ್ಕೆ ಸಿಕ್ಕಿಲ್ಲ ಆದ್ಯತೆ

ಶಿಕ್ಷಣಕ್ಕೆ 'ಅಮೃತ': ಎಷ್ಟೊಂದು ಜುಗ್ಗತನ!

• ಆರ್. ಮಂಜುನಾಥ್



ಕೆಂಪೇಗೌಡನಗರದಲ್ಲಿರುವ ಬಿಬಿಎಂಪಿಯ ಬಾಲಕಿಯರ ಪ್ರೌಢಶಾಲೆಯ ಸ್ಥಿತಿ –ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌ಜಿ

ಬೆಂಗಳೂರು: 'ಯಾವ ಮಕ್ಕಳೂ ಶಿಕ್ಷಣದಿಂದ ವಂಚಿತರಾಗಬಾರದು. ಪ್ರತಿ ಮಗುವಿಗೂ ಕಡ್ಡಾಯವಾಗಿ ಶಿಕ್ಷಣ ದೊರೆಯಲೇಬೇಕು' ಎಂದು ಜನಪ್ರತಿನಿಧಿಗಳು ಯಾವಾಗಲೂ ಹೇಳುತ್ತಲೇ ಇರುತ್ತಾರೆ. ಆದರೆ, ಬಿಬಿಎಂಪಿ ಶಾಲೆಗಳಿಗೆ ಅಗತ್ಯವಾಗಿರುವ ಮೂಲಸೌಕರ್ಯ ಒದಗಿಸಲು ಮಾತ್ರ ಇವರು ಮುಂದಾಗುತ್ತಿಲ್ಲ.

ಅಮೃತ ನಗರೋತ್ಥಾನ ಯೋಜನೆಯಲ್ಲಿ ₹6 ಸಾವಿರ ಕೋಟಿ ಅನುಮೋದನೆಯಾಗಿದೆ. ರಸ್ತೆ, ಚರಂಡಿ, ಫ್ಲೈಓವರ್, ಕಸ ಎಂದೆಲ್ಲ ನೂರಾರು ಕೋಟಿ ಬಿಡುಗಡೆ ಮಾಡಿಸಿಕೊಂಡಿರುವ ಶಾಸಕರು, ಶಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಆಸಕ್ತಿ ತೋರಿಲ್ಲ. ಹೀಗಾಗಿಯೇ, ಶಾಲೆಗಳ ಅಭಿವೃದ್ಧಿ ಹಾಗೂ ಹೊಸ ಕಟ್ಟಡ ನಿರ್ಮಾಣಕ್ಕೆ ಸಿಕ್ಕಿರುವುದು ₹180 ಕೋಟಿ.

ಒಂದನೇ ತರಗತಿಯಿಂದ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಸುಮಾರು 25 ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 2021–22ನೇ ಸಾಲಿಗಿಂತ 2022–2023ನೇ ಸಾಲಿನಲ್ಲಿ ಸುಮಾರು 6 ಸಾವಿರ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ. ಆದರೆ, ಪೀಠೋಪಕರಣ ಇಲ್ಲ, ಪ್ರಯೋಗಾಲಯಗಳಿಲ್ಲ. ಕಟ್ಟಡ ಸೋರುತ್ತಿದೆ, ಶೌಚಾಲಯ ಇಲ್ಲ. ಇದನ್ನು ತುರ್ತಾಗಿ ಒದಗಿಸಲು ಮುಖ್ಯಮಂತ್ರಿ ಸೇರಿದಂತೆ ಯಾವ ಶಾಸಕರೂ ಹೆಚ್ಚು ಒತ್ತು ನೀಡಿಲ್ಲ ಎಂಬ ಆರೋಪ ವ್ಯಕ್ತವಾಗಿದೆ.

ಕೋವಿಡ್‌ಗಿಂತ ಮುಂಚಿನ ಸಮಯಕ್ಕೆ ಹೋಲಿಸಿದರೆ ಬಿಬಿಎಂಪಿ ಶಾಲೆ-ಕಾಲೇಜುಗಳಲ್ಲಿ ಈಗ ಸುಮಾರು 10 ಸಾವಿರ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ. ಆದರೆ, ಸೌಲಭ್ಯಗಳನ್ನು ನೀಡಲು ಇಲ್ಲಿ ಹಣವಿಲ್ಲ. ಪರಿಣತ ಬೋಧನಾ ಸಿಬ್ಬಂದಿಗೆ ವೇತನ ನೀಡುವ ಆರ್ಥಿಕ ಶಕ್ತಿ ಕೂಡ ಬಿಬಿಎಂಪಿ ಶಿಕ್ಷಣ ಇಲಾಖೆಗೆ ಇಲ್ಲ.

₹103 ಕೋಟಿ: ಅಮೃತ ನಗರೋತ್ಥಾನ ಯೋಜನೆಯಲ್ಲಿ 75 ಶಾಲೆಗಳಲ್ಲಿ ಸಿವಿಲ್ ಕಾಮಗಾರಿಗಳಿಗೆ ₹88 ಕೋಟಿ ಅನುಮೋದನೆ ನೀಡಲಾಗಿದೆ. ಪೀಠೋಪಕರಣ ಹಾಗೂ ಇತರ ವ್ಯವಸ್ಥೆಗೆ ₹15 ಕೋಟಿ ದೊರೆತಿದೆ. ಆದರೆ ಈ ಶಾಲೆಗಳು ಹೈಟೆಕ್ ಶಾಲೆಗಳಿಗೆ ಸ್ಪರ್ಧೆ ನೀಡಬೇಕಾದರೆ ಈ ಮೊತ್ತ ಏನೇನೂ ಸಾಲದು ಎನ್ನುವುದು ಶಿಕ್ಷಣ ತಜ್ಞರ ಅಭಿಪ್ರಾಯ.

₹77 ಕೋಟಿ: ಬಿಬಿಎಂಪಿ ಹೊಸ ಪ್ರದೇಶಗಳಲ್ಲಿ 11 ಹೊಸ ಶಾಲೆ ಗಳನ್ನು ಪ್ರಾರಂಭಿಸಲೂ ಅಮೃತ ನಗರೋತ್ಥಾನದಲ್ಲಿ ಅನುಮೋದನೆ ನೀಡಲಾಗಿದೆ. 10 ಶಾಲೆಗಳನ್ನು ತಲಾ ₹7 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ. ಶೆಟ್ಟಿಹಳ್ಳಿಯಲ್ಲಿ ಹೊಸ ಶಾಲೆ ನಿರ್ಮಾಣಕ್ಕೆ ₹9 ಕೋಟಿ ಮೀಸಲಾಗಿದೆ. ಒಟ್ಟಾರೆ ₹72 ಕೋಟಿ ಸಿವಿಲ್ ಕಾಮಗಾರಿ ಹಾಗೂ ₹5 ಕೋಟಿ ಪೀಠೋಪಕರಣ, ಇತರ ವೆಚ್ಚಗಳಿಗೆ ಮೀಸಲಾಗಿದೆ.

'ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಬೇಕು, ಎಲ್ಲರೂ ಕಲಿಯಬೇಕು' ಎಂದೆಲ್ಲ ಭಾಷಣ ಮಾಡುವವರು, ಶಾಲೆಗಳಲ್ಲಿ ಅಂತಹ ವಾತಾವರಣವನ್ನು ಕಲ್ಪಿಸಬೇಕಾಗಿದೆ. ಶಾಲೆ ಪ್ರವೇಶದಲ್ಲೇ ಕೊಳಕು ನಾರುತ್ತಿರುತ್ತದೆ. ಅದನ್ನು ಶುಚಿಗೊಳಿಸಲೂ ಸಿಬ್ಬಂದಿ ಇರುವುದಿಲ್ಲ. ಪೀಠೋಪಕರಣ ಮುರಿದಿವೆ. ಪ್ರಯೋಗಾಲಯಗಳಿಲ್ಲದೆ ವಿದ್ಯಾರ್ಥಿಗಳಿಗೆ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕೆಲವು ಶಾಲೆಗಳಲ್ಲಿ ಶೌಚಾಲಯವೇ ಇಲ್ಲ. ಕಟ್ಟಡಗಳು ಸೋರುತ್ತಿವೆ. ಗೋಡೆಗಳು ಪಾಚಿ ಕಟ್ಟಿವೆ. ಇದಕ್ಕೆಲ್ಲ ಜನಪ್ರತಿನಿಧಿಗಳು ಹಣ ಒದಗಿಸಬೇಕು. ರಸ್ತೆ, ಡಾಂಬರು, ಮೇಲ್ಸೇತುವೆಯಷ್ಟೇ ಅಲ್ಲ ಅಭಿವೃದ್ಧಿ ಅಲ್ಲ' ಎಂದು ಶಿಕ್ಷಣ ತಜ್ಞರೊಬ್ಬರು ಅಭಿಪ್ರಾಯಪಟ್ಟರು.



ಬಿಬಿಎಂಪಿ ಎಲ್ಲಿಗೆ ಎಷ್ಟು 'ಅಮೃತ'?

ಕೌಶಲ ಅಗತ್ಯ

ಮಕ್ಕಳಿಗೆ ಶಿಕ್ಷಣ ನೀಡುವಾಗ ಅವರಿಗೆ ಅಗತ್ಯವಾದ ಮೂಲಸೌಕರ್ಯಗಳಿರಬೇಕು. ಕೂರದಂತಹ ಜಾಗದಲ್ಲಿ ಬೋಧಿಸಿದರೆ ಅವರಿಗೆ ಏನು ಅರ್ಥವಾಗುತ್ತದೆ? ನಾನು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷನಾಗಿದ್ದಾಗ ಅತಿಥಿ ಶಿಕ್ಷಕರಿಂದ ಬೋಧನೆಗೆ ಅವಕಾಶ ಮಾಡಿಕೊಡಲಾಗಿತ್ತು. ಕಂಪ್ಯೂಟರ್ ಇದ್ದರಷ್ಟೆ ಸಾಲದು, ಅದನ್ನು ಮಕ್ಕಳಿಗೆ ಕಲಿಸುವ ಕೌಶಲಯುತ ಶಿಕ್ಷಕರು ಅಗತ್ಯ.

ಬಿ.ವಿ. ಗಣೇಶ್, ಬಿಬಿಎಂಪಿ ಮಾಜಿ ಸದಸ್ಯ

ಎಲ್ಲೆಲ್ಲಿ ಕಾಮಗಾರಿ, ಎಷ್ಟು ವೆಚ್ಚ?

ವಲಯ	ಸಿವಿಲ್ ಕಾಮಗಾರಿ	ಪೀಠೋಪಕರಣ
	(₹ ಕೋಟಿಗಳಲ್ಲಿ)	
ಪೂರ್ವ	48.70	8.4
ಪಶ್ಚಿಮ	27.5	3.6
ದಕ್ಷಿಣ	3.8	1.9
ಆರ್.ಆರ್. ನಗರ	8	1.1
ಹೊಸ ಶಾಲೆಗಳು		
ದಾಸರಹಳ್ಳಿ, ಬೊಮ್ಮನಹಳ್ಳಿ, ಕೆ.ಆರ್.ಪುರ, ಆರ್.ಆರ್. ನಗರ, ಬ್ಯಾಟರಾಯನಪುರ	72	5

ಎಲ್ಲೆಲ್ಲಿ ಹೊಸ ಶಾಲೆಗಳು?

ಶೆಟ್ಟಿಹಳ್ಳಿ, ಅರಕೆರೆ, ವಿಜ್ಞಾನಪುರ, ರಘುವನಹಳ್ಳಿ, ಲಗ್ಗೆರೆ, ಕೆಂಗೇರಿ, ಉಲ್ಲಾಳ, ಥಣಿಸಂದ್ರ, ಅಗ್ರಹಾರ, ಕಟ್ಟಿಗೇನಹಳ್ಳಿ, ಬಾಗಲೂರು ಕ್ರಾಸ್.

ನಮ್ಮನ್ನು ಮರೆತಂತಿದೆ...

'ನಾವು ವೋಟ್ ಹಾಕುವುದಿಲ್ಲ ಎಂದು ನಮ್ಮನ್ನು ಶಾಸಕರು ಮರೆತಂತೆ ಕಾಣುತ್ತದೆ. ಆದರೆ, ಇನ್ನು ಮೂರ್ನಾಲ್ಕು ವರ್ಷಗಳಲ್ಲಿ ನಮಗೆ ಮತದಾನದ ಹಕ್ಕು ಬರುತ್ತದೆ. ಆಗ ನೋಡಿಕೊಳ್ಳುತ್ತೇವೆ. ಹೈಸ್ಕೂಲ್‌ನಲ್ಲಿ ನಮಗೆ ಪ್ರಯೋಗಾಲಯ ಇಲ್ಲ. ನಮ್ಮ ಸ್ನೇಹಿತರು ಕಾಲೇಜಿನಲ್ಲಿದ್ದಾರೆ. ಅವರಿಗೂ ಸೌಲಭ್ಯಗಳಿಲ್ಲ. ಆರ್ಥಿಕವಾಗಿ ಹಿಂದುಳಿದವರಿಗೆ ಎಲ್ಲ ರೀತಿಯ ಸೌಲಭ್ಯ, ಶಿಕ್ಷಣ ನೀಡುತ್ತೇವೆ ಎನ್ನುತ್ತಾರೆ. ಇದೇನಾ ಇವರು ನೀಡುವ ಸೌಲಭ್ಯ' ಎಂಬುದು ಪ್ರೌಢಶಾಲೆಯಲ್ಲಿ ಕಲಿಯುತ್ತಿರುವ ಸೌಮ್ಯಾ, ಮಂಗಳ, ರಮೇಶ್ ಅವರ ಪ್ರಶ್ನೆ.

ರಂಗಶಂಕರದಲ್ಲಿ ತಿಂಗಳಿಡೀ ಪ್ರದರ್ಶನಕ್ಕೆ ನಾಸೀರುದ್ದೀನ್ ಶಾಗೆ ಅವಕಾಶ: ಪ್ರಸನ್ನ ಆಕ್ಷೇಪ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ 'ರಂಗಶಂಕರ' ರಂಗಮಂದಿರದಲ್ಲಿ ತಿಂಗಳಿಡೀ ಪ್ರದರ್ಶನ ನಡೆಸಲು ಬಾಲಿವುಡ್ ನಟ ಹಾಗೂ ರಂಗಕರ್ಮಿ ನಾಸೀರುದ್ದೀನ್ ಶಾ ಅವರಿಗೆ ಅವಕಾಶ ಕೊಟ್ಟಿರುವುದಕ್ಕೆ ರಂಗಕರ್ಮಿ ಪ್ರಸನ್ನ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ರಂಗಶಂಕರದ ಅರುಂಧತಿ ನಾಗ್ ಅವರಿಗೆ ಪತ್ರ ಬರೆದಿರುವ ಅವರು, 'ನಾವು (ನವೋದಯ ನಾಟಕ ತಂಡ) 'ಅಯೋಧ್ಯಾ ಕಾಂಡ' ನಾಟಕವನ್ನು ಪ್ರದರ್ಶಿಸಲೆಂದು ಸೆ.10ರಂದು ರಂಗಶಂಕರ ರಂಗಮಂದಿರ ಕಾಯ್ದಿರಿಸಿದ್ದೆವು. ಆದರೆ, ಅಲ್ಲಿ ನಾಟಕ ಪ್ರದರ್ಶಿಸದಿರಲು ನಿರ್ಧರಿಸಿದ್ದೇವೆ. ಪ್ರತಿಭಟನೆಯ ರೂಪದಲ್ಲಿ ಈ ತೀರ್ಮಾನ ಕೈಗೊಂಡಿದ್ದೇವೆ' ಎಂದು ತಿಳಿಸಿದ್ದಾರೆ.

'ರಂಗಶಂಕರವು ಬೆಂಗಳೂರಿನ ಪ್ರತಿಷ್ಠಿತ ರಂಗಸ್ಥಳ. ಅದೊಂದು ಲಾಂಛನ. ಅದರ ಒತ್ತಾಸೆಯು ರಂಗಕರ್ಮಿಗಳಿಗೆ ಸಿಕ್ಕಬೇಕಲ್ಲವೇ? ನಾಸೀರುದ್ದೀನ್ ಶಾ ಒಳ್ಳೆಯ ಕಲಾವಿದರು ಮತ್ತು ದೊಡ್ಡ ಚಲನಚಿತ್ರರೂ ಹೌದು. ಅವರ ಬಗ್ಗೆ ಗೌರವವಿದೆ. ಆದರೆ, ಅವರು ರಂಗಭೂಮಿಯ ಲಾಂಛನ ಹೇಗಾದಾರು? ಎಲ್ಲ ಸಂಪ್ರದಾಯಗಳನ್ನೂ ಮುರಿದು, ಇಡೀ ತಿಂಗಳು ರಂಗಶಂಕರದಲ್ಲಿ ಅವರಿಗೆ ಪ್ರದರ್ಶನಗಳನ್ನು ಏರ್ಪಡಿಸಲು ಬಿಟ್ಟರೆ, ರಂಗಭೂಮಿಗೆ ಈಗ ಬಡಿದಿರುವ ಶಾಪವು ನಿವಾರಣೆ ಆಗಬಲ್ಲುದೆ?' ಎಂದು ಕೇಳಿದ್ದಾರೆ.

'ರಂಗಭೂಮಿಗೆ ಬಡಿದಿರುವ ಶಾಪವಾದರೂ ಯಾವುದು? ಚಲನಚಿತ್ರ, ಧಾರಾವಾಹಿ ಇತ್ಯಾದಿ ವರ್ಚುವಲ್ ರಂಗಭೂಮಿಯೇ ತಾನೆ? ಇಂದಿನ ಪರಿಸ್ಥಿತಿ ಅದೆಷ್ಟು ಗಂಭೀರವಾಗಿದೆ ಎಂದರೆ, ನಟರನ್ನು ಬಿಡಿ, ರಂಗದ ಹಿಂದಿನ ಕಲಾವಿದರೂ ತಮ್ಮ ಜೀವನ ನಿರ್ವಹಣೆಯ ಸಲುವಾಗಿ ಚಲನಚಿತ್ರ, ಧಾರಾವಾಹಿಗಳಿಗೆ ತೆರಳಿ ದಿನಗೂಲಿ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿಲ್ಲವೇ? ಇಡೀ ರಾಜ್ಯದ ಎಲ್ಲ ಊರುಗಳ ಎಲ್ಲ ರಂಗಚಟುವಟಿಕೆಗಳೂ ನೆಲ ಕಚ್ಚಿ ಕುಳಿತಿದೆಯಲ್ಲವೇ? ರಂಗಭೂಮಿ, ರಂಗ ನಟನೆ, ರಂಗ ನಿರ್ದೇಶನ, ನಾಟಕ ರಚನೆ ಎಲ್ಲವೂ ಮೂಲೆಗುಂಪಾಗಿರುವ ಇಂದಿನ ಸಂದರ್ಭದಲ್ಲಿ ಒಬ್ಬ ಚಲನಚಿತ್ರ ನಟನ ಪ್ರದರ್ಶಗಳನ್ನು ಎತ್ತಿ ಮೆರೆಸುವುದು ಸರಿ ಕಾಣುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಎಲ್ಲರಂತೆ ಅವರೂ ಒಂದು ದಿನ ನಾಟಕ ಪ್ರದರ್ಶಿಸಬಹುದಿತ್ತು. ಸಾಮಾನ್ಯ ರಂಗಕರ್ಮಿಗಳು ರಂಗಶಂಕರಕ್ಕೆ ಕಿವಿ ಹಿಂಡುವ ಕೆಲಸ ಮಾಡಲಾರರು. ಇರುವ ಒಂದು ರಂಗಮಂದಿರದ ಬಾಗಿಲು ಕೂಡ ಬಂದಾದರೆ ಎಂಬ ಆತಂಕವಿರುತ್ತದೆ. ನಾನು ಸಾಕಷ್ಟು ನಾಟಕ ಮಾಡಿಸಿದ್ದೇನೆ. ಒಂದು ಪ್ರದರ್ಶನ ನಿಂತರೆ ನನಗಾಗಲೀ-ತಂಡಕ್ಕಾಗಲೀ ಅಂತಹ ವ್ಯತ್ಯಾಸವಾಗುವುದಿಲ್ಲ. ಹಾಗಾಗಿ, ರಂಗಶಂಕರದ ಬಗ್ಗೆ ಪ್ರೀತಿ ಉಳಿಸಿಕೊಂಡೇ ಪ್ರತಿಭಟನೆ ದಾಖಲಿಸುತ್ತಿದ್ದೇನೆ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಬಿ.ಎಲ್.ವೇಣುಗೆ 3ನೇ ಬೆದರಿಕೆ ಪತ್ರ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಾದಂಬರಿಕಾರ ಬಿ.ಎಲ್. ವೇಣು ಅವರಿಗೆ ಅನಾಮಧೇಯರಿಂದ ಮೂರನೇ ಪತ್ರ ಬಂದಿದ್ದು, 'ಸಾವರ್ಕರ್ ಬಗ್ಗೆ ನೀಡಿದ ಹೇಳಿಕೆಗೆ ಇನ್ನೂ ಕ್ಷಮೆ ಕೇಳಿಲ್ಲವಲ್ಲ' ಎಂದು ಬೆದರಿಕೆ ಧಾಟಿಯಲ್ಲಿ ಪ್ರಶ್ನಿಸಲಾಗಿದೆ.

ಕೈಬರಹದ ಪತ್ರದಲ್ಲಿ 'ಸಹಿಷ್ಣು ಹಿಂದೂ' ಎಂದಷ್ಟೇ ಉಲ್ಲೇಖಿಸಲಾಗಿದೆ. 'ಹಿಂದೂಗಳಿಗೆ ನೀತಿಪಾಠ ಹೇಳುವ ಅಗತ್ಯವಿಲ್ಲ. ಭಾರತವನ್ನು ಇಸ್ಲಾಂ ರಾಷ್ಟ್ರ ಮಾಡಲು ಹೊರಟಿರುವ ಎಸ್‌ಡಿಪಿಐ, ಪಿಎಫ್‌ಐನಂತಹ ಸಂಘಟನೆಗಳಿಗೆ ಬುದ್ಧಿ ಹೇಳಿ' ಎಂದೂ ಪತ್ರದಲ್ಲಿ ಸೂಚಿಸಲಾಗಿದೆ.

'ಭಗವದ್ಗೀತೆಯನ್ನು ಪಠ್ಯದಲ್ಲಿ ಸೇರಿಸದಂತೆ ಸರ್ಕಾರಕ್ಕೆ ಪತ್ರ ಬರೆದ 61 ಕಿಡಿಗೇಡಿ ಸಾಹಿತಿಗಳು ನೀವು. ಸಂವಿಧಾನ ರಕ್ಷಣೆ ಹಾಗೂ ಬಹುತ್ವದ ಹೆಸರಿನಲ್ಲಿ ನಕಲಿ ಹೋರಾಟ ನಡೆಸುತ್ತಿದ್ದೀರಿ. ಸಂವಿಧಾನ, ರಾಷ್ಟ್ರಧ್ವಜ ಹಾಗೂ ಅಂಬೇಡ್ಕರ್ ಅವರನ್ನು ಗುರಾಣಿಯಂತೆ ಬಳಸಿಕೊಳ್ಳುವ ಇಸ್ಲಾಮಿಕ್ ಭಯೋತ್ಪಾದಕರ ಸಂಚನ್ನು ಬಿಹಾರದ ಪೊಲೀಸರು ಬಯಲುಗೊಳಿಸಿದ್ದಾರೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

23, 24ರಂದು ಬಂಡಾಯ ಸಾಹಿತ್ಯ ಸಮ್ಮೇಳನ

ದಾವಣಗೆರೆ: ಬಂಡಾಯ ಸಾಹಿತ್ಯ ಸಂಘಟನೆಯು ಇದೇ 23 ಹಾಗೂ 24ರಂದು ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ಆಯೋಜಿಸಿದೆ.

ಚಿಂತಕ ಡಾ.ಜಿ.ರಾಮಕೃಷ್ಣ ಸಮ್ಮೇಳನ ಉದ್ಘಾಟಿಸಲಿದ್ದು, ಸಾಹಿತಿ ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆ ವಹಿಸುವರು.

ಮುದ್ರಣ ಕಾಗದಕ್ಕೆ ಶೇ 18 ಜಿಎಸ್‌ಟಿ: ಕೈಬಿಡಲು ಆಗ್ರಹ

ಬೆಂಗಳೂರು: ಮುದ್ರಣ ಕಾಗದದ ಮೇಲಿನ ಜಿಎಸ್‌ಟಿಯನ್ನು ಶೇ 18ಕ್ಕೆ ಏರಿಸುವ ಪ್ರಸ್ತಾವನೆ ಇದ್ದು, ಅದನ್ನು ಕೈಬಿಡಬೇಕು ಎಂದು ಕರ್ನಾಟಕ ಪ್ರಕಾಶಕರ ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಹಳ್ಳಿ ಅವರು ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದಾರೆ.

ವಿದ್ಯಾರ್ಥಿಗಳು ಬಳಸುವ ಚಾರ್ಟ್, ಗ್ಲೋಬ್ ಮತ್ತಿತರ ಪರಿಕರಗಳ ಮೇಲೂ ಜಿಎಸ್‌ಟಿ ವಿಧಿಸಲಾಗಿದೆ. ಈಗಾಗಲೇ ಮುದ್ರಣೋದ್ಯಮದ ಕಚ್ಚಾ ವಸ್ತುಗಳ ಬೆಲೆ ಶೇ 30ರಷ್ಟು ಏರಿಕೆಯಾಗಿದೆ. ಇದರಿಂದ ಜ್ಞಾನ ಪ್ರಸಾರ ಮಾಧ್ಯಮವಾಗಿರುವ ಪುಸ್ತಕ ಪ್ರಕಟಣೆಯ ಮೇಲೆ ಹೊರೆಯಾಗಿದೆ ಎಂದು ಹೇಳಿದ್ದಾರೆ.

ಕೇಂದ್ರ ಹಣಕಾಸು ಸಚಿವರೊಂದಿಗೆ ಚರ್ಚಿಸಿ ಮುದ್ರಣ ಕಾಗದದ ಮೇಲಿನ ಜಿಎಸ್‌ಟಿ ಕಡಿತಗೊಳಿಸಲು ಮತ್ತು ಹೊಸತಾಗಿ ಜಿಎಸ್‌ಟಿ ವ್ಯಾಪ್ತಿಗೆ ತರಲು ಉದ್ದೇಶಿಸಿರುವ ಶೈಕ್ಷಣಿಕ ಉಪಕರಣಗಳ ಮೇಲಿನ ಜಿಎಸ್‌ಟಿಯನ್ನು ಕೈಬಿಡಬೇಕು ಎಂದೂ ಒತ್ತಾಯಿಸಿದ್ದಾರೆ.

ಪುಸ್ತಕ ಖರೀದಿಯಲ್ಲಿ ಪಾರದರ್ಶಕತೆ ಇರಬೇಕು ಮತ್ತು ಉನ್ನತಮಟ್ಟದ ಪುಸ್ತಕ ಆಯ್ಕೆ ಸಮಿತಿ ರಚಿಸಿ ಅದರ ಶಿಫಾರಸಿನಂತೆ ಕ್ರಮ ಕೈಗೊಳ್ಳಬೇಕು ಎಂದು ಕಂಬತ್ತಳ್ಳಿ ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

ಗ್ರಾಮೀಣ ನೈರ್ಮಲ್ಯ ಮತ್ತು ಕುಡಿಯುವ ನೀರಿನ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವ ಕುರಿತು ಕಾರ್ಯಾಗಾರ: ಉದ್ಘಾಟನೆ: ಜಯಕರ.ಎಸ್.ಎಂ., ಅತಿಥಿಗಳು: ಎಂ.ಕೊಟ್ರೇಶ್, ಟಿ.ಎಚ್. ಮೂರ್ತಿ, ಸ್ಥಳ: ವೆಂಕಟಗಿರಿ ಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ಮಲ್ಲಿಕಾರ್ಜುನ ಖರ್ಗೆ ಅವರ 80ನೇ ಜನ್ಮದಿನಾಚರಣೆ: ಅತಿಥಿಗಳು: ರಾಜಪ್ಪ ದಳವಾಯಿ, ಎನ್. ಚಿನ್ನಸ್ವಾಮಿ ಸೋಸಲೆ, ಅಧ್ಯಕ್ಷತೆ: ರಾಧಾಕೃಷ್ಣ, ಆಯೋಜನೆ: ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ನಳಂದ ನ್ಯಾಷನಲ್ ಪದವಿ ಪೂರ್ವ ಕಾಲೇಜು, ಸ್ಥಳ: ಡಾ.ಅಂಬೇಡ್ಕರ್ ಶಿಕ್ಷಣ ಮಹಾವಿದ್ಯಾಲಯ, ಜೆ.ಸಿ.ನಗರ (ಕುರುಬರಹಳ್ಳಿ), ಬೆಳಿಗ್ಗೆ 11

ಕಾಲೇಜು ವಾರ್ಷಿಕೋತ್ಸವ: ಅತಿಥಿಗಳು: ಸೌಮ್ಯ ರೆಡ್ಡಿ, ಅಧ್ಯಕ್ಷತೆ: ಎ.ಎಚ್. ರಾಮರಾವ್, ಎಸ್.ಎನ್. ನಾಗರಾಜ ರೆಡ್ಡಿ, ಸದಾನಂದ.ಪಿ. ಮಯ್ಯ, ಆಯೋಜನೆ: ನ್ಯಾಷನಲ್ ಕಾಲೇಜು, ಜಯನಗರ, ಸ್ಥಳ: ಎಚ್.ಎನ್. ಕಲಾಕ್ಷೇತ್ರ, ಬೆಳಿಗ್ಗೆ 11

ಪೊಲೀಸ್ ಕಲಾ ಸಂಗಮ ಹಾಗೂ ಆರಕ್ಷಕ ಕಲಾ ಸೇವಾ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಡಿ.ರೂಪಾ ಮೌದ್ಗಿಲ್, ಅಧ್ಯಕ್ಷತೆ: ಎಸ್.ಡಿ. ಶರಣಪ್ಪ,

ರಾ.ನಂ. ಚಂದ್ರಶೇಖರ ಅವರ 'ಕನ್ನಡ ಡಿಂಡಿಮ' ಪರಿಷ್ಕೃತ ಆವೃತ್ತಿಯ ಲೋಕಾರ್ಪಣೆ ಮತ್ತು 'ಕನ್ನಡ ಚಂದ್ರ' ಪ್ರಶಸ್ತಿ ಪ್ರದಾನ:



ಅಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಗ್ರಂಥ ಬಿಡುಗಡೆ: ಜೆ.ಸಿ. ಮಾಧುಸ್ವಾಮಿ, ಅತಿಥಿಗಳು: ವಿಜಯಾ, ಮುಖ್ಯಮಂತ್ರಿ ಚಂದ್ರು, ಆಯೋಜನೆ: ಕನ್ನಡ ಚಂದ್ರ ಪ್ರಶಸ್ತಿ ಪ್ರದಾನ, ಸಪ್ನ ಬುಕ್ ಹೌಸ್, ಸ್ಥಳ: ಬಾಪು ಸಭಾಂಗಣ, ಗಾಂಧಿಭವನ, ಕುಮಾರ ಕೃಪಾ ರಸ್ತೆ, ಸಂಜೆ 5.30

ಪ್ರಶಸ್ತಿ ಪ್ರದಾನ: ಎಂ.ಎನ್. ಅನುಚೇತ್, ಅತಿಥಿಗಳು: ಭೀಮಾಶಂಕರ ಗುಳೇದ, ಚನ್ನಬಸಪ್ಪ ಹೊಸಮನಿ, ಆಯೋಜನೆ: ನಬಿರೋಷನ್ ಪ್ರಕಾಶನ, ಸ್ಥಳ: ಮಂಗಳ ಕಲ್ಯಾಣ ಮಂಟಪ, ಕೋರಮಂಗಲ, ಸಂಜೆ 4

ಪದವಿ ಪ್ರದಾನ ಸಮಾರಂಭ: ಅತಿಥಿಗಳು: ಎಸ್.ಡಿ. ಶಿಬುಲಾಲ್, ಉಮಾ ಮಹದೇವನ್, ಆಯೋಜನೆ: ಧ್ವನಿ ಫೌಂಡೇಷನ್, ಸ್ಥಳ: ವೈಎಂಸಿಎ, ನೃಪತುಂಗ ರಸ್ತೆ, ಅಂಬೇಡ್ಕರ್ ವೀಧಿ, ಸಂಜೆ 5.30

ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಆರೂಢ ಭಾರತೀ ಸ್ವಾಮೀಜಿ, ಉದ್ಘಾಟನೆ: ವಿ.ಸೋಮಣ್ಣ, ಸಿ. ಸೋಮಶೇಖರ್, ಮಹೇಶ ಜೋಷಿ, ಪಿ.ಸಿ. ಮೋಹನ್, ಆಯೋಜನೆ: ಸಂದೇಶ್ ಯುವ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ಸಂಗ್ರಹ ರಾಮಾಯಣ ಪ್ರವಚನ: ಪ್ರಸ್ತುತಿ: ಅಬ್ಬೂರು ಬದರಿ ಆಚಾರ್, ಭಜನೆ: ಲಗ್ಗೆರೆಯ ಸಂಸ್ಕೃತಿ ಸಂಘದಿಂದ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀರಾಮಚಂದ್ರ ಸ್ವಾಮಿ ದೇವಸ್ಥಾನ, 4ನೇ ಮುಖ್ಯರಸ್ತೆ, ಶ್ರೀರಾಮಪುರ, ಸಂಜೆ 6

'ಅಭಿಯಾನ' ನಾಟಕ ಪ್ರದರ್ಶನ: ರಚನೆ: ಜಯಪ್ರಕಾಶ್ ಮಾವಿನಕುಳಿ, ನಿರ್ದೇಶನ: ದಾಕ್ಷಾಯಿಣಿ ಭಟ್.ಎ., ಆಯೋಜನೆ: ದೃಶ್ಯ ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7



ಹರಿದಾಸ ವಾಣಿ: ಪ್ರಸ್ತುತಿ: ಚೇತನಾ ನಾಗರಾಜ್, ಮಮತಾ ಸತೀಶ್, ಪಿಟೀಲು: ಶಶಿಧರ್, ಮೃದಂಗ: ಶ್ರೀನಿವಾಸ್ ಅನಂತರಾಮಯ್ಯ, ಆಯೋಜನೆ: ಜಯನಗರ 5ನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಸಂಜೆ 7.30

ಬೂಕರ್ ಪ್ರಶಸ್ತಿ ವಿಜೇತೆ ಗೀತಾಂಜಲಿ ಶ್ರೀ, ರಿಕಿ ಕೇಜ್ ಆಕರ್ಷಣೆ

23ರಿಂದ 'ಮೈಸೂರು ಸಾಹಿತ್ಯ ಸಂಭ್ರಮ'

ಪ್ರಜಾವಾಣಿ ವಾರ್ತೆ



ಗೀತಾಂಜಲಿ ಶ್ರೀ



ಪ್ರಮೋದಾ ದೇವಿ



ರಿಕಿ ಕೇಜ್

ಮೈಸೂರು: ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಹಾಗೂ ಮೈಸೂರು ಬುಕ್ ಕ್ಲಬ್ಸ್ ಆಶ್ರಯದಲ್ಲಿ ಆರನೇ ಆವೃತ್ತಿಯ 'ಮೈಸೂರು ಸಾಹಿತ್ಯ ಸಂಭ್ರಮ–2022' ಜುಲೈ 23, 24ರಂದು ನಡೆಯಲಿದೆ.

ಇಲ್ಲಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ನಡೆಯುವ ಉತ್ಸವಕ್ಕೆ 23ರ ಶನಿವಾರ ಮಧ್ಯಾಹ್ನ 1ಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ.

ಕೋವಿಡ್ ಕಾರಣ ಕಳೆದೆರಡು ಉತ್ಸವಗಳು ಆನ್‌ಲೈನ್‌ನಲ್ಲೇ ನಡೆದಿದ್ದವು. ಈ ಬಾರಿಯ ಉತ್ಸವ ಅದ್ದೂರಿಯಾಗಿ ನಡೆಯಲಿದ್ದು, ಉಚಿತ ಪ್ರವೇಶವಿದೆ.

'ಜನಪ್ರಿಯ ಲೇಖಕರು, ಸಂಗೀತಗಾರರು ಹಾಗೂ ಅಂತರರಾಷ್ಟ್ರೀಯ ಕ್ರೀಡಾಪಟುಗಳು ಭಾಗವಹಿಸುತ್ತಿರುವುದು ವಿಶೇಷವಾಗಿದೆ.

23ರಂದು ಮಧ್ಯಾಹ್ನ 2ಕ್ಕೆ 2022ರ ಸಾಲಿನ ಬುಕರ್ ಪ್ರಶಸ್ತಿ ವಿಜೇತ ಕೃತಿ 'ಟಂಬ್ ಆಫ್ ಸ್ಯಾಂಡ್' ಲೇಖಕಿ ಗೀತಾಂಜಲಿ ಶ್ರೀ ಮಾತನಾಡಲಿದ್ದಾರೆ' ಎಂದು ಫೋರಂನ ಅಧ್ಯಕ್ಷೆ ಶುಭ ಸಂಜಯ್ ಅರಸ್ 'ಪ್ರಜಾವಾಣಿ'ಗೆ ತಿಳಿಸಿದರು.

'ಪು.ತಿ.ನರಸಿಂಹಚಾರ್ ಅವರ ಹರಿಣಾಭಿಸರಣ ಗೀತನಾಟಕವನ್ನು ಶಿರಸಿಯ ಎಂಟು ಕಲಾವಿದರು ಅಭಿನಯಿಸುತ್ತಿದ್ದಾರೆ. ಸಂಜೆ 7ಕ್ಕೆ ಗ್ರ್ಯಾಮಿ ಪ್ರಶಸ್ತಿ ವಿಜೇತ ರಿಕಿ ಕೇಜ್ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಡಲಿದ್ದಾರೆ' ಎಂದು ತಿಳಿಸಿದರು.

'23ರಂದು ಮಧ್ಯಾಹ್ನ 3ರಿಂದ ಸಂಜೆ 5ರವರೆಗೆ ನಡೆಯುವ ವಿಚಾರ ಗೋಷ್ಠಿಗಳಲ್ಲಿ ಕ್ರಿಕೆಟ್ ವಿವರಣೆಗಾರ ಚಾರುಶರ್ಮ, ಪತ್ರಕರ್ತ ರಾಜ್‌ದೀಪ್ ಸರ್ದೇಸಾಯಿ, ಇತಿಹಾಸಕಾರ ನಿಧಿನ್ ಒಲಿಕಾರ, ಡಾ.ಎನ್.ಎಸ್.ವಿಶ್ವನಾಥ್, ಅನಿರುದ್ಧ್, ಡಾ.ಎಚ್.ಎಸ್.ಚಂಪಾ ಭಾಗವಹಿಸಲಿದ್ದಾರೆ' ಎಂದರು.

24ರಂದು ಹೋಟೆಲ್‌ನ ಜ್ಯೋತಿ ಹಾಲ್‌ನಲ್ಲಿ ಇಂಗ್ಲಿಷ್ ಮತ್ತು ಗಾರ್ಡೇನಿಯಾ ಸಭಾಂಗಣದಲ್ಲಿ ಕನ್ನಡ ಸಂವಾದ ಕಾರ್ಯಕ್ರಮಗಳು ನಡೆಯಲಿವೆ. ಬೆಳಿಗ್ಗೆ 10ರಿಂದ ಸಂಜೆ 6ರ ವರೆಗೆ ನಡೆಯುವ ಕಾರ್ಯಕ್ರಮಗಳಲ್ಲಿ ಮಾಜಿ ಕ್ರಿಕೆಟಿಗ ಕೃಷ್ಣಮಾಚಾರಿ ಶ್ರೀಕಾಂತ್, ಪತ್ರಕರ್ತರಾದ ಸಾಗರಿಕಾ ಘೋಷ್, ಸುಗತ ಶ್ರೀನಿವಾಸರಾಜು ಪಾಲ್ಗೊಳ್ಳಲಿದ್ದಾರೆ.

ಪರಿಸರ ತಜ್ಞರಾದ ಸಂಜಯ್ ಗುಬ್ಬಿ, ಎಸ್ತರ್ ಅನಂತಮೂರ್ತಿ, ಇತಿಹಾಸಕಾರ ಪೃಥ್ವಿದತ್ತ ಚಂದ್ರಶೋಭಿ, ಧರ್ಮೇಂದ್ರ ಕುಮಾರ್, ಸಾಹಿತಿ ವಸುಧೇಂದ್ರ ಸೇರಿದಂತೆ ದೇಶ–ವಿದೇಶದ ವಿವಿಧ ಕ್ಷೇತ್ರದ ಸಾಧಕರು ಸಂವಾದಗಳ ಕೇಂದ್ರಬಿಂದುವಾಗಲಿದ್ದಾರೆ.

ಚಿತ್ರಾವಳಿ



ಕರ್ನಾಟಕ ವಿದ್ಯಾರ್ಥಿ ಸಂಘಟನೆಯಿಂದ ಬೆಂಗಳೂರು ವಿ.ವಿಯಲ್ಲಿ ದೇವನೂರ ಮಹಾದೇವ ಅವರ 'ಆರ್‌ಎಸ್‌ಎಸ್ ಆಳ–ಅಗಲ' ಕೃತಿಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಈ ಅಭಿಯಾನದಲ್ಲಿ ಸಂಶೋಧನಾ ವಿದ್ಯಾರ್ಥಿ ಸುಭಾಷ್ ಟಿ.ಎನ್. ಮನೋಜ್ ಆಜಾದ್ ಪಾಲ್ಗೊಂಡಿದ್ದರು.



ಕನ್ನಡ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್. ಸುರೇಶ್ ಅವರ 'ತೋಚಿದ್ದು ಗೀಚಿದ್ದು' ಕೃತಿಯನ್ನು ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಬಿಡುಗಡೆ ಮಾಡಿದರು. ಲೇಖಕಿ ವೈ.ಕೆ. ಸಂಧ್ಯಾ ಶರ್ಮಾ, ಸಂಸ್ಕೃತ ಪಂಡಿತ ಕೆ. ಶೇಷಾದ್ರಿ, ಕಲಾವಿದ ಪುಂಡಲೀಕ ಕಲ್ಲಿಗನೂರ್, ಹಾಸ್ಯ ಕಲಾವಿದ ಬಸವರಾಜ ಮಹಾಮನಿ ಇದ್ದಾರೆ



ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿ ಕೆ. ಶ್ರೀನಿವಾಸ್ ಬುಧವಾರ ಅಧಿಕಾರ ವಹಿಸಿಕೊಂಡರು. ನಿರ್ಗಮಿತ ಉಸ್ತುವಾರಿ ಜಿಲ್ಲಾಧಿಕಾರಿ ಎಸ್.ಎಂ.ಸಂಗಪ್ಪ, ಹೆಚ್ಚುವರಿ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮಿ, ವಿಶೇಷ ಜಿಲ್ಲಾಧಿಕಾರಿ ಆರತಿ ಆನಂದ್, ಉತ್ತರ ವಲಯ ಎಸಿ ಡಾ.ಎಂ.ಜಿ. ಶಿವಣ್ಣ ಇದ್ದರು.

ನಗರಸಭಾ ಕಾರ್ಯಾಲಯ ರಾಬರ್ಟ್‌ಸನ್‌ಪೇಟೆ, ಕೆಜಿಎಫ್

ದೂರವಾಣಿ ಸಂ: 08153-260256, E-mail: itstaff_ulb_robertsonpet@yahoo.com

ಸಂಖ್ಯೆ:ನಸರಾ/ಸ.ಅ/ಇ–ಪ್ರೊಕ್/ಸಿಆರ್/03/2022–23 ದಿನಾಂಕ:12.07.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)

ರಾಬರ್ಟ್‌ಸನ್‌ಪೇಟೆ ನಗರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಅನುದಾನ ಮತ್ತು 15ನೇ ಹಣಕಾಸು ಅನುದಾನದ ಅಡಿಯಲ್ಲಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅರ್ಹ ನೊಂದಾಯಿತ ಗುತ್ತಿಗೆದಾರರುಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ–1999 ನಿಯಮಗಳು 2000) ಅನ್ವಯ ಐಟಂವಾರು ದರಗಳ ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಟೆಂಡರ್‌ಗಳನ್ನು **ದಿನಾಂಕ: 05.08.2022ರ ಅಪರಾಹ್ನ 5.30 (17.30) ಗಂಟೆ ಒಳಗೆ** ಸಲ್ಲಿಸತಕ್ಕದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು **ದಿನಾಂಕ: 06.08.2022 ರಂದು ಸಂಜೆ 5.30 (17.30) ಗಂಟೆಗೆ** ತೆರೆಯಲಾಗುವುದು. ಸದರಿ ಟೆಂಡರ್‌ನ ಆರ್ಥಿಕ ಬಿಡ್‌ನ್ನು **ದಿನಾಂಕ: 08.08.2022 ರಂದು ಮಧ್ಯಾಹ್ನ 12.00 ಗಂಟೆಗೆ (12.00) (ಸಾಧ್ಯವಾದಲ್ಲಿ)** ತೆರೆಯಲಾಗುವುದು.

ಆಯಾ ಕಾಮಗಾರಿಗಳಿಗೆ ಅನ್ವಯಿಸುವ ಟೆಂಡರ್ ದಾಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಳನ್ನು ತಾಂತ್ರಿಕ ಶಾಖೆ ನಗರಸಭೆ ರಾಬರ್ಟ್‌ಸನ್‌ಪೇಟೆ ರವರನ್ನು ಸಂಪರ್ಕಿಸಿ ಪಡೆಯಬಹುದು. ದೂರವಾಣಿ ಸಂ: 08153–260256.

SL. No	Name of Work	Est cost (Rs. In Lakhs)	Earnest money Deposit in Rs.	Applicable Tender Document	Class of Contractor/ Category
1	DMA/2022-23/BD/WORK_INDENT133970	15.00	37,500/-	KW1	Class IV and above
2	DMA/2022-23/RD/WORK_INDENT133971	15.00	37,500/-	KW1	Class IV and above
3	DMA/2022-23/OW/WORK_INDENT133972	5.00	12,500/-	KW1	Class IV and above
4	DMA/2022-23/RD/WORK_INDENT133897	19.98	50,000/-	KW1	Class IV and above
5	DMA/2022-23/RD/WORK_INDENT133973	11.00	27,500/-	KW1	Class IV and above
6	DMA/2022-23/RD/WORK_INDENT133974	15.00	37,500/-	KW1	Class IV and above
7	DMA/2022-23/RD/WORK_INDENT133975	15.00	37,500/-	KW1	Class IV and above
8	DMA/2022-23/RD/WORK_INDENT133976	15.00	18,750/-	KW1	Class IV and above (ST)
9	DMA/2022-23/RD/WORK_INDENT133977	15.00	37500/-	KW1	Class IV and above
10	DMA/2022-23/RD/WORK_INDENT133978	15.00	18,750/-	KW1	Class IV and above (SC)
11	DMA/2022-23/RD/WORK_INDENT133979	15.00	37,500/-	KW1	Class IV and above
12	DMA/2022-23/RD/WORK_INDENT133980	15.00	37,500/-	KW1	Class IV and above
13	DMA/2022-23/RD/WORK_INDENT133981	20.00	25,000/-	KW2	Class IV and above
14	DMA/2022-23/RD/WORK_INDENT133982	9.84	12,500/-	KW1	Class IV and above (SC)
15	DMA/2022-23/OW/WORK_INDENT133895	15.00	37,500/-	KW1	Class IV and above
16	DMA/2022-23/OW/WORK_INDENT133896	15.00	18,750/-	KW1	Class IV and above (SC)
17	DMA/2022-23/RD/WORK_INDENT133983	15.00	18,750/-	KW1	Class IV and above (SC)
18	DMA/2022-23/OW/WORK_INDENT133984	15.00	37,500/-	KW1	Class IV and above
19	DMA/2022-23/RD/WORK_INDENT133985	25.00	50,000/-	KW2	Class IV and above
20	DMA/2022-23/RD/WORK_INDENT133986	15.00	37,500/-	KW1	Class IV and above
21	DMA/2022-23/RD/WORK_INDENT133987	20.00	50,000/-	KW2	Class IV and above
22	DMA/2022-23/RD/WORK_INDENT133988	15.00	37,500/-	KW1	Class IV and above
23	DMA/2022-23/RD/WORK_INDENT133989	35.00	35,000/-	KW2	Class IV and above (ST)
24	DMA/2022-23/RD/WORK_INDENT133990	15.00	37,500/-	KW1	Class IV and above
25	DMA/2022-23/RD/WORK_INDENT133991	15.00	18,750/-	KW1	Class IV and above (ST)
26	DMA/2022-23/RD/WORK_INDENT133992	15.00	37,500/-	KW1	Class IV and above
27	DMA/2022-23/RD/WORK_INDENT133993	15.00	37,500/-	KW1	Class IV and above
28	DMA/2022-23/RD/WORK_INDENT133994	15.00	37,500/-	KW1	Class IV and above
29	DMA/2022-23/RD/WORK_INDENT133995	15.00	37,500/-	KW1	Class IV and above
30	DMA/2022-23/RD/WORK_INDENT133996	15.00	37,500/-	KW1	Class IV and above
31	DMA/2022-23/RD/WORK_INDENT133997	17.40	43,500/-	KW1	Class IV and above
32	DMA/2022-23/RD/WORK_INDENT133998	15.00	37,500/-	KW1	Class IV and above
33	DMA/2022-23/RD/WORK_INDENT133999	15.00	18,750/-	KW1	Class IV and above (SC)
34	DMA/2022-23/RD/WORK_INDENT134000	15.00	37,500/-	KW1	Class IV and above
35	DMA/2022-23/RD/WORK_INDENT134001	15.00	18,750/-	KW1	Class IV and above (SC)
36	DMA/2022-23/RD/WORK_INDENT134002	15.00	37,500/-	KW1	Class IV and above
37	DMA/2022-23/OW/WORK_INDENT134003	15.00	37,500/-	KW1	Class IV and above
38	DMA/2022-23/WT/WORK_INDENT134004	23.80	50,000/-	KW2	Class IV and above

ಸೂಚನೆ:–ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾದಿನದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು, ಹಾಗೂ ಮೇಲ್ಕಂಡ ಟೆಂಡರ್‌ಗಳಿಗೆ ನಿಗಧಿಪಡಿಸಿದ ಸಮಯದಲ್ಲಿ ಯಾರೂ ಭಾಗವಹಿಸದಿದ್ದ ಸಂದರ್ಭದಲ್ಲಿ ಏಳು ದಿನಗಳ ಅಧಿಕ ಅವಧಿಯನ್ನು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಅಳವಡಿಸಿದೆ. ತಿದ್ದುಪಡಿ ಪ್ರಕಟಣೆಗಳು ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–	ಸಹಿ/–	ಸಹಿ/–
(ಡಾ. ವಳ್ಳಲ್ ಮುನಿಸ್ವಾಮಿ)	(ಶ್ರೀಮತಿ ದೇವಿ)	(ಶ್ರೀ ಜಿ. ನವೀನ ಚಂದ್ರ)
ಅಧ್ಯಕ್ಷರು	ಉಪಾಧ್ಯಕ್ಷರು	ಪೌರಾಯುಕ್ತರು
ನಗರಸಭೆ ರಾಬರ್ಟ್‌ಸನ್‌ಪೇಟೆ	ನಗರಸಭೆ ರಾಬರ್ಟ್‌ಸನ್‌ಪೇಟೆ	ನಗರಸಭೆ ರಾಬರ್ಟ್‌ಸನ್‌ಪೇಟೆ

ವಾಸಾಸಂಇ/ಕೋಲಾರ/ಆರ್.ಒ.ಸಂಖ್ಯೆ192/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



❦ ಸುಭಾಷಿತ ❦

ನಾವು ಯಾವ ರೀತಿ ಬದುಕುವುದಿಲ್ಲವೋ ಆ ರೀತಿ ಬೇರೆಯವರು ಬದುಕಲಿ ಎಂದು ಹೇಳುವ ಅಧಿಕಾರ ನಮಗ್ಯಾರಿಗೂ ಇಲ್ಲ.

-ಕೆ.ಪಿ.ಪೂರ್ಣಚಂದ್ರ ತೇಜಸ್ವಿ

'ಅಸಂಸದೀಯ' ಪದಗಳ ಪಟ್ಟಿ ಕಳವಳ ಮೂಡಿಸುವ ನಡೆ

ಕೇಂದ್ರ ಸರ್ಕಾರದ ಕಾರ್ಯವೈಖರಿಯನ್ನು ಸದನದಲ್ಲಿ ವಿವರಿಸಲು ವಿರೋಧ ಪಕ್ಷಗಳು ಇದುವರೆಗೆ ಬಳಕೆ ಮಾಡಿಕೊಂಡು ಬಂದಿರುವ ಹಲವು ಪದಗಳನ್ನು 'ಅಸಾಂವಿಧಾನಿಕ' ಎಂದು ತೀರ್ಮಾನಿಸಲಾಗಿದೆ. ಈ ಪದಗಳನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ. ಅಂದರೆ ಈ ಪದಗಳನ್ನು ಸದನದಲ್ಲಿ ಸದಸ್ಯರು ಬಳಕೆ ಮಾಡಿದರೆ, ಅವುಗಳನ್ನು ಕಡತದಿಂದ ತೆಗೆದುಹಾಕಲು ಅವಕಾಶವಿದೆ. ಹೀಗಾಗಿ, ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಹೇಳಲು ವಿರೋಧ ಪಕ್ಷಗಳು ಈಗ ಹೊಸ ಪದಗಳನ್ನು ಸೃಷ್ಟಿಸಿಕೊಳ್ಳಬೇಕಾಗಿದೆ! ಸರ್ಕಾರ ಮಾಡಿದ ಯಾವುದಾದರೂ ಕೆಲಸಕ್ಕೆ 'ನಾಚಿಕೆಯಾಗಬೇಕು' ಎನ್ನಲು ಆಗುವುದಿಲ್ಲ, ಸರ್ಕಾರವು ಜನರು ಇರಿಸಿದ್ದ 'ನಂಬಿಕೆಗೆ ದ್ರೋಹ ಬಗೆದಿದೆ' ಎನ್ನಲು ಆಗುವುದಿಲ್ಲ, ಸಚಿವರು ತಮ್ಮ ಸ್ಥಾನವನ್ನು 'ದುರ್ಬಳಕೆ' ಮಾಡಿಕೊಂಡಿದ್ದಾರೆ ಎಂದು ಹೇಳಲು ಅವಕಾಶ ಇಲ್ಲ, ಹಾಗೆಯೇ ಯಾರೊಬ್ಬರನ್ನೂ 'ಭ್ರಷ್ಟ, ಅಸಮರ್ಥ, ಸರ್ವಾಧಿಕಾರಿ ಮನಃಸ್ಥಿತಿಯವ' ಎಂದು ಟೀಕಿಸಲು ಅವಕಾಶವಿಲ್ಲ. ಸರ್ಕಾರವು ದೇಶವನ್ನು 'ತಪ್ಪು ದಾರಿಗೆ ಎಳೆದಿದೆ' ಎಂದು ಸದನದ ಯಾವ ಸದಸ್ಯನೂ ಹೇಳುವಂತಿಲ್ಲ. ಸರ್ಕಾರದ ಯಾವುದೇ ಯೋಜನೆಯನ್ನು 'ಕಣ್ಣೊರೆಸುವ ತಂತ್ರ' ಎನ್ನಲೂ ಆಗದು. 'ಕತ್ತೆಗಳು', 'ಚಮಚಾಗಳು', 'ಹೇಡಿಗಳು', 'ಕ್ರಿಮಿನಲ್‌ಗಳು' ಎಂಬ ಪದಗಳನ್ನು ಕೂಡ ಬಳಸಲು ಅವಕಾಶ ಇಲ್ಲವಾಗಿದೆ.



ಸರ್ಕಾರವನ್ನು ಟೀಕಿಸುವುದು, ಅದರ ನಿಲುವುಗಳನ್ನು ವಿರೋಧಿಸುವುದನ್ನು ನಿಷೇಧಿಸಲಾಗಿದೆ ಎಂಬ ಸಂದೇಶವನ್ನು ಈ ಪಟ್ಟಿಯು ಜನರಿಗೆ ಮತ್ತು ಜನಪ್ರತಿನಿಧಿಗಳಿಗೆ ರವಾನಿಸುತ್ತಿದೆ

ಲೋಕಸಭಾ ಸಚಿವಾಲಯವು ಈಚೆಗೆ ಬಿಡುಗಡೆ ಮಾಡಿರುವ, 'ಅಸಾಂವಿಧಾನಿಕ' ಎಂದು ಕರೆಯಲಾಗಿರುವ ಪದಗಳು ಹಾಗೂ ನುಡಿಗಟ್ಟುಗಳನ್ನು ಒಳಗೊಂಡಿರುವ 50 ಪುಟಗಳ ಪಟ್ಟಿಯನ್ನು ಓದಿದಾಗ ಅರ್ಥವಾಗುವ ವಿಚಾರ ಇದು. ಈ ಪಟ್ಟಿಯನ್ನು ಅಭಿವ್ಯಕ್ತಿಯನ್ನು ಹತ್ತಿಕ್ಕುವ ಯತ್ನ ಎಂದು ವಿರೋಧ ಪಕ್ಷಗಳು ಕರೆದಿವೆ. ಈ ಪಟ್ಟಿಯಲ್ಲಿ ಇರುವ ಪದಗಳನ್ನು ಬಳಕೆ ಮಾಡದಿರುವ ನಿಲುವನ್ನು ತಾವು ತಳೆಯುವುದಿಲ್ಲ ಎಂದೂ ವಿರೋಧ ಪಕ್ಷಗಳು ಹೇಳಿವೆ. 'ಅಸಾಂವಿಧಾನಿಕ' ಎಂದು ಕರೆಯಲಾಗುವ ಪದಗಳ ಪಟ್ಟಿಯನ್ನು ಕಾಲಕಾಲಕ್ಕೆ ಪರಿಷ್ಕರಿಸುವುದು, ಹೊಸದಾಗಿ ಪದಗಳನ್ನು ಅದಕ್ಕೆ ಸೇರಿಸುವುದು ಬಹಳ ಹಿಂದಿನಿಂದಲೂ ಪಾಲಿಸಿಕೊಂಡು ಬಂದಿರುವ ಪದ್ಧತಿ ಎಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ವಿವರಣೆ ನೀಡಿದ್ದಾರೆ. ಸಂಸತ್ತಿನ ಉಭಯ ಸದನಗಳ ಮುಖ್ಯಸ್ಥರು ಹಾಗೂ ರಾಜ್ಯಗಳ ವಿಧಾನಸಭೆ, ವಿಧಾನ ಪರಿಷತ್ತಿನ ಮುಖ್ಯಸ್ಥರು ನೀಡುವ ರೂಲಿಂಗ್ ಆಧರಿಸಿ 1954ರಿಂದಲೂ ಈ ರೀತಿ ಮಾಡುತ್ತ ಬರಲಾಗಿದೆ ಎಂದಿದ್ದಾರೆ. ಯಾವುದೇ ಪದವನ್ನು ಕಡತದಿಂದ ತೆಗೆದುಹಾಕಲಾಗುತ್ತದೆಯೇ ಇಲ್ಲವೇ ಎಂಬುದು ಆ ಪದವನ್ನು ಯಾವ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಬಳಕೆ ಮಾಡಲಾಯಿತು ಎನ್ನುವುದನ್ನು ಆಧರಿಸಿರುತ್ತದೆ ಎಂಬ ವಿವರಣೆಯನ್ನೂ ಬಿರ್ಲಾ ನೀಡಿದ್ದಾರೆ. ಆದರೆ ಅವರ ವಿವರಣೆಯು ವಿರೋಧ ಪಕ್ಷಗಳಿಗೆ ಸಮಾಧಾನ ತಂದಿಲ್ಲ. ಏಕೆಂದರೆ, ಪದಗಳನ್ನು ಯಾವ ಸಂದರ್ಭದಲ್ಲಿ ಬಳಕೆ ಮಾಡಲಾಯಿತು ಎನ್ನುವುದನ್ನು ಮತ್ತು ಆ ಸಂದರ್ಭದಲ್ಲಿ ಆ ಪದವು ಯಾವ ಅರ್ಥವನ್ನು ಧ್ವನಿಸಿತು ಎನ್ನುವುದನ್ನು ಸ್ಪೀಕರ್ ಅವರೇ ತೀರ್ಮಾನಿಸುತ್ತಾರೆ. ಈ ಪದಗಳನ್ನು ನಿರ್ಬಂಧಿಸಿದರೆ ಸಂಸತ್ತಿನಲ್ಲಿನ ಚರ್ಚೆಗಳಿಗೆ ಅರ್ಥ ಉಳಿಯುವುದಿಲ್ಲ. ಹೀಗಾಗಿ, ಇದು ಅಭಿವ್ಯಕ್ತಿಯನ್ನು ಮೊಟಕುಗೊಳಿಸುವ ಯತ್ನ ಎಂದು ವಿರೋಧ ಪಕ್ಷಗಳು ಭಾವಿಸಿವೆ.

ಪದಗಳನ್ನು ಯಾವ ಸಂದರ್ಭದಲ್ಲಿ ಬಳಸಲಾಯಿತು ಎನ್ನುವುದನ್ನು ಆಧರಿಸಿ ಅದರ ಸ್ವೀಕಾರಾರ್ಹತೆಯನ್ನು ತೀರ್ಮಾನಿಸಬೇಕು ಎಂದು ಸ್ಪೀಕರ್ ಹೇಳುವುದಾದರೆ, 'ಅಸಾಂವಿಧಾನಿಕ' ಎಂದು ಹೇಳುತ್ತಿರುವ ಪದಗಳ ಪಟ್ಟಿಯನ್ನು ಸಿದ್ಧಪಡಿಸಿದ್ದನ್ನು, ಅದನ್ನು ಸಿದ್ಧಪಡಿಸಿದ ಸಂದರ್ಭ ಹಾಗೂ ಸನ್ನಿವೇಶದ ಆಧಾರದಲ್ಲಿ ಗ್ರಹಿಸಬೇಕಾಗುತ್ತದೆ. ಅಂದರೆ, ಸರ್ಕಾರವನ್ನು ಟೀಕಿಸುವುದನ್ನು ಇಷ್ಟಪಡದಿರುವ ಹಾಗೂ ಅಂತಹ ಟೀಕೆಗಳಿಗೆ ಕೆಲವೊಮ್ಮೆ ಬೆಲೆ ತೆರುವಂತೆ ಮಾಡುವ ಇಂದಿನ ಸಂದರ್ಭದ ಹಿನ್ನೆಲೆಯಲ್ಲಿ ಇದನ್ನು ಗ್ರಹಿಸಬೇಕಾಗುತ್ತದೆ. ಮುಕ್ತ ಅಭಿವ್ಯಕ್ತಿ ಹಾಗೂ ಟೀಕೆಯು ನಿಂದನೆಗಳಿಗೆ ಗುರಿಯಾಗುತ್ತಿಲ್ಲದಿದ್ದ ಸಂದರ್ಭದಲ್ಲಿ, ಇಂತಹ ಪದಗಳ ಒಂದು ಪಟ್ಟಿಯು ಕಳವಳಕ್ಕೆ ಕಾರಣವಾಗುತ್ತಿರಲಿಲ್ಲ. ಈ ಪಟ್ಟಿಯನ್ನು ಹಿಂದೆ ಸಿದ್ಧಪಡಿಸಿದ್ದಾಗ ಅದು ಹೆಚ್ಚಿನ ಗಮನ ಸೆಳೆದಿರಲಿಲ್ಲ. ಸಂಸತ್ ಭವನದ ಸಂಕೀರ್ಣದಲ್ಲಿ ಪ್ರತಿಭಟನೆ, ಘೋಷಣೆ ಕೂಗುವುದು, ಧರಣಿ ನಡೆಸುವುದು, ಉಪವಾಸ ಸತ್ಯಾಗ್ರಹ ನಡೆಸುವುದನ್ನು ನಿಷೇಧಿಸಿರುವ ಕ್ರಮದ ಜೊತೆ ಈ ರೀತಿ ಪಟ್ಟಿ ಸಿದ್ಧಪಡಿಸಿರುವುದನ್ನು ಇರಿಸಿ ವಸ್ತುಸ್ಥಿತಿಯನ್ನು ತಿಳಿದುಕೊಳ್ಳಬೇಕು. ಧರಣಿ, ಪ್ರತಿಭಟನೆಗಳನ್ನು ನಿಷೇಧಿಸಿರುವುದು ಕೂಡ ಮಾಮೂಲಿ ಆದೇಶ ಎಂದು ಸ್ಪೀಕರ್ ಹೇಳಿದ್ದಾರೆ. ಅವರು ಏನೇ ಸಮರ್ಥನೆ ನೀಡಿದರೂ ಈ ಆದೇಶಗಳು ನೀಡುವ ಸಂದೇಶ ಬೇರೆಯೇ ಆಗಿದೆ. ಸರ್ಕಾರವನ್ನು ಟೀಕಿಸುವುದು ಮತ್ತು ಸರ್ಕಾರದ ನಿಲುವುಗಳನ್ನು ವಿರೋಧಿಸುವುದನ್ನು ನಿಷೇಧಿಸಲಾಗಿದೆ ಎಂಬ ಸಂದೇಶವನ್ನು ಈ ಪಟ್ಟಿ ಹಾಗೂ ಆದೇಶವು ಜನರಿಗೆ ಮತ್ತು ಜನರ ಪ್ರತಿನಿಧಿಗಳಿಗೆ ರವಾನಿಸುತ್ತಿದೆ.

ದಿನದ ಟ್ವೀಟ್


ಯಾರೂ ಅಚ್ಚರಿಪಡುವುದಿಲ್ಲ!



ಆಸ್ತಿ ನೋಂದಣಿ, ಮದುವೆ ನೋಂದಣಿ, ಜನನ ಪ್ರಮಾಣಪತ್ರ, ಮರಣ ಪ್ರಮಾಣಪತ್ರ, ಖಾತೆ ವರ್ಗಾವಣೆಯಂತಹ ಪ್ರತಿಯೊಂದು ಕೆಲಸವೂ ಲಂಚ ಕೊಟ್ಟರಷ್ಟೇ ನಡೆಯುತ್ತದೆ ಎಂಬುದನ್ನು ಕೇಳಿದರೆ, ಯಾರಿಗಾದರೂ ಅಚ್ಚರಿಯಾಗುತ್ತದೆ ಎಂದು ನನಗನಿಸುವುದಿಲ್ಲ. ಇಂತಹ ಭ್ರಷ್ಟರನ್ನು ನಾನು ಯಾರೊಂದಿಗೂ ಹೋಲಿಸಲಾರೆ. ಇವೇ ಸಬ್‌ರಿಜಿಸ್ಟ್ರಾರ್ ಕಚೇರಿಗಳು.

ಗೌತಮ್, ನಾಗರಿಕ

ಕಿಡಿನುಡಿ



ಚೆಕ್ ಸೌಲಭ್ಯಕ್ಕೆ ನಾವು ಶುಲ್ಕ ನೀಡುತ್ತೇವೆ. ಜೊತೆಗೆ ತೆರಿಗೆಯನ್ನೂ ಪಾವತಿಸುತ್ತೇವೆ. ಹಣ ಇರಿಸುವುದಕ್ಕಾಗಿ ಬ್ಯಾಂಕ್‌ಗಳಿಗೆ ಹಣ ನೀಡುತ್ತೇವೆ, ಎಟಿಎಂ ಬಳಸುವುದಕ್ಕಾಗಿ ಹಣ ಕೊಡುತ್ತೇವೆ. ವ್ಯಾಪಾರೋದ್ಯಮಿಗಳು ಮತ್ತು ಇತರ ಹಲವು ಮಂದಿ ಬಹಳಷ್ಟು ಸಲ ಚೆಕ್ ಬಳಸುತ್ತಾರೆ. ಚೆಕ್ ಬಳಕೆ ಮೇಲೆ ಹೇರುವ ಜಿಎಸ್‌ಟಿಯು ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ಮೇಲೆ ಪರಿಣಾಮ ಬೀರುತ್ತದೆ. ಈ ನಡುವೆ, ಮೊಸರಿನ ಮೇಲೆ ವಜ್ರಗಳಿಗಿಂತಲೂ ಹೆಚ್ಚು ಪ್ರಮಾಣದ ಜಿಎಸ್‌ಟಿ ವಿಧಿಸಲಾಗಿದೆ- ಯಾವುದಕ್ಕೆಲ್ಲ ತೆರಿಗೆ ವಿಧಿಸಲಾಗುತ್ತದೆ ಎಂಬುದು ಇಲ್ಲಿ ಪ್ರಶ್ನೆಯೇ ವಿನಾ ಅದನ್ನು ಎಲ್ಲಿ ಬಳಸಲಾಗುತ್ತದೆ ಎಂಬುದಲ್ಲ.

ಕೃಷ್ಣ, ನಾಗರಿಕ

25 ವರ್ಷಗಳ ಹಿಂದೆ

ಸೋಮವಾರ, 21-7-1997

● **ವೀರಪ್ಪನ್ ತಾಣದತ್ತ ಸಂಧಾನ ತಂಡ**

ಕೊಯಮತ್ತೂರು, ಜುಲೈ 20 (ಪಿಟಿಐ)– ಕರ್ನಾಟಕದ 9 ಮಂದಿ ಅರಣ್ಯ ಇಲಾಖೆಯ ಸಿಬ್ಬಂದಿಯನ್ನು ಅಪಹರಿಸಿ ಒತ್ತೆಯಾಳಾಗಿರಿಸಿಕೊಂಡಿರುವ ದಂತಚೋರ ವೀರಪ್ಪನ್ ಈಗ ಬರಗೂರು, ಕದಂಬೂರು, ತಲವಾಡಿ ಮತ್ತು ಸತ್ಯಮಂಗಲ ಅರಣ್ಯ ಪ್ರದೇಶದಲ್ಲಿ ಸುತ್ತಾಡುತ್ತಿದ್ದಾನೆ ಎಂದು ಅಂದಾಜಿಸಲಾಗಿದ್ದು, ಆತನೊಂದಿಗೆ ಸಂಧಾನಕ್ಕಾಗಿ ತಮಿಳುನಾಡು ಸರ್ಕಾರ ನೇಮಿಸಿರುವ ತಂಡ ಈಗ ಅರಣ್ಯ ಪ್ರದೇಶವನ್ನು ಪ್ರವೇಶಿಸಿದೆ.

ವೀರಪ್ಪನ್ ಶರಣಾಗತಿಗೆ ಸಂಬಂಧಿಸಿ ದಂತೆಯೂ ಸಂಧಾನ ನಡೆಸುವ ಈ ತಂಡದ ಚಲನವಲನಗಳನ್ನು ರಹಸ್ಯವಾಗಿಡಲಾಗಿದೆ. ತಂಡ ಅರಣ್ಯ ಪ್ರವೇಶಿಸಿದ ಜಾಗದಲ್ಲಿ ಅರಣ್ಯ ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ತೀವ್ರ ನಿಗಾ ವಹಿಸಿದ್ದಾರೆ. ಆದರೆ ಈವರೆಗೆ ಸಂಧಾನ ತಂಡವನ್ನು ವೀರಪ್ಪನ್ ಸಂಪರ್ಕಿಸಿರುವುದರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಅರಣ್ಯ ಇಲಾಖೆಯ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಶುಕ್ರವಾರ, 21-7-1972

● **ಜುಟ್ಟು ಬಿಡದಿದ್ದರೆ ಅನ್ನವಿಲ್ಲ**

ಮೈಸೂರು, ಜುಲೈ 20– ನಗರದ ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಸ್ಥಳದ 46 ಮಂದಿ ಬಡ ಶ್ರೀವೈಷ್ಣವ ವಿದ್ಯಾರ್ಥಿಗಳಿಗೆ ಇಲ್ಲಿನ ಶ್ರೀ ಪರಕಾಲ ಮಠದಲ್ಲಿ ನಿತ್ಯಪಡಿ (ಅನ್ನದ ಉಂಡೆ) ಕೊಡಲಾಗುತ್ತಿದ್ದು, ಮಠದ ಅಧಿಕಾರಿಗಳು ಕಳೆದ ಮೂರು ದಿನಗಳಿಂದ ಕೆಲವು ನಿಯಮಗಳನ್ನು ವಿಧಿಸಿದ್ದು, ವಿದ್ಯಾರ್ಥಿಗಳು ಬಂಡಾಯವೆದ್ದಿದ್ದಾರೆ. ಇದರ ಫಲವಾಗಿ ಬುಧವಾರ ಬೆಳಿಗ್ಗೆಯಿಂದ ನಿತ್ಯಪಡಿಯನ್ನು ನಿಲ್ಲಿಸಲಾಗಿದೆ.

ನಿಯಮಗಳಲ್ಲಿ ಕಡ್ಡಾಯವಾಗಿ ಜುಟ್ಟು ಬಿಡಬೇಕೆಂಬುದೂ ಒಂದು. 46 ಮಂದಿ ಪೈಕಿ ಮೂವರು ಮಾತ್ರ ಜುಟ್ಟು ಬಿಟ್ಟಿದ್ದಾರೆ. ಈ ನಿಯಮಪಾಲನೆಗೆ ಸೋಮವಾರದವರೆಗೆ ಕಾಲಾವಕಾಶ ನೀಡಲಾಗಿತ್ತು.

ಬದಲಾದ ಕಾಲಕ್ಕೆ ಜುಟ್ಟು ಬಿಡುವುದು ಸರಿಯಲ್ಲ ಎಂಬ ತೀರ್ಮಾನಕ್ಕೆ ಬಂದ ವಿದ್ಯಾರ್ಥಿಗಳು ಸೋಮವಾರ ತಮ್ಮ ಮಾಮೂಲು ಕ್ರಾಪ್ ತಲೆಯಲ್ಲೇ ಪಡಿ ಪಡೆಯಲು ಮಠಕ್ಕೆ ಹಾಜರಾದರು. ಪಡಿ ಸಿಗಲಿಲ್ಲ.

ನಮ್ಮ ನೆಲದ ಚಿಂತನೆಗಳ ಸಾಗರದಿಂದ ನಾವು ಆಯ್ದುಕೊಳ್ಳದೇ ಬಿಟ್ಟಿರುವ ರನ್ನ ದೀವಿಗೆಗಳು

ಮತಿದೀವಿಗೆಯ ಮತ್ತೊಮ್ಮೆ ಹೊರುವ ಸಮಯ



ವಿಶ್ಲೇಷಣೆ

ಸಬಿತಾ ಬನ್ನಾಡಿ

ಜನ್ನನ ಯಶೋಧರ ಚರಿತೆಯಲ್ಲಿ ಅಭಯರುಚಿಯು ತಂಗಿ ಅಭಯಮತಿಗೆ 'ಅಭೀತೆಯಾಗೆಲೆಗೆ ಮರಣದ ದೆಸೆಯೊಳ್' ಎನ್ನುತ್ತಾನೆ. ಈ ಮಾತು ಹಲವು ಧ್ವನಿಗಳನ್ನು ಒಳಗೊಂಡಿರುವಂತಹದು. ಆಳುವ ದೊರೆಯಿಂದ ಬರಬಹುದಾದ ಅಕಾರಣವಾದ ಸಾವಿಗೆ ಹೆದರಬೇಡ ಎಂದು ಆ ಕಿರುಹರೆಯದ ಹುಡುಗ ಹೇಳುತ್ತಿರುವಾಗ, ಬದುಕಿಗೊಂದು ಮೌಲ್ಯವಿರಬೇಕು ಎಂಬ ಅರ್ಥವಿದೆ. ಮಾರಿದತ್ತನೆಂಬ ದೊರೆಯು, ಸತ್ತೆಯಿಂದ ದತ್ತವಾದ ಅಧಿಕಾರದ ಕತ್ತಿಯನ್ನು ಎತ್ತೆತ್ತ ಬೇಕಿದ್ದರೂ ಝಳಪಿಸಿದ ಠೇಂಕಾರದ ಹಿನ್ನೆಲೆಯಿದೆ. ದೊರೆತನವು ಒದಗಿಸಿರುವ ಕತ್ತಿಯು ಪ್ರಜೆಗಳನ್ನು ರಕ್ಷಿಸಲು ಮಾತ್ರ ಇರುವುದು ಎಂಬ ವಿವೇಕವನ್ನು ಕಳೆದುಕೊಂಡಾಗ, ಅದನ್ನು ಪ್ರಶ್ನಿಸುವ ಎದುರುನುಡಿಯೂ ಹುಟ್ಟಿಕೊಳ್ಳುತ್ತದೆ. ಆದರೆ ಆ ಮಾತು ಜೀವಕ್ಕೂ ಮುಳುವಾಗಬಹುದು. ಅಥವಾ ಕತೆ, ಕಾವ್ಯಗಳ ಆಶಯದಂತೆ ಕ್ರೂರಿಗಳ ಮನ ಬದಲಿಸಬಹುದು.

ಅಹಿಂಸೆಯ ದಾರಿಯಲ್ಲಿ ಸತ್ಯ, ನ್ಯಾಯಸಮ್ಮತ ಬಾಳ್ವೆಯ ತತ್ವವೆಂಬ ಧರ್ಮವಿಚಾರವನ್ನು ಅಭಯಮತಿಯಿಂದ ಕೇಳಿದ ಮಾರಿದತ್ತ ಬದಲಾದ ಎಂದು ಕಾವ್ಯ ಹೇಳುತ್ತದೆ. ಅದು ಕಾವ್ಯದ ಆಶಾವಾದವೇ? ನಮ್ಮೆದುರಿನ ದಾರಿಯೇ?

ನಮ್ಮೆದುರಿನ ದಾರಿಯೂ ಕಠಿಣವೇ. ಆದರೂ ಪ್ರಾಜ್ಞರು ಈ ಪ್ರಯತ್ನಗಳನ್ನು ಬಿಟ್ಟಿಲ್ಲ. ಕೆಲವೇ ಕೆಲವು ಸಾಲುಗಳೇ ಆಗಿರಲಿ, ಅವು ಒಂದಿಡೀ ಸಮಾಜವನ್ನೇ ಪ್ರೇರಿಸಬಲ್ಲವು. ಬಂಡಿಗಟ್ಟಲೆ ಹೊಟ್ಟು ಮಾತು ಕಸದ ರಾಶಿಯಾಗಿ ನಾರಬಲ್ಲುದು. ಆದರೆ ಕಸವನ್ನೇ ಮೋಹಿಸುತ್ತೇವೆ ಎಂದರೆ ಯಾರೇನೂ ಮಾಡುವಂತಿಲ್ಲ. ಕನ್ನಡ ನಾಡಿನಲ್ಲಿ ಕನ್ನಡದಲ್ಲೇ ಎಂತೆಂತಹ ಅಮೂಲ್ಯವಾದ ಚಿಂತನೆಗಳು ಅರಳಿಕೊಂಡಿದ್ದರೂ ಆ ಕಡೆಗೆ ಕನ್ನಡಿಗರಿಗೆ ಅದೆಷ್ಟು ಆಸಕ್ತಿಯಿದೆ ಎನ್ನುವುದನ್ನು ಪುನರ್‌ಪರಿಶೀಲಿಸಬೇಕಾದ ಹೊತ್ತು ಇಂದು ಬಂದಿದೆ.

ಕಳೆದ ಶತಮಾನದ ಇಪ್ಪತ್ತರ ದಶಕದ ನಂತರದ ಭಾರತದಲ್ಲಿ, ಒಂದು ಸ್ವಾಯತ್ತ ಭಾರತ ಕಟ್ಟುವ ಉತ್ಸಾಹ ಮತ್ತು ಮೇರು ಚಿಂತನೆಗಳು ಮುನ್ನೆಲೆಗೆ ಬಂದುವು. ಪ್ರಜಾಪ್ರಭುತ್ವದೆಡೆಗೆ ಹೆಜ್ಜೆ ಹಾಕುವ ತಯಾರಿಯಲ್ಲಿ, ಪ್ರತೀ ಪ್ರಜೆಗೂ ಇರುವ ಜವಾಬ್ದಾರಿಯನ್ನು ನೆನಪಿಸುವ, ಹೇಳುವ ರೀತಿಯಲ್ಲಿ ಈ ಚಿಂತನೆಗಳು ಇರುವುದನ್ನು ಗಮನಿಸಬಹುದು. ಇವೆಲ್ಲದರ ಪ್ರತಿನಿಧಿ ರೂಪದಲ್ಲಿ ಕುವೆಂಪು ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ನಲವತ್ತರ ದಶಕದಲ್ಲಿ ಮಾಡಿದ ಭಾಷಣದ ಲೇಖನ ರೂಪ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ'ಯನ್ನು ಗಮನಿಸಬಹುದು. ರಾಜಪ್ರಭುತ್ವ, ಮತಪ್ರಭುತ್ವಗಳಡಿಯಲ್ಲಿ ರೂಪುಗೊಳ್ಳುವ ಗುಲಾಮಿ ಮತಿಸ್ಥಿತಿಯಾಚೆಗೆ ಹುಟ್ಟಬೇಕಾಗಿರುವ ಎಲ್ಲ ಜಾತಿ, ಜನರ ಪ್ರಬುದ್ಧ ಮತಿಯೆಡೆಗೆ ಇದು ಯೋಚಿಸುತ್ತದೆ. ಇದನ್ನು ಸ್ಪಷ್ಟಪಡಿಸಲು ಅವರು, 'ನಿರಂಕುಶಮತಿತ್ವ ಎಂದರೆ ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶಮತಿ' ಎನ್ನುತ್ತಾರೆ. ಇಂತಹ ಮತಿಯನ್ನು ನಿಸ್ತೇಜಗೊಳಿಸಿರುವ ಕೆಲವು ಅಂಶಗಳನ್ನು ಅವರು ಹೇಳುತ್ತಾ, ಮತವನ್ನು ಹೇಗೆ ಮೂಢಮತಿಯನ್ನು ಹುಟ್ಟುಹಾಕಲು ಬಳಸಿಕೊಳ್ಳಲಾಗಿದೆ ಎನ್ನುವೆಡೆಗೆ ಗಮನಸೆಳೆಯುತ್ತಾರೆ. 'ಸರ್ವಮತಗಳಿಗಿಂತಲೂ ಶುದ್ಧಹೃದಯದ ಮತ್ತು ಸನ್ಮತಿಯ ಮತವೇ ಮಹೋನ್ನತವಾದುದು. ಆ ಗುರು, ಈ ಆಚಾರ್ಯ, ಆ ಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದವು ಏನೇ ಹೇಳಲಿ; ಎಲ್ಲವನ್ನೂ ವಿಮರ್ಶಿಸುವ, ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ. ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ. ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಹಾಗೆ ಮಾಡುವವನೇ ನಿಜವಾಗಿಯೂ ನಾಸ್ತಿಕನು. ಮೌಢ್ಯವೇ ಈಶ್ವರ ನಿಂದೆ. ಯಾವ ರೂಪದಲ್ಲಿಯೇ ಆಗಲಿ, ಯಾವ ವೇಷದಲ್ಲಿಯೇ ಆಗಲಿ, ತಿಳಿದೂ ತಿಳಿದೂ ಮೂಢತನವನ್ನು ಆರಾಧಿಸಿ, ಬೋಧಿಸಿ, ಲಾಭ ಪಡೆಯುತ್ತ ನೆಮ್ಮದಿಯಾಗಿರುವವನು ಪಾಷಂಡಿಯಾಗುತ್ತಾನೆ' (ಕುವೆಂಪು ಸಮಗ್ರ ಗದ್ಯ; ಸಂ:2, ಪ್ರಸಾರಾಂಗ; ಕನ್ನಡ ವಿ.ವಿ).

ಇಷ್ಟು ಸ್ಪಷ್ಟವಾಗಿ ದಾರ್ಶನಿಕ ಕವಿ ಹೇಳಿದ ಮಾತು ಎಪ್ಪತ್ತೈದರ ಸ್ವಾತಂತ್ರ್ಯಾಚರಣೆಯ ಸಂದರ್ಭದಲ್ಲಿ ಎಲ್ಲಿಗೆ ಹೋಗಿದೆ? ಇದನ್ನು ಕಾರ್ಯರೂಪಕ್ಕೆ ತರಬೇಕಾಗಿದ್ದ ಪ್ರಜಾಪ್ರಭುತ್ವದ ಅಂಗಸಂಸ್ಥೆಗಳು ಎಷ್ಟರಮಟ್ಟಿಗೆ ಇದನ್ನು ಅರ್ಥಮಾಡಿಕೊಂಡಿವೆ? ಪ್ರಚುರಗೊಳಿಸಿವೆ? ಜಾಗತೀಕರಣ ನಂತರದ ಭಾರತದ ಒಟ್ಟು ಶಿಕ್ಷಣ ವ್ಯವಸ್ಥೆಯಲ್ಲಿಯೇ ಇದರ ವಿರುದ್ಧ ಚಲನೆ ವೇಗವಾಗಿದ್ದು ನವಗುಲಾಮಿತನವನ್ನು ಗಟ್ಟಿಗೊಳಿಸುವ ಭಾಗವಾಗಿಯೇ ಇದೆಯಲ್ಲದೆ ಇನ್ನೇನೂ ಅಲ್ಲ. ನಾನು ಗಮನಿಸಿದಂತೆ, ಉನ್ನತ ಶಿಕ್ಷಣ ಪಡೆದರೂ ಹಲವು ಯುವಜನರು ದುರ್ಬಲ ಮನಸ್ಕರಾಗಿ, ಅಧೀರರಾಗಿ, ಯಾರು ಏನು ಹೇಳಿದರೂ ಕುರುಡಾಗಿ ನಂಬುವ, ಮಾತಿಗೊಮ್ಮೆ 'ಟಚ್‌ವುಡ್' ಎಂದು ಬೆದರುವ, ಭೌತಿಕ ಸವಲತ್ತಿಗೆ ಮಾತ್ರ ವೈಯಕ್ತಿಕವಾಗಿ ಕಿತ್ತಾಡುವ, ಸದಾ ಅನಿಶ್ಚಿತತೆಯಲ್ಲಿ ಒದ್ದಾಡುವ 'ಸಾಕುಪ್ರಾಣಿ'ಗಳಾಗಿದ್ದಾರೆ.

ಜಾಗತೀಕರಣ ನಂತರದ ನಮ್ಮ ಎಲ್ಲ ಶೈಕ್ಷಣಿಕ ವ್ಯವಸ್ಥೆಗಳು ಹಣವೊಂದನ್ನೇ ಮೌಲ್ಯವಾಗಿಸಿ, ಸದೃಢ ಮನೋಭಿತ್ತಿಯನ್ನು ರೂಪಿಸುವಲ್ಲಿ ವಿಫಲವಾಗಿವೆ. ಸವಲತ್ತು ಮತ್ತು ಮನರಂಜನೆಯ ಸಾಧನಗಳ ಒಡೆಯರಾಗುವ ಗುರಿಯನ್ನು ಸಾಧಿಸಿದ ನಂತರ ಕ್ರಮೇಣ ಮನದ ಟೊಳ್ಳು ಮುನ್ನೆಲೆಗೆ ಬಂದು ನಂತರ ರೆಡಿಮೇಡ್ ಅಧ್ಯಾತ್ಮ 'ಗುರು'ಗಳ ಮೊರೆ ಹೋಗುವ ದುಃಸ್ಥಿತಿಯಲ್ಲಿ ಮುಕ್ಕಾಲುವಾಸಿ ಜನ ಬಳಲುತ್ತಿದ್ದಾರೆ. ಇದನ್ನು ಬಂಡವಾಳ ಮಾಡಿಕೊಳ್ಳಲು ಮಾಧ್ಯಮಗಳು, ರಾಜಕೀಯ ಕ್ಷೇತ್ರ, ಧಾರ್ಮಿಕ ಕ್ಷೇತ್ರ ಎಲ್ಲವೂ ಇತರ ವ್ಯಾಪಾರಿ ಕ್ಷೇತ್ರಗಳ ಜೊತೆಗೆ ಪೈಪೋಟಿಗಿಳಿದಿವೆ. ಇಲ್ಲಿ ಮತಿಯ ಮೇಲಿನ ಆಕ್ರಮಣದ ನವ ನವ ವಿಧಾನಗಳೇ ಮೊದಲ ತೊದಲ ಹೆಜ್ಜೆಗಳಾಗುತ್ತವೆ.

ನಮ್ಮ ಕರ್ನಾಟಕ ನಮ್ಮ ಚಿಂತಕರ ಚಿಂತನೆಯ ನೆಲವನ್ನು ರೂಪಿಸದೇ ಹೋದುದರ ಸ್ಪಷ್ಟ ನಿದರ್ಶನ ನಮಗಿಂದು ಢಾಳಾಗಿ ಕಾಣತೊಡಗಿದೆ. ಈಚೆಗೆ ಒಬ್ಬರು 'ವಾಸ್ತು ಗುರು' ಎನಿಸಿಕೊಂಡವರ ಸಾವಿನ ನಂತರ ಫೇಸ್‌ಬುಕ್‌ನಲ್ಲಿ ಹಲವು ರೀತಿಯ ಪ್ರತಿಕ್ರಿಯೆಗಳು ಕಾಣಿಸಿದವು. ಅದರಲ್ಲಿ ಮುಖ್ಯವೆನಿಸಿದ್ದು, ಇಪ್ಪತ್ತು ವರ್ಷಗಳ ಹಿಂದೆ ತಾವುಗಳು ಯಾವುದೇ ವಾಸ್ತುವನ್ನು ಪಾಲಿಸುತ್ತಿರಲಿಲ್ಲ, ನಂಬುತ್ತಿರಲಿಲ್ಲ. ಆದರೆ ಕ್ರಮೇಣ ಇರುವುದನ್ನು ಒಡೆದು ವಾಸ್ತುವಿನ ಹಿಂದೆ ಹೋದೆವು. ಹಾಗೆ ಹೋದ ಕೂಡಲೇ ಎಲ್ಲವೂ ಸರಿಯೇನೂ ಆಗದಿದ್ದರೂ ಅದನ್ನು ಅನುಸರಿಸುವುದನ್ನು ಬಿಡಲಿಲ್ಲ ಎಂದು ಕೆಲವರು ಹೇಳಿದರೆ, ತಮ್ಮ ಬದುಕಿನ ಏರಿಳಿತಗಳಲ್ಲೂ ತಾವದನ್ನು ನಂಬದೆ ಮುನ್ನಡೆದೆವು ಎಂದು ಇನ್ನು ಕೆಲವರು ಹೇಳಿದರು. ಆದರೆ, ಮೂಢಮತಿಗಳ ದೊಡ್ಡಬಣವೇ ಮುನ್ನೆಲೆಗೆ ಬಂದಿದ್ದು, ಅವರಲ್ಲಿ ಒಂದು ರೀತಿಯ ಒಗ್ಗೂಡುವಿಕೆ ಎಲ್ಲೆಡೆ ಗೋಚರಿಸುತ್ತಿದೆ. ಇದು ಒಟ್ಟು ಸಮಾಜದ ಅವನತಿಗೆ ಮೊದಲ ಕಲ್ಲು ಎಂಬುದರಲ್ಲಿ ಅನುಮಾನವೇ ಇಲ್ಲ.


ಕುವೆಂಪು ಎಪ್ಪತ್ತರ ದಶಕದಲ್ಲಿ ಪುನಃ ಯುವ ಲೇಖಕರನ್ನುದ್ದೇಶಿಸಿ ಮಾತನಾಡುವಾಗ, ಎಲ್ಲ ಧರ್ಮದ ಪುರೋಹಿತಶಾಹಿ ಹುಲಿಯಂತೆ ಎಂದು ವಿವರಿಸುತ್ತಾ, ಅದನ್ನು ಎದುರಿಸಲು, 'ಮೊದಲ ಗುಂಡು ತಗುಲಬೇಕಾದದ್ದು ಹುಲಿಯ ತಲೆಗಲ್ಲ, ನಿಮ್ಮ ತಲೆಗೇ! ತಲೆ... ತಲೆ... ತಲೆ, ಮೊದಲು ತಲೆಯಲ್ಲಿರುವ ಮೆದುಳನ್ನು ಕ್ಲೀನ್ ಮಾಡಬೇಕು, ಅವರಿಗಲ್ಲ. ಆ ಪುರೋಹಿತ ವರ್ಗದವರಿಗಲ್ಲ. ನಿಮಗೆ!' ಎನ್ನುತ್ತಾರೆ. ನಾವು ಇಂತಹ ಮಾತುಗಳನ್ನು ಸಂಪೂರ್ಣ ನಿರ್ಲಕ್ಷಿಸಿ, 'ಅವರು' ನಮ್ಮ ಮೆದುಳನ್ನು 'ಕ್ಲೀನ್' ಮಾಡುತ್ತಿರುವ ಸಮಾಜವನ್ನು ನಿರ್ಮಿಸಿದ್ದೇವೆ. ಹೀಗೆ ಕ್ಲೀನ್ ಅಗಿರುವವರು, ಬಸವಣ್ಣ, ಕುವೆಂಪು, ಕನಕ, ನಾರಾಯಣ ಗುರು, ಅಂಬೇಡ್ಕರ್ ಮೊದಲಾದವರನ್ನು ತಿಳಿದುಕೊಳ್ಳದೇ ಅವರ ಚಿಂತನೆಗಳನ್ನು ಹಂಚದೇ ಅದಕ್ಕೆ ವಿರುದ್ಧವಾಗಿ ನಡೆದುಕೊಂಡು, ಇವರನ್ನೆಲ್ಲಾ ತಮ್ಮ ಜಾತಿಯವರು ಎಂಬ ಕಾರಣಕ್ಕೆ ಮಾತ್ರ ಸುಪರ್ದಿಗೆ ತೆಗೆದುಕೊಂಡಿರುವ ತಮಾಷೆಗಳು ನಡೆಯುತ್ತಿವೆ.

ಎಡಬಲವೆಂದೇನೊ ನಿಮ್ಮ ಅಡಿಗಳನರಿದವಂಗೆ?
ಕಡೆ ನಡುವೆಂದೇನೊ ಮೃಡನ ಹಾಡುವಂಗೆ?
ಕುಲಛಲವೆಂದೇನೊ ಮನದ ಹೊಲೆಯ ಕಳೆದವಂಗೆ?
ತಲೆಕಾಲೆಂದೇನೊ ಮಾಯೆಯ ಬಲೆಯ
ನುಸುಳಿದವಂಗೆ?

ಎಂದ ವಚನಕಾರ ಹಡಪದ ಅಪ್ಪಣ್ಣನ ಅಂದಿನ ಮಾತಿನ ಸಾರವನ್ನು ಇಂದಿನ ಮತಭ್ರಾಂತಿಯ ಮತಿಗೆ ಹೇಳುವವರಾರು?



ಚುರುಮುರಿ



ತಮ್ಮಣ್ಣನ ಜಿಎಸ್‌ಟಿ

• ಮಣ್ಣೆರಾಜು

ತರಕಾರಿ ಗಾಡಿ ತಳ್ಳಿಕೊಂಡು ತಮ್ಮಣ್ಣ ಬಂದ. 'ಯಾಕೆ ತಮ್ಮಣ್ಣ ಇವತ್ತು ಲೇಟು?' ಸುಮಿ ಕೇಳಿದಳು.

'ಹೆಂಡ್ತಿ ಜೊತೆ ಮೀಟಿಂಗ್ ಇತ್ತು, ಅದಕ್ಕೆ ತಡ ಆಯ್ತು' ಅಂದ.

ಅಕ್ಕಪಕ್ಕದ ಮನೆಯ ಪದ್ಮಾ, ಪಂಕಜ ತರಕಾರಿ ಕೊಳ್ಳಲು ಬಂದರು.

'ಇನ್ಮೇಲೆ ತರಕಾರಿಯನ್ನು ಕೊಸರು ಕೇಳಬೇಡಿ, ಚೌಕಾಶಿ ಮಾಡಬೇಡಿ, ಫಿಕ್ಸೆಡ್ ರೇಟ್...' ತಮ್ಮಣ್ಣ ನಿಷ್ಠುರವಾಗಿ ಹೇಳಿದ.

'ಚೌಕಾಶಿ ಮಾಡದೆ ತರಕಾರಿ ಖರೀದಿಸಿದರೆ ಸಾಂಬಾರ್ ರುಚಿ ಇರುವುದಿಲ್ಲ' ಅಂದಳು ಪದ್ಮಾ.

'ಯಾವುದೇ ತರಕಾರಿ ಕೊಂಡರೂ ಮಾರ್ಕೆಟ್ ರೇಟ್ ಮೇಲೆ 5 ಪರ್ಸೆಂಟ್ ಜಿಎಸ್‌ಟಿ ಕೊಡಬೇಕು'.

'ತಳ್ಳೋ ಗಾಡಿಯ ತರಕಾರಿಗೂ ಜಿಎಸ್‌ಟಿ ಕೊಡಬೇಕಾ?!...' ಪಂಕಜ ಆಕ್ಷೇಪಿಸಿದಳು.

'ನಾವು ರೆಗ್ಯುಲರ್ರಾಗಿ ನಿಮ್ಮ ಹತ್ರನೇ ತರಕಾರಿ ಕೊಳ್ತೀವಿ, ನಮಗೆ ರಿಯಾಯಿತಿ ಇಲ್ವಾ?' ಸುಮಿ ಕೇಳಿದಳು.

'ಇದೆ, ಫ್ರೆಶ್ ತರಕಾರಿಗೆ 5 ಪರ್ಸೆಂಟ್ ಜಿಎಸ್‌ಟಿ ಕೊಡಿ, ಓಲ್ಡ್ ಸ್ಟಾಕ್ ತರಕಾರಿಗೆ ಜಿಎಸ್‌ಟಿ ವಿನಾಯಿತಿ ಕೊಡ್ತೀನಿ' ಅಂದ.

'ಸರಿ, ಜಿಎಸ್‌ಟಿ ಅಂದರೆ ಏನು ಅಂತ ಅಂದುಕೊಂಡಿದ್ದೀರಿ?' ಕೇಳಿದಳು ಪಂಕಜ.

'ಜಿಎಸ್‌ಟಿ ಅಂದ್ರೆ ಗಾಡಿ ಸೇವಾ ತೆರಿಗೆ. ಗಾಡಿ ತಳ್ಳಿಕೊಂಡು ನಿಮ್ಮ ಮನೆ ಬಾಗಿಲಿಗೆ ಬಂದು ತರಕಾರಿ ಸೇವೆ ಕೊಡುತ್ತಿದ್ದೇನಲ್ಲ, ಅದರ ತೆರಿಗೆ ಕೊಡಬೇಕು'.

'ಜಿಎಸ್‌ಟಿ ವಿಧಿಸಬೇಕು ಅಂತ ನಿಮಗೆ ಯಾವ ಸರ್ಕಾರ ಆದೇಶ ಮಾಡಿದೆ?' ಪದ್ಮಾ ಕೇಳಿದಳು.

'ನನ್ನ ಹೆಂಡ್ತಿಯ ಆದೇಶ ಮೇಡಂ. ನಾನು ತರಕಾರಿ ಗಾಡಿ ತಳ್ಳುತ್ತೇನೆ, ಅವಳು ಸಂಸಾರ ತಳ್ಳುತ್ತಾಳೆ. ಈ ತಳ್ಳಾಟದ ತಾಪತ್ರಯ ನಿವಾರಣೆಗೆ ಹೆಂಡತಿ ಜಿಎಸ್‌ಟಿ ಜಾರಿ ಮಾಡಿದ್ದಾಳೆ. ಸರ್ಕಾರ ನಡೆಸುವುದಕ್ಕಿಂತ ಸಂಸಾರ ನಡೆಸೋದು ಕಷ್ಟ ಅಂತ ನಿಮಗೂ ಗೊತ್ತಲ್ವೇ?' ಅಂದ ತಮ್ಮಣ್ಣ.

ಹೆಂಗಸರು ಮರುಮಾತನಾಡದೆ ತರಕಾರಿ ಆರಿಸಿಕೊಂಡರು.

ಸಂಗತ

ಸರ್ಕಾರದ ನೆರವು ಮತ್ತು ಜನರ ಹಕ್ಕು

ಸರ್ಕಾರದ ಉಚಿತ ಕೊಡುಗೆಗಳ ಬಗ್ಗೆ ರಾಜಕೀಯ ನಾಯಕರ ಧೋರಣೆಗಿಂತ ತಜ್ಞರ ಅಭಿಪ್ರಾಯ ಮತ್ತು ಸಲಹೆಗಳನ್ನು ಗಮನಿಸುವುದು ಅವಶ್ಯ

• ಮಲ್ಲಿಕಾರ್ಜುನ ಹೆಗ್ಗಳಗಿ

ಕಾದಂಬರಿಕಾರ ರಾವಬಹಾದ್ದೂರ (ಆರ್.ಬಿ. ಕುಲಕರ್ಣಿ) ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಈ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅನೇಕರು ಅವರಿಗೆ ಚೆಕ್ ಮತ್ತು ಡಿ.ಡಿ. ಮೂಲಕ ಹಣ ಕಳಿಸತೊಡಗಿದರು. ವರದಿಗಾರರೊಬ್ಬರನ್ನು ಕರೆದು, 'ನನಗೆ ಸಾರ್ವಜನಿಕರಿಂದ ಸಹಾಯ ಬೇಡ. ಯಾರೂ ಹಣ ಕಳಿಸಬಾರದು' ಎಂದು ಹೇಳಿ, ಆ ಹೇಳಿಕೆ ಪ್ರಕಟಿಸಲು ಕೋರಿದರು. ಎಲ್ಲ ಪತ್ರಿಕೆಗಳಲ್ಲಿ ಈ ವರದಿ ಪ್ರಕಟವಾಗುವಂತೆಯೂ ನೋಡಿಕೊಂಡರು. ತಮಗೆ ಬಂದ ಚೆಕ್, ಡಿ.ಡಿ. ವಾಪಸ್ ಕಳಿಸಿಕೊಟ್ಟರು.

ಆಗ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ, ರಾವಬಹಾದ್ದೂರ ಅವರ ಆರೈಕೆಗೆ ₹10 ಸಾವಿರ ಸಹಾಯಧನ ಪ್ರಕಟಿಸಿದರು. ಅರಣ್ಯ ಸಚಿವರಾಗಿದ್ದ ಜಿ.ಎಸ್.ಬಾಗಲಕೋಟ ಅವರು ರಾವಬಹಾದ್ದೂರ ನಿವಾಸಕ್ಕೆ ಬಂದು ಚೆಕ್ ನೀಡಿದರು. 'ಅಭಿಮಾನಿಗಳ ಹಣ ನಿರಾಕರಿಸಿದ ನೀವು ಸರ್ಕಾರದ ಚೆಕ್ ಯಾಕೆ ಸ್ವೀಕರಿಸಿದ್ದೀರಿ' ಎಂದು ಪ್ರಶ್ನಿಸಿದಾಗ, 'ಸರ್ಕಾರದ ಹಣ ನಮ್ಮೆಲ್ಲರ ಹಣ, ನಾವು ತೆರಿಗೆ ಕೊಟ್ಟ ದುಡ್ಡು, ಈ ಹಣವನ್ನು ಜನಕಲ್ಯಾಣಕ್ಕೆ ಬಳಸುವುದು ಸರ್ಕಾರದ ಜವಾಬ್ದಾರಿ ಮತ್ತು ಧರ್ಮ. ಸರ್ಕಾರದ ಸಹಾಯ ಪಡೆಯುವುದು ನನ್ನ ಹಕ್ಕು. ಅದು ಭಿಕ್ಷೆ ಅಲ್ಲ' ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ, 'ಸರ್ಕಾರದ ಉಚಿತ ಕೊಡುಗೆಗಳ ಸಂಸ್ಕೃತಿ (ರೇವ್ಡಿ ಕಲ್ಚರ್) ದೇಶಕ್ಕೆ ಅತ್ಯಂತ ಅಪಾಯಕಾರಿ' ಎಂದು ಎಎಪಿಯನ್ನು ಗುರಿಯಾಗಿಸಿ ಟೀಕಾಪ್ರಹಾರ ಮಾಡಿದ್ದಾರೆ. 'ಉಚಿತ ಯೋಜನೆಗಳು ಪ್ರಚಾರಕ್ಕಾಗಿ ಅಲ್ಲ, ದೇಶ ಕಟ್ಟಲು' ಎಂದು ಎಎಪಿಯ ಸಂಚಾಲಕರೂ ಆದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪ್ರತಿಕ್ರಿಯಿಸಿದ್ದಾರೆ. ಈ ನಾಯಕರ ಭಿನ್ನ ವಾದ ಕೇಳಿದಾಗ ರಾವಬಹಾದ್ದೂರ ಅವರ ಮಾತು ಥಟ್ಟನೆ ನೆನಪಾಯಿತು.

ರಾಜಕೀಯ ನಾಯಕರು ಚುನಾವಣೆಗಳನ್ನು ಕಣ್ಣಮುಂದೆ ಇಟ್ಟುಕೊಂಡು ಮಾತನಾಡುವುದು ಉಂಟು. ಆದರೆ ಸರ್ಕಾರದ ಉಚಿತ ಕೊಡುಗೆಗಳ ಮಹತ್ವದ ಬಗ್ಗೆ ಹಣಕಾಸು ಸಂಸ್ಥೆಗಳು, ಚಿಂತಕರು, ತಜ್ಞರು, ಸಮಾಜ ವಿಜ್ಞಾನಿಗಳ ಅಭಿಪ್ರಾಯ ಮತ್ತು ಸಲಹೆಗಳನ್ನು ಗಮನಿಸುವುದು ಅವಶ್ಯ.

ಅಂತರರಾಷ್ಟ್ರೀಯ ಹಣಕಾಸು ನಿಧಿಯು ಏಪ್ರಿಲ್‌ನಲ್ಲಿ ಬಿಡುಗಡೆ ಮಾಡಿದ ವರದಿಯಲ್ಲಿ, ನಾಗರಿಕರಿಗೆ ಸರ್ಕಾರ ಒದಗಿಸುವ ಉಚಿತ ಸೌಲಭ್ಯಗಳಿಂದಾದ ಸಕಾರಾತ್ಮಕ ಬದಲಾವಣೆಯ ಬಗ್ಗೆ ಮಹತ್ವದ ಮಾಹಿತಿ ನೀಡಿದೆ. ಉಚಿತ ಪಡಿತರ ಒದಗಿಸುವ ಯೋಜನೆಯಿಂದ ಕಡುಬಡತನದ ನಿವಾರಣೆಗೆ ಬಹು ದೊಡ್ಡ ನೆರವಾಗಿದೆ. ಅವರ ಆರೋಗ್ಯ ವೃದ್ಧಿಸಿದೆ. ದುಡಿಯುವ ಉತ್ಸಾಹ ಹೆಚ್ಚಿದೆ. 2011ರಲ್ಲಿ ದೇಶದಲ್ಲಿ ಕಡುಬಡತನದ ಪ್ರಮಾಣ ಪ್ರತಿಶತ 22 ಇತ್ತು. ಈಗ 10.2ಕ್ಕೆ ಇಳಿದಿದೆ ಎಂದು ಹೇಳಿದೆ.

ನಿತ್ಯದ ಆಹಾರ ಪದಾರ್ಥಗಳನ್ನು ಪುಕ್ಕಟೆಯಾಗಿ ವಿತರಿಸುವ ಯೋಜನೆಗಳನ್ನು ಹಲವು ರಾಜ್ಯ ಸರ್ಕಾರಗಳು ಜಾರಿಗೆ ತಂದಿವೆ. ಅಂಗವಿಕಲ, ವಿಧವಾ, ವೃದ್ಧಾಪ್ಯ ಪಿಂಚಣಿ, ಹೆರಿಗೆ ಭತ್ಯೆ, ಹೀಗೆ ಸಾಮಾಜಿಕ ಭದ್ರತೆಯ ಹಲವು ಯೋಜನೆಗಳು ಜಾರಿಯಲ್ಲಿವೆ. ಇವು ಅಸಹಾಯಕರನ್ನು ರಕ್ಷಿಸುತ್ತಿವೆ. ಅಮರ್ತ್ಯ ಸೇನ್, ಎಲಿನಾರ್ ಆಸ್ಟ್ರಂ ಮುಂತಾದ ಚಿಂತಕರು ಸರ್ಕಾರದ ಉಚಿತ ಕೊಡುಗೆಗಳನ್ನು ಬೆಂಬಲಿಸಿದ್ದಾರೆ.

ಸಂಪತ್ತು ಮತ್ತು ಅನುಕೂಲಗಳು ಕೆಲವೇ ಜನರ ಪಾಲಾಗಿವೆ. ಉಳ್ಳವರು ಮತ್ತು ಬಡವರ ನಡುವಿನ ಅಂತರ ಹೆಚ್ಚಾಗಿದೆ. ಸರ್ಕಾರದ ಸೌಲಭ್ಯಗಳನ್ನು ನೆಚ್ಚಿಕೊಂಡು ಬಹಳಷ್ಟು ಜನ ಬದುಕುತ್ತಿದ್ದಾರೆ. ಬಸವಾದಿ ಶರಣರ ದಾಸೋಹ ಪರಿಕಲ್ಪನೆಯಲ್ಲಿ ಈ ಘನವಾದ ಉದ್ದೇಶ ಅಡಗಿದೆ. ಉಚಿತ ಕೊಡುಗೆಗಳನ್ನು ನಿಲ್ಲಿಸಿದರೆ, ವರ್ಗ ಸಂಘರ್ಷ ಖಂಡಿತವಾಗಿಯೂ ಹುಟ್ಟಿಕೊಳ್ಳುತ್ತದೆ. ಸಮಾಜದ ಶಾಂತಿ ಹಾಳಾಗುತ್ತದೆ.

ಉಚಿತ ಪಡಿತರ ಉಂಡು ಫಲಾನುಭವಿಗಳು ಆಲಸಿಗಳಾಗಿದ್ದಾರೆ, ಕೆಲಸಕ್ಕೆ ಕಾರ್ಮಿಕರೇ ಸಿಗುತ್ತಿಲ್ಲ ಎಂದು ಕೆಲವರು ಟೀಕೆ ಮಾಡುತ್ತಾರೆ. ಇವರಿಗೆ ಬಡವರ ಹಸಿವಿನ ಸಂಕಟ ಗೊತ್ತಿಲ್ಲ ಎಂದೇ ಅರ್ಥೈಸಬೇಕಾಗುತ್ತದೆ.



ಬೆಳಗಾವಿ ಜಿಲ್ಲೆಯ ಹಂದಿಗುಂದ ಗ್ರಾಮದ 75 ವರ್ಷದ ಜನಪದ ಕಲಾವಿದ ವೀರಭದ್ರಪ್ಪ ಅವರು ಕಲಾವಿದರ ಮಾಸಾಶನಕ್ಕೆ ಅರ್ಜಿ ಸಲ್ಲಿಸಿ ದೀರ್ಘಕಾಲದಿಂದ ಕಾಯುತ್ತಿದ್ದಾರೆ. ಸರ್ಕಾರ ಮಂಜೂರು ಮಾಡಿಲ್ಲ. ಅವರು ನನ್ನೆದುರು ಅಳಲು ತೋಡಿಕೊಂಡಾಗ, ಕಲಾವಿದರ ಮಾಸಾಶನಕ್ಕೆ ಬದಲು ವೃದ್ಧಾಪ್ಯ ವೇತನಕ್ಕೆ ಅರ್ಜಿ ಸಲ್ಲಿಸಲು ಸೂಚಿಸಿದೆ. ಅವರು ಕೆಂಡಾಮಂಡಲರಾದರು. 'ನಾನು ಕಲಾವಿದ. ಕಲಾವಿದರಿಗೆ ಕೊಡುವ ಮಾಸಾಶನ ಬೇಕು' ಎಂದು ಸ್ಪಷ್ಟವಾಗಿ ಹೇಳಿದರು. ಅವರು ತಮ್ಮ ಹಕ್ಕು ಮಂಡಿಸುವ ಧೋರಣೆ ಕಂಡು ಹೆಮ್ಮೆ ಎನಿಸಿತು.

ಆಸ್ಟ್ರೇಲಿಯಾದಲ್ಲಿ ನಿರುದ್ಯೋಗಿಗಳಿಗೆ ಭತ್ಯೆ ನೀಡಲಾಗುತ್ತದೆ. ಸರ್ಕಾರವೇ ನಿರುದ್ಯೋಗಿಗಳಿಗೆ ಉದ್ಯೋಗ ಹುಡುಕಿಕೊಡುತ್ತದೆ. ನಮ್ಮಲ್ಲಿಯೂ ಎಲ್ಲರಿಗೂ ಉದ್ಯೋಗ ಕೊಡಿಸುವ ವ್ಯವಸ್ಥೆಗೆ ಸರ್ಕಾರ ಮುಂದಾಗಬೇಕು. ಇದು ಖಂಡಿತವಾಗಿ ಬಹು ದೊಡ್ಡ ಬದಲಾವಣೆಗೆ ನಾಂದಿ ಹಾಡುತ್ತದೆ.

ಬಡತನಕ್ಕೆ ಪ್ರಜೆಗಳು ಮಾತ್ರವೇ ಕಾರಣರಲ್ಲ; ಸರ್ಕಾರವು ಬಡತನವನ್ನು ನಿವಾರಿಸದಿರುವುದು ತಪ್ಪು ಎಂದು ಚಿಂತಕರೊಬ್ಬರು ಹೇಳಿದ ಮಾತು, ಎಲ್ಲ ಸರ್ಕಾರಗಳ ಮುಖಕ್ಕೆ ಕನ್ನಡಿ ಹಿಡಿದಂತಿದೆ.

ವಾಚಕರ ವಾಣಿ

ತೆರಿಗೆ ಬರೆ: ಕೌಟಿಲ್ಯನ ನೀತಿ ಅನುಸರಿಸಿ

ದೇಶವು ಹಣದುಬ್ಬರದಂತಹ ಸಮಸ್ಯೆಗಳನ್ನು ಎದುರಿಸುತ್ತಿರುವಾಗ, ದಿನನಿತ್ಯದ ಅಗತ್ಯ ವಸ್ತುಗಳ ಮೇಲೆ ಹೇರಿರುವ ತೆರಿಗೆ ಹೊರೆಯು ಜನಸಾಮಾನ್ಯರ ಬವಣೆಯನ್ನು ಮತ್ತಷ್ಟು ಹೆಚ್ಚಿಸಿದೆ. ಈ ಸಂದರ್ಭದಲ್ಲಿ, ತೆರಿಗೆ ನೀತಿಗೆ ಸಂಬಂಧಿಸಿದಂತೆ ಆಚಾರ್ಯ ಕೌಟಿಲ್ಯನ ಕೆಳಗಿನ ನೀತಿಗಳು ಹೆಚ್ಚು ಪ್ರಸ್ತುತ ಮತ್ತು ನಮ್ಮ ಜಿಎಸ್‌ಟಿ ಮಂಡಳಿಯವರು ಅವನ್ನು ಅರ್ಥೈಸಿಕೊಳ್ಳುವುದು ಅತ್ಯವಶ್ಯಕ ಎನಿಸುತ್ತದೆ:

'ತೆರಿಗೆ ಅನ್ನುವುದು ಜನರಿಗೆ ನೋವು ಕೊಡುವ ವಿಚಾರ ಆಗಬಾರದು. ತೆರಿಗೆ ಪದ್ಧತಿಯನ್ನು ನಿರ್ಧರಿಸುವಾಗಲೂ ತುಂಬಾ ಎಚ್ಚರಿಕೆ ಬೇಕು. ಸರ್ಕಾರಗಳು ಜೇನುಹುಳಗಳಂತೆ ತೆರಿಗೆ ಸಂಗ್ರಹಿಸಬೇಕು. ಜೇನುಹುಳ ಪ್ರತೀ ಹೂವಿನಿಂದ ಎಷ್ಟು ತೆಗೆಯಬೇಕೋ ಅಷ್ಟೇ ಮಕರಂದವನ್ನು ಹೀರಿಕೊಳ್ಳುತ್ತದೆ. ಜೇನು ಉಳಿಯಬೇಕು, ಹೂವು ಉಳಿದು, ಆಮೇಲೆ ಕಾಯಾಗಬೇಕು. ಇದೇ ರೀತಿ ತೆರಿಗೆಯನ್ನು ಸಣ್ಣ ಸಣ್ಣ ಭಾಗಗಳನ್ನಾಗಿ ಮಾಡಿ ಸಂಗ್ರಹ ಮಾಡಬೇಕು. ಒಂದೇ ಏಟಿಗೆ ದೊಡ್ಡ ಹೊರೆ ಹಾಕಬಾರದು'.

'ರಾಜನು ತೆರಿಗೆ ಸಂಗ್ರಹ ಮಾಡುವಾಗ ತೋಟದಲ್ಲಿ ಹಣ್ಣು ಕೀಳುವ ಕೆಲಸಗಾರನಂತೆ ಯೋಚಿಸಬೇಕು. ಎಳೆಕಾಯಿಗಳನ್ನು ಕಿತ್ತರೆ ಹಾಳಾಗುತ್ತವೆ, ಬಲಿತ ಕಾಯಿಗಳು ಮತ್ತು ಹಣ್ಣುಗಳನ್ನು ಕೀಳಬೇಕು. ಅಂದರೆ ಯಾರಿಂದ, ಯಾವಾಗ, ಎಷ್ಟು ತೆರಿಗೆ ಸಂಗ್ರಹಿಸಬೇಕು ಅನ್ನುವುದನ್ನು ಅವರ ಶಕ್ತಿಗೆ ಅನುಸಾರವಾಗಿ ನಿರ್ಧರಿಸಬೇಕು'.

ಪ್ರಶಾಂತ್ ಎಚ್.ಎಸ್., ಬೆಂಗಳೂರು

ಬೈಕ್ ಸೈಲೆನ್ಸರ್ ಮಾರ್ಪಾಡು: ತಪ್ಪಲಿ ಕಿರಿಕಿರಿ

ಬೈಕ್‌ಗೆ ಕಂಪನಿಯಿಂದ ನೀಡಿದ ಸೈಲೆನ್ಸರ್ ಬದಲಿಸಿ, ಹೆಚ್ಚು ಶಬ್ದ ಉಂಟುಮಾಡುವ ಸೈಲೆನ್ಸರ್‌ಗಳನ್ನು ಅಳವಡಿಸಿಕೊಂಡು ಓಡಿಸುವ ಪರಿಪಾಟ ಹೆಚ್ಚುತ್ತಿದೆ. ಕಾಲೇಜುಗಳ ಬಳಿ ಕೆಲವರು ಇಂತಹ ಬೈಕ್ ಓಡಿಸುತ್ತಾ ಕಿರಿಕಿರಿ ಉಂಟುಮಾಡುತ್ತಾರೆ. ಇದರಿಂದ ತರಗತಿಯಲ್ಲಿ ಪಾಠ ಮಾಡುವ ಬೋಧಕರಿಗೂ ಆಲಿಸುವ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತದೆ. ಅಧಿಕ ಶಬ್ದದಿಂದ ವಾಯುಮಾಲಿನ್ಯವೂ ಹೆಚ್ಚುತ್ತದೆ. ಆರೋಗ್ಯದ ಸಮಸ್ಯೆ ಇರುವವರು ಮತ್ತು ಸಣ್ಣ ಮಕ್ಕಳ ಆರೋಗ್ಯದ ಮೇಲೆ ಇದು ಪರಿಣಾಮ ಬೀರುತ್ತದೆ. ಹಾಗೆಯೇ ನಾಯಿ, ದನಕರುಗಳು ಗಾಬರಿಗೆ ಒಳಗಾಗಿ ರಸ್ತೆಯ ಮೇಲೆ ಮನಬಂದಂತೆ ನುಗ್ಗುತ್ತವೆ. ಇದರಿಂದಾಗಿ ವಾಹನ ಸವಾರರು ಅಪಾಯ ಎದುರಿಸಬೇಕಾಗುತ್ತದೆ.

ಕೇರಳದಲ್ಲಿ ಇಂತಹ ಶಬ್ದ ಕೇಳಿ ಗಾಬರಿಯಾದ ಹಸುವೊಂದು ವ್ಯಕ್ತಿಯೊಬ್ಬರ ಬೈಕ್ ಮೇಲೆ ಎಗರಿದ ಪರಿಣಾಮವಾಗಿ, ಆ ವ್ಯಕ್ತಿ ಬೈಕ್‌ನಿಂದ ಬಿದ್ದು ಸಾವನ್ನಪ್ಪಿರುವುದು ಈಚೆಗೆ ವರದಿಯಾಗಿದೆ. ಕೆಲವು ತಿಂಗಳ ಹಿಂದೆ ಬಿಹಾರದಲ್ಲಿ ಶಬ್ದ ಮಾಡಿಕೊಂಡು ಹೋಗುತ್ತಿದ್ದ ಬೈಕ್ ಅನ್ನು ಹಸುವೊಂದು ಅಟ್ಟಿಸಿಕೊಂಡು ಹೋಗುತ್ತಿರುವ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು. ಹೀಗಾಗಿ, ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು. ಸಂಬಂಧಿಸಿದ ಅಧಿಕಾರಿಗಳು ನಿರ್ಲಕ್ಷ್ಯ ಧೋರಣೆ ಬಿಟ್ಟು, ಬೈಕ್ ಸೈಲೆನ್ಸರ್ ಮಾರ್ಪಡಿಸಿಕೊಂಡು ಅಧಿಕ ಶಬ್ದ ಉಂಟುಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

ಚನ್ನಕೇಶವ ಜಿ.ಕೆ., ತರೀಕೆರೆ

ಸುಳ್ಳುಪತ್ತೆ ಪರೀಕ್ಷೆಯಾಗಲಿ

ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಉನ್ನತ ಪೊಲೀಸ್ ಅಧಿಕಾರಿಯೊಬ್ಬರು ಆರೋಪಿ ಸ್ಥಾನದಲ್ಲಿ ಇರುವುದೇ ಈ ಹಗರಣದ ವ್ಯಾಪ್ತಿಯನ್ನು ಹೇಳುತ್ತದೆ. ಈ ಹಗರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು. ಭ್ರಷ್ಟರು, ದಲ್ಲಾಳಿಗಳಿಗೆ ಭಯ ಮೂಡಬೇಕಾದರೆ ಈ ಹಗರಣದ ತನಿಖೆ, ವಿಚಾರಣೆ ಪ್ರಕ್ರಿಯೆಯು ಕಾಲಮಿತಿಯಲ್ಲಿ ಮುಗಿಯಬೇಕು, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಆಗಬೇಕು. ಹಗರಣದ ಪ್ರಮುಖ ಆರೋಪಿಯಾದ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರು ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಲು ನಿರಾಕರಿಸಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ. ಹಗರಣದಲ್ಲಿ ತಮ್ಮ ಪಾತ್ರ ಇಲ್ಲ ಎನ್ನುವುದಾದರೆ ಸುಳ್ಳುಪತ್ತೆ ಪರೀಕ್ಷೆ ಎದುರಿಸಲು ಅವರು ಸಮ್ಮತಿ ಸೂಚಿಸಬೇಕು.

ಪ್ರಕಾಶ್ ಮಲ್ಕಿಒಡೆಯರ್, ಹೂವಿನಹಡಗಲಿ

ಸಾರಿಗೆ ಬಸ್: ಎರಡು ಹೊಣೆ ಸಲ್ಲ

ಸಾರಿಗೆ ನಿಗಮಗಳ ಪ್ರತಿಯೊಂದು ಬಸ್‌ನಲ್ಲೂ ಚಾಲಕನೇ ನಿರ್ವಾಹಕನ ಕೆಲಸವನ್ನೂ ನಿಭಾಯಿಸುವಂತೆ ಆಗಬೇಕು ಎಂದು, ಸರ್ಕಾರ ನೇಮಿಸಿದ್ದ ಏಕ ಸದಸ್ಯ ಸಮಿತಿಯು ಶಿಫಾರಸು ಮಾಡಿರುವುದು ವರದಿಯಾಗಿದೆ (ಪ್ರ.ವಾ., ಜುಲೈ 20). ಸಾರಿಗೆ ನಿಗಮಗಳನ್ನು ಪುನಶ್ಚೇತನಗೊಳಿಸುವ ದಿಸೆಯಲ್ಲಿ ಸಮಿತಿಯು ಈ ಶಿಫಾರಸನ್ನು ಮಾಡಿರುವುದು ಮೇಲ್ನೋಟಕ್ಕೆ ಸಮಂಜಸವೆಂದು ತೋರಿದರೂ, ಇದು ಕಾರ್ಯಸಾಧುವಲ್ಲ. ಏಕೆಂದರೆ ಇದರಿಂದ ನಿರ್ವಾಹಕನ ಹುದ್ದೆಗೆ ಸೇರಬಯಸುವ ಆಕಾಂಕ್ಷಿಗಳು ಉದ್ಯೋಗದಿಂದ ವಂಚಿತರಾಗುತ್ತಾರೆ ಹಾಗೂ ಚಾಲಕನೇ ನಿರ್ವಾಹಕನಾಗಿ ಕೆಲಸ ಮಾಡುವ ಬಸ್‌ಗಳು ಮಂದಗತಿಯಲ್ಲಿ ಚಲಿಸುವುದರಿಂದ, ಪ್ರಯಾಣಿಕರು ಇಂಥ ಬಸ್‌ಗಳಲ್ಲಿ ಪ್ರಯಾಣಿಸಲು ಇಷ್ಟಪಡುವುದಿಲ್ಲ. ನಿಗಮಗಳ ದಕ್ಷತೆ ಹೆಚ್ಚಿಸಲು, ನಷ್ಟ ಸರಿದೂಗಿಸಲು ಬೇರೆ ಮಾರ್ಗಗಳಿವೆ. ಸೋರಿಕೆ ತಡೆಗಟ್ಟಿದರೆ ಸಾಕು, ನಿಗಮಗಳ ಆರ್ಥಿಕ ಸ್ಥಿತಿ ತಾನಾಗಿಯೇ ಸುಧಾರಿಸುತ್ತದೆ. ಉದ್ಯೋಗ ಅವಕಾಶಗಳನ್ನು ಕಸಿದುಕೊಳ್ಳುವ ಸಲಹೆಗೆ ಮಣೆ ಹಾಕುವುದು ಬೇಡ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಮಾದರಿಯಾಗುವ ಮಾನವೀಯ ಕಾರ್ಯ

ತಲಸ್ಸೇಮಿಯಾದಿಂದ ಬಳಲುತ್ತಿರುವ ಕಾಸರಗೋಡು ಜಿಲ್ಲೆಯ ಕುಂಬ್ಡಾಜೆ ಗ್ರಾಮದ ಸಾನ್ವಿ ಎಂಬ ಬಡ ಕುಟುಂಬದ ಬಾಲಕಿಯ ಚಿಕಿತ್ಸೆಗೆ ಬೇಕಾದ ದೊಡ್ಡ ಮೊತ್ತದ ಹಣವನ್ನು ಗ್ರಾಮಸ್ಥರು ಹಾಗೂ ಪಂಚಾಯಿತಿಯವರು ಸಮಿತಿ ರಚಿಸಿಕೊಂಡು ದಾನಿಗಳಿಂದ ಸಂಗ್ರಹಿಸಿರುವುದು ಶ್ಲಾಘನೀಯ. ಆಕೆಗೆ ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಶಸ್ತ್ರಚಿಕಿತ್ಸೆ ನಡೆಯಲಿದೆ ಎಂಬುದು ಸಮಾಧಾನದ ಸಂಗತಿ. ಬಾಲಕಿಯ ಚಿಕಿತ್ಸೆಗಾಗಿ ಬಡ ಕುಟುಂಬಕ್ಕೆ ಆಸರೆಯಾಗಿ ನಿಂತ ಗ್ರಾಮಸ್ಥರು ಹಾಗೂ ದಾನಿಗಳ ಮಾನವೀಯ ಕಾರ್ಯ ಸಮಾಜಕ್ಕೆ ಮಾದರಿಯಾಗಲಿ.

ಆರ್.ಬಿ.ಜಿ.ಘಂಟಿ, ಅಮೀನಗಡ, ಬಾಗಲಕೋಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸಾಲದ ಸುಳಿಯಲ್ಲಿ ಹತ್ತಾರು ದೇಶಗಳು

ಶ್ರೀಲಂಕಾದ ಆರ್ಥಿಕ ಕುಸಿತವು ಹಲವು ದೇಶಗಳಿಗೆ ಎಚ್ಚರಿಕೆ ಗಂಟೆಯಾಗಿದೆ. ಸಾಲದ ಸುಳಿಗೆ ಸಿಲುಕಿದಂತಹ ಸ್ಥಿತಿಯಲ್ಲಿ ಜಗತ್ತು ಇದೆ. ಹಲವು ದೇಶಗಳು ಬಿಕ್ಕಟ್ಟಿಗೆ ಒಳಗಾಗುವ ಲಕ್ಷಣಗಳು ಗೋಚರಿಸುತ್ತಿವೆ. ಸಾಲ ಹೆಚ್ಚಾಗಿರುವುದರಿಂದ ಅದಕ್ಕೆ ಪಾವತಿಸಬೇಕಾದ ಬಡ್ಡಿಯ ಹೊರೆ ಹೆಚ್ಚಾಗಿದೆ. ಅದರಿಂದಾಗಿ ವಿದೇಶಿ ವಿನಿಮಯ ಮೀಸಲು ಕರಗಿದೆ.

ಜಗತ್ತಿನ ವಿವಿಧ ದೇಶಗಳ ಸರ್ಕಾರಗಳು, ಉದ್ಯಮ ಸಂಸ್ಥೆಗಳು ಮತ್ತು ವ್ಯಕ್ತಿಗಳು ಪಡೆದ ಒಟ್ಟು ಸಾಲವನ್ನು ಜಾಗತಿಕ ಸಾಲದ ಮೊತ್ತ ಎಂದು ಹೇಳಲಾಗುತ್ತಿದೆ. ಈ ಸಾಲದ ಮೊತ್ತವು ಅಪಾಯಕಾರಿ ಮಟ್ಟ ತಲುಪಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಎಚ್ಚರಿಕೆ ನೀಡಿದೆ. ಸಾಲದ ಪ್ರಮಾಣ ಹೆಚ್ಚಳವಾಗಲು ಸುಮಾರು ಎರಡು ವರ್ಷಗಳಿಂದ ಕಾಡುತ್ತಿರುವ ಕೋವಿಡ್ ಸಾಂಕ್ರಾಮಿಕವು ಒಂದು ಕಾರಣ. ಉಕ್ರೇನ್ ಮತ್ತು ರಷ್ಯಾ ನಡುವಣ ಸಂಘರ್ಷವು ಜಾಗತಿಕ ವ್ಯಾಪಾರ ವಹಿವಾಟುಗಳನ್ನು ಏರುಪೇರಾಗಿಸಿರುವುದು ಇನ್ನೊಂದು ಕಾರಣ.

ಕಡಿಮೆ ವರಮಾನದ ದೇಶಗಳು ಮತ್ತು ಕಡಿಮೆ ವರಮಾನದ ಕುಟುಂಬಗಳು ಈಗಿನ ಸ್ಥಿತಿಯಿಂದ ಅತಿ ಹೆಚ್ಚು ತೊಂದರೆಗೆ ಸಿಲುಕುತ್ತವೆ.

ಜಾಗತಿಕ ಸಾಲವು 2021ರಲ್ಲಿ 300 ಟ್ರಿಲಿಯನ್ ಡಾಲರ್ (₹24,000 ಲಕ್ಷ ಕೋಟಿ) ತಲುಪಿತ್ತು ಎಂದು ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಫೈನಾನ್ಸ್ ಹೇಳಿದೆ. 2020ರಲ್ಲಿ ಜಾಗತಿಕ ಸಾಲದ ಮೊತ್ತವು 226 ಟ್ರಿಲಿಯನ್ ಡಾಲರ್ (₹18,080 ಲಕ್ಷ ಕೋಟಿ) ಆಗಿತ್ತು ಎಂದು ಐಎಂಎಫ್‌ನ ಜಾಗತಿಕ ಸಾಲ ದತ್ತಾಂಶ ಕೋಶವು ಹೇಳಿತ್ತು. ಒಂದೇ ವರ್ಷದಲ್ಲಿ ಈ ಪ್ರಮಾಣದ ಏರಿಕೆ ಈವರೆಗಿನ ದಾಖಲೆ.

ಸುಸ್ತಿದಾರರಾಗುವುದನ್ನು ತಪ್ಪಿಸಬೇಕಿದ್ದರೆ ಕನಿಷ್ಠ 100 ದೇಶಗಳು ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಭದ್ರತೆಯ ಮೇಲಿನ ವೆಚ್ಚವನ್ನು ತಗ್ಗಿಸಬೇಕಿದೆ. ಹೀಗೆ ವೆಚ್ಚ ತಗ್ಗಿದರೆ ಮಾರುಕಟ್ಟೆಯಲ್ಲಿ ಅಲ್ಲೋಲಕಲ್ಲೋಲ ಉಂಟಾಗುತ್ತದೆ. ಆರ್ಥಿಕ ಹಿಂಜರಿತಕ್ಕೆ ಇದು ಕಾರಣವಾಗಬಹುದು ಎಂದು ಐಎಂಎಫ್ ಎಚ್ಚರಿಸಿದೆ.

ಅರ್ಜೆಂಟೀನಾದ ಮೇಲೆ ಅತಿ ಹೆಚ್ಚು ಸಾಲ ಇದೆ. ಜಾಗತಿಕ ಮಾರುಕಟ್ಟೆಯಲ್ಲಿ ಸ್ಥಿರತೆ ಸಾಧ್ಯವಾದರೆ ಮತ್ತು ಐಎಂಎಫ್‌ನಿಂದ ಸಕಾಲದಲ್ಲಿ ನೆರವು ದೊರೆತರೆ ಹಲವು ದೇಶಗಳು ಸುಸ್ತಿದಾರರಾಗುವುದನ್ನು ತಪ್ಪಿಸಬಹುದು ಎಂದು ಪರಿಣತರು ಹೇಳಿದ್ದಾರೆ.



ಇಕ್ವಡಾರ್‌ನ ಕ್ವಿಟೊ ನಗರದಲ್ಲಿ ಭಾರಿ ಪ್ರತಿಭಟನೆ ಇತ್ತೀಚೆಗೆ ನಡೆಯಿತು. ಜನರು ಬೀದಿಗಳಲ್ಲಿ ಟೈರ್ ಸುಟ್ಟರು

ಇಕ್ವಡಾರ್

ಲ್ಯಾಟಿನ್ ಅಮೆರಿಕಾದ ಪ್ರಮುಖ ದೇಶ ಇಕ್ವಡಾರ್ ಕೋವಿಡ್–19 ಸಾಂಕ್ರಾಮಿಕದಿಂದಾಗಿ ಬಿಕ್ಕಟ್ಟಿಗೆ ಸಿಲುಕಿದೆ. ಎರಡು ವರ್ಷಗಳ ಹಿಂದೆಯೇ ಕೋವಿಡ್‌ನಿಂದ ಆರ್ಥಿಕವಾಗಿ ತತ್ತರಿಸಿದ್ದ ಇಕ್ವಡಾರ್‌ಗೆ ಜನರ ಹಿಂಸಾತ್ಮಕ ಪ್ರತಿಭಟನೆ ಕಂಟಕವಾಗಿ ಪರಿಣಮಿಸಿತು. ನಿತ್ಯ ಬಳಕೆಯ ವಸ್ತುಗಳು ಹಾಗೂ ತೈಲ ದರ ವಿಪರೀತ ಏರಿಕೆ ಖಂಡಿಸಿ ಜನರು ಸರ್ಕಾರದ ವಿರುದ್ಧ ಬೀದಿಗಿಳಿದರು. ಇದೇ ಜೂನ್‌ನಲ್ಲಿ ಪ್ರತಿಭಟನೆಯನ್ನು ಹತ್ತಿಕ್ಕುವ ಉದ್ದೇಶದಿಂದ ತುರ್ತು ಪರಿಸ್ಥಿತಿಯನ್ನು ಹೇರಲಾಗಿತ್ತು. ಒತ್ತಡಕ್ಕೆ ಮಣಿದು ತೈಲ ಬೆಲೆಯನ್ನು ಸರ್ಕಾರ ಇಳಿಸಿತಾದರೂ, ಜನರ ಆಕ್ರೋಶ ತಣ್ಣಗಾಗಿಲ್ಲ. ತೈಲ ಹಾಗೂ ಆಹಾರ ಸಾಮಗ್ರಿಗಳಿಗೆ ಸಬ್ಸಿಡಿ ನೀಡುತ್ತಿರುವ ಸರ್ಕಾರ, ದೊಡ್ಡ ಪ್ರಮಾಣದ ಸಾಲ ಮರುಪಾವತಿಯ ಒತ್ತಡದಲ್ಲಿದೆ.

ನೈಜೀರಿಯಾ

ತನ್ನ ಆದಾಯದ ಶೇಕಡ 30ರಷ್ಟು ಪಾಲನ್ನು ಸಾಲದ ಮೇಲಿನ ಬಡ್ಡಿಪಾವತಿಗೆ ವ್ಯಯಿಸುತ್ತಿರುವ ದೇಶ ನೈಜೀರಿಯಾ. ದೇಶದ ಹಣದುಬ್ಬರ ಪ್ರಮಾಣ ಶೇ 17.7ಕ್ಕೆ ಏರಿಕೆಯಾಗಿದೆ. ಸರಕು ಮತ್ತು ಸೇವೆಗಳ ದರ ದುಬಾರಿಯಾಗಿದ್ದು, ನೈಜೀರಿಯಾ ಜನರು ಈಗಾಗಲೇ ಇದರ ಪರಿಣಾಮ ಎದುರಿಸುತ್ತಿದ್ದಾರೆ. ದಿನಸಿ, ಪಾನೀಯಗಳ ದರ ಒಂದು ವರ್ಷದ ಅವಧಿಯಲ್ಲಿ ದುಪ್ಪಟ್ಟಾಗಿದೆ. ಡೀಸೆಲ್ ಬೆಲೆಯು ಕೆಲವು ವಾರಗಳಲ್ಲಿ ಎರಡು ಪಟ್ಟು ಹೆಚ್ಚಾಗಿದೆ. ದೇಶದ ಹಲವು ಕಂಪನಿಗಳೂ ಬೆಲೆ ಏರಿಕೆಯ ಬಿಸಿಯನ್ನು ಎದುರಿಸುತ್ತಿವೆ. ಈ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ಹೋಗಲಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಎಲ್ ಸಲ್ವಡಾರ್

ಜನಪ್ರಿಯ ಕ್ರಿಪ್ಟೊಕರೆನ್ಸಿ ಬಿಟ್‌ಕಾಯಿನ್‌ಗೆ ಕಾನೂನಾತ್ಮಕ ಮಾನ್ಯತೆ ನೀಡಿದ ಮೊದಲ ದೇಶ ಎಂಬ ಹೆಗ್ಗಳಿಕೆ ಎಲ್ ಸಲ್ವಡಾರ್ ದೇಶದ್ದು. ಬಿಟ್‌ಕಾಯಿನ್‌ಗಳನ್ನು ಸರ್ಕಾರವೇ ಯಥೇಚ್ಛವಾಗಿ ಖರೀದಿಸಿತು. ಸಲ್ವಡಾರ್ ಬಳಿ ಈಗ ₹584 ಕೋಟಿ ಮೊತ್ತದ 2,000ಕ್ಕೂ ಹೆಚ್ಚು ಬಿಟ್‌ಕಾಯಿನ್‌ಗಳಿವೆ ಎಂದು ಅಂದಾಜಿಸಲಾಗಿದೆ. ದೇಶದ ಎಲ್ಲ ವ್ಯವಹಾರಗಳಿಗೂ ಬಿಟ್‌ಕಾಯಿನ್ ಬಳಸುವ ನಿರ್ಧಾರವನ್ನು ಸರ್ಕಾರ ಪ್ರಕಟಿಸಿತು. ಆದರೆ ಮಾರುಕಟ್ಟೆಯಲ್ಲಿ ಬಿಟ್‌ಕಾಯಿನ್ ಮೌಲ್ಯ ಶೇ 50ರಷ್ಟು ಕುಸಿದಿದ್ದರಿಂದ ದೇಶದ ಆರ್ಥಿಕತೆ ದುಃಸ್ಥಿತಿಗೆ ಬಂದಿತು. ಈಗ ಎಲ್ ಸಲ್ವಡಾರ್‌ಗೆ ಸಾಲ ಮರುಪಾವತಿ ಹಾಗೂ ಬಡ್ಡಿಪಾವತಿ ಕಷ್ಟವಾಗಿದೆ. ಇದೇ ಮಾರ್ಚ್‌ನಲ್ಲಿ 'ಬಿಟ್‌ಕಾಯಿನ್ ಸಿಟಿ' ನಿರ್ಮಾಣಕ್ಕೆ 100 ಕೋಟಿ ಡಾಲರ್ (₹8,000 ಕೋಟಿ) ಹಣ ಹೊಂದಿಸಲು 'ವಾಲ್ಕನೊ ಬಾಂಡ್' ಅನ್ನು ಸರ್ಕಾರ ಪರಿಚಯಿಸಿತ್ತು. ಆದರೆ ನಿರೀಕ್ಷೆಯಷ್ಟು ಹೂಡಿಕೆ ಆಗಿಲ್ಲ ಎಂದು ಬ್ಲೂಮ್‌ಬರ್ಗ್ ವರದಿ ಮಾಡಿದೆ. ಕ್ರಿಪ್ಟೊಕರೆನ್ಸಿಯಿಂದ ಹಣಕಾಸು ಸ್ಥಿರತೆ ಕಷ್ಟವಾಗಲಿದೆ ಎಂದು ಆತಂಕ ವ್ಯಕ್ತಪಡಿಸಿರುವ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಎಲ್ ಸಲ್ವಡಾರ್ ಜೊತೆಗಿನ ಮಾತುಕತೆಯನ್ನು ಸ್ಥಗಿತಗೊಳಿಸಿದೆ. ಈ ನಡುವೆ, 2023ರ ಜನವರಿಯಲ್ಲಿ 8 ಕೋಟಿ ಡಾಲರ್ (₹640 ಕೋಟಿ) ಬಡ್ಡಿ ಮರುಪಾವತಿಯ ಒತ್ತಡಕ್ಕೆ ಸರ್ಕಾರ ಸಿಲುಕಿದೆ.

ಪಾಕಿಸ್ತಾನ


ಪಾಕಿಸ್ತಾನವೂ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಆರ್ಥಿಕ ನೆರವಿಗಾಗಿ ಪಾಕಿಸ್ತಾನವು ಐಎಂಎಫ್ ಮೊರೆ ಹೋಗಿತ್ತು. ಆದರೆ ಐಎಂಎಫ್ ಜೊತೆಗಿನ ಒಡಂಬಂಡಿಕೆಯು ನನೆಗುದಿಗೆ ಬಿದ್ದಿದೆ. ಹೀಗಾಗಿ, ಪಾಕಿಸ್ತಾನ ಅಂದುಕೊಂಡಂತೆ ತಕ್ಷಣಕ್ಕೆ ಐಎಂಎಫ್ ನೆರವು ಸಿಗುವುದು ಕಷ್ಟ ಎನ್ನಲಾಗಿದೆ. ಆಮದು ವಸ್ತುಗಳ ದರ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದು, ಪಾವತಿ ಕೊರತೆಯನ್ನು ದೇಶ ಎದುರಿಸುತ್ತಿದೆ. ಶ್ರೀಲಂಕಾದಲ್ಲಿ ಆಗಿರುವಂತೆಯೇ ಪಾಕಿಸ್ತಾನದಲ್ಲಿಯೂ ವಿದೇಶಿ ವಿನಿಮಯ ಸಂಗ್ರಹ ಭಾರಿ ಪ್ರಮಾಣದಲ್ಲಿ ಇಳಿಕೆಯಾಗಿದೆ. ಈಗ ₹78 ಸಾವಿರ ಕೋಟಿ ಮಾತ್ರ ವಿನಿಮಯ ಖಜಾನೆಯಲ್ಲಿ ಉಳಿದಿದೆ. ಇಲ್ಲಿನ ರೂಪಾಯಿ ಕೂಡಾ ದಾಖಲೆಯ ಮಟ್ಟಕ್ಕೆ ಕುಸಿದು ಆತಂಕ ಸೃಷ್ಟಿಸಿದೆ. ದೇಶವು ತನ್ನ ಆದಾಯದ ಶೇ 40ರಷ್ಟು ಭಾಗವನ್ನು ಬಡ್ಡಿ ಪಾವತಿಗಾಗಿಯೇ ಖರ್ಚು ಮಾಡುತ್ತಿರುವುದು ಜನರಲ್ಲಿ ದಿಗಿಲು ಮೂಡಿಸಿದೆ.

ಬೆಲರೂಸ್

ಉಕ್ರೇನ್ ಮೇಲಿನ ರಷ್ಯಾ ಯುದ್ಧಕ್ಕೆ ಬೆಂಬಲ ನೀಡಿರುವ ಬೆಲರೂಸ್ ವಿಶ್ವದ ಕೆಂಗಣ್ಣಿಗೆ ಗುರಿಯಾಗಿದೆ. ರಷ್ಯಾದ ರೀತಿ ಬೆಲರೂಸ್ ಮೇಲೂ ಜಾಗತಿಕ ಆರ್ಥಿಕ ನಿರ್ಬಂಧ ಹೇರಲಾಗಿದೆ. ಇದು ಬೆಲರೂಸ್ ಅನ್ನು ಬಿಕ್ಕಟ್ಟಿನಲ್ಲಿ ಇರಿಸಿದೆ. ರಷ್ಯಾದ ರೀತಿ ದೊಡ್ಡ ರಫ್ತು ಮಾರುಕಟ್ಟೆಗಳನ್ನು ಬೆಲರೂಸ್ ಹೊಂದಿಲ್ಲವಾದರೂ, ರಷ್ಯಾದಷ್ಟೇ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇಲ್ಲಿನ ಖಾಸಗಿ ಬ್ಯಾಂಕ್‌ಗಳು ಹಾಗೂ ಸಣ್ಣ ಹಣಕಾಸು ಸಂಸ್ಥೆಗಳು ಇನ್ನಿಲ್ಲದ ಸಮಸ್ಯೆ ಎದುರಿಸುತ್ತಿವೆ. ಆರ್ಥಿಕ ನಿರ್ಬಂಧದ ಕಾರಣಕ್ಕೆ, ಇಲ್ಲಿನ ಪೊಟ್ಯಾಷ್ ರಸಗೊಬ್ಬರವನ್ನು ಭಾರತ, ಬ್ರೆಜಿಲ್ ಮೊದಲಾದ ದೇಶಗಳಿಗೆ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಪೊಟ್ಯಾಷ್ ಉತ್ಪಾದನಾ ಕಂಪನಿಗಳನ್ನು ಮುಚ್ಚುವ ಭೀತಿ ಎದುರಾಗಿದ್ದು, ಈ ಕಂಪನಿಗಳು ಸಾಲ ಮಾಡಿ ನೌಕರರಿಗೆ ಸಂಬಳ ನೀಡುತ್ತಿವೆ. ಕಳೆದ ವಾರವಷ್ಟೇ, ಬೆಲರೂಸ್ ನೀಡಬೇಕಿದ್ದ 100 ಕೋಟಿ ಡಾಲರ್ (₹8,000 ಕೋಟಿ) ಸಾಲ ಮರುಪಾವತಿಯ ಅವಧಿಯನ್ನು ರಷ್ಯಾ ವಿಸ್ತರಿಸಿದೆ. ಜಾಗತಿಕ ನಿರ್ಬಂಧ ತೆರವುಗೊಳ್ಳದ ಹೊರತು ದೇಶದ ಆರ್ಥಿಕ ಸ್ಥಿತಿ ಸರಿದಾರಿಗೆ ಬರುವುದು ಕಷ್ಟ ಎನ್ನಲಾಗಿದೆ.

ಇಥಿಯೋಪಿಯಾ

ಇಥಿಯೋಪಿಯಾ ಸಾಲದ ಸುಳಿಯಲ್ಲಿದೆ. 2015ರಲ್ಲಿ ಇಥಿಯೋಪಿಯಾದಲ್ಲಿ ಶುರುವಾದ ಸಾಮೂಹಿಕ ಪ್ರತಿಭಟನೆಗಳು ದೇಶದ ಆರ್ಥಿಕ ಪರಿಸ್ಥಿತಿ ಶೋಚನೀಯ ಸ್ಥಿತಿಯತ್ತ ಸಾಗುತ್ತಿದೆ ಎಂಬುದರ ಸೂಚಕವಾಗಿದ್ದವು. ಇದೇ ಅವಧಿಯಲ್ಲಿ ಟಿಗ್ರೆ ನಾಗರಿಕ ಯುದ್ಧಕ್ಕೂ ದೇಶ ಸಾಕ್ಷಿಯಾಯಿತು. 2020ರ ವೇಳೆಗೆ ದೇಶದ ಸಾಲದ ಪ್ರಮಾಣ ₹4.32 ಲಕ್ಷ ಕೋಟಿಗೆ (5,470 ಕೋಟಿ ಡಾಲರ್) ತಲುಪಿತ್ತು. ಜಿ–20 ಸಮಾವೇಶವು ಇಥಿಯೋಪಿಯಾವನ್ನು ಸಾಲದಿಂದ ಹೊರತರಲು ಕಾರ್ಯಕ್ರಮ ರೂಪಿಸಿತು. ಆದರೆ ಉಕ್ರೇನ್ ಯುದ್ಧ ಹಾಗೂ ಇಥಿಯೋಪಿಯಾದ ಆಂತರಿಕ ಯುದ್ಧದ ಕಾರಣ, ಜಿ–20 ದೇಶಗಳು ಇದರ ಕಡೆಗೆ ಗಮನ ಹರಿಸಲಿಲ್ಲ. ಸಾಲವನ್ನು ಮರುಹೊಂದಾಣಿಕೆ ಮಾಡುವ ಯತ್ನಗಳಿಗೆ ಮತ್ತೆ ಚಾಲನೆ ನೀಡಲಾಗುವುದು ಎಂದು ಫ್ರಾನ್ಸ್ ಹಾಗೂ ಚೀನಾ ಹೇಳಿರುವುದು ಇಥಿಯೋಪಿಯಾ ಸರ್ಕಾರದಲ್ಲಿ ಆಶಾಭಾವ ಮೂಡಿಸಿದೆ.



ಇಥಿಯೋಪಿಯಾದ ಮಕ್ಕಳು ತೀವ್ರವಾದ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಎಎಫ್‌ಪಿ ಚಿತ್ರ



ಘಾನಾದ ಅಕ್ರಾ ನಗರದಲ್ಲಿ ಜನರು ಇತ್ತೀಚೆಗೆ ಪ್ರತಿಭಟನೆ ನಡೆಸಿದರು ಎಎಫ್‌ಪಿ ಚಿತ್ರ

ಘಾನಾ

ಘಾನಾ ದೇಶವು ವಿವೇಚನಾರಹಿತವಾಗಿ ಸಾಲ ಮಾಡಿದೆ. ಈಗ ಈ ದೇಶದ ಸಾಲವು ಜಿಡಿಪಿಯ ಶೇ 85ರಷ್ಟಕ್ಕೆ ತಲುಪಿದೆ. ಐಎಂಎಫ್ ನೆರವು ಇಲ್ಲದೆಯೇ ಸಾಲದ ಸ್ಥಿತಿಯನ್ನು ದೇಶವು ನಿರ್ವಹಿಸಲಿದೆ ಎಂದು ಅಲ್ಲಿನ ಹಣಕಾಸು ಸಚಿವ ಕೆನ್ ಒಫೊರಿ ಅಟ್ಟ ಹೇಳಿದ್ದಾರೆ. ಅಲ್ಲಿನ ಕರೆನ್ಸಿ ಸೀಡಿಯ ಮೌಲ್ಯವು ಈ ವರ್ಷ ಶೇ 25ರಷ್ಟು ಕುಸಿದಿದೆ. ತೆರಿಗೆ ವರಮಾನದ ಅರ್ಧಭಾಗವು ಸಾಲದ ಮೇಲಿನ ಬಡ್ಡಿಗೆ ವ್ಯಯ ಆಗುತ್ತಿದೆ. ಹಣದುಬ್ಬರವು ಶೇ 30ರಷ್ಟನ್ನು ತಲುಪಿದೆ. ಹಣದುಬ್ಬರ ನಿಯಂತ್ರಣ, ಕರೆನ್ಸಿ ಮೌಲ್ಯ ಹೆಚ್ಚಳಕ್ಕೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಡ್ಡಿದರವನ್ನು ಹೆಚ್ಚಿಸಲಾಗಿದೆ.

ಅರ್ಜೆಂಟೀನಾ

ಅರ್ಜೆಂಟೀನಾದ ಸ್ಥಿತಿಯು ಶೋಚನೀಯವಾಗಿದೆ. ಅಲ್ಲಿನ ಕರೆನ್ಸಿ ಪೆಸೊದ ಮೌಲ್ಯವು ಶೇ 50ರಷ್ಟು ತಗ್ಗಿದೆ. ವಿವಿಧ ಮೀಸಲು ನಿಧಿಗಳು ಕರಗುತ್ತಿವೆ. ಡಾಲರ್ ಎದುರು ಪೆಸೊ ಮೌಲ್ಯ ಕುಗ್ಗಿದೆ. 2020ರಲ್ಲಿ ಒಂದು ಬಾರಿ ಸಾಲ ಮರುಹೊಂದಾಣಿಕೆ ಮಾಡಿಕೊಳ್ಳಲಾಗಿದೆ. 44 ಬಿಲಿಯನ್ ಡಾಲರ್ (₹3.52 ಲಕ್ಷ ಕೋಟಿ) ಸಾಲ ನೀಡಲು ಐಎಂಎಫ್ ಇದೇ ಮಾರ್ಚ್‌ನಲ್ಲಿ ಒಪ್ಪಿಗೆ ಕೊಟ್ಟಿದೆ. ಹಾಗಾಗಿ ಸದ್ಯಕ್ಕೆ ಸಾಲ ಮರುಪಾವತಿಯ ಹೊರೆ ಅರ್ಜೆಂಟೀನಾದ ಮೇಲೆ ಇಲ್ಲ. ಆದರೆ, 2024ರ ಹೊತ್ತಿಗೆ ಒಮ್ಮಿಂದೊಮ್ಮೆಲೆ ಸಾಲ ಮರುಪಾವತಿ ಆರಂಭವಾಗಲಿದೆ. ಆ ಹೊತ್ತಿಗೆ ದೇಶವು ಸಾಲ ಮರುಪಾವತಿಯ ಒಪ್ಪಂದ ಉಲ್ಲಂಘಿಸುವ ಸಾಧ್ಯತೆಯೇ ಹೆಚ್ಚು ಎನ್ನಲಾಗಿದೆ.

ಉಕ್ರೇನ್

ರಷ್ಯಾ–ಉಕ್ರೇನ್ ಸಂಘರ್ಷ ತಾರಕಕ್ಕೆ ಏರಿದೆ. 2,000 ಕೋಟಿ ಡಾಲರ್‌ಗಿಂತ (₹1.60 ಲಕ್ಷ ಕೋಟಿ) ಹೆಚ್ಚಿನ ಸಾಲವನ್ನು ಮರುಹೊಂದಾಣಿಕೆ ಮಾಡಿಕೊಳ್ಳಲೇಬೇಕಾಗುತ್ತದೆ ಎಂದು ಹೂಡಿಕೆದಾರ ಸಂಸ್ಥೆಗಳಾದ ಮಾರ್ಗನ್ ಸ್ಟ್ಯಾನ್ಲಿ ಮತ್ತು ಅಮುಂಡಿ ಎಚ್ಚರಿಸಿವೆ. ಕಳೆದ ಸೆಪ್ಟೆಂಬರ್‌ನಲ್ಲಿ ದೇಶವು 120 ಕೋಟಿ ಡಾಲರ್ (₹9,600 ಕೋಟಿ) ಸಾಲ ಮರುಪಾವತಿ ಮಾಡಿಲ್ಲ. ಎರಡು ವರ್ಷದ ಮಟ್ಟಿಗೆ ಸಾಲಮರುಪಾವತಿ ಸ್ಥಗಿತಗೊಳಿಸ ಬೇಕು ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿ 'ನಾಫ್ಟೊಗ್ಯಾಸ್' ಇತ್ತೀಚೆಗೆ ಕೋರಿದೆ. ಸರ್ಕಾರವೂ ಇದನ್ನು ಅನುಸರಿಸಬಹುದು ಎಂಬ ಅನುಮಾನ ಹೂಡಿಕೆದಾರರಲ್ಲಿ ಈಗ ಇದೆ.

ಕೆನ್ಯಾ

ಬಡ್ಡಿ ಪಾವತಿಗಾಗಿ ಕೆನ್ಯಾವು ಒಟ್ಟು ವರಮಾನದ ಶೇ 30ರಷ್ಟನ್ನು ವೆಚ್ಚ ಮಾಡುತ್ತಿದೆ. ಈ ದೇಶದ ಬಾಂಡ್‌ಗಳು ಅದರ ಅರ್ಧದಷ್ಟು ಮೌಲ್ಯ ಕಳೆದುಕೊಂಡಿವೆ. ಬಂಡವಾಳ ಮಾರುಕಟ್ಟೆಗೆ ಈ ದೇಶಕ್ಕೆ ಪ್ರವೇಶವೇ ಇಲ್ಲ. 2024ರಲ್ಲಿ ದೇಶವು 200 ಕೋಟಿ ಡಾಲರ್ (₹16,000 ಕೋಟಿ) ಮರುಪಾವತಿ ಮಾಡಬೇಕಿದೆ. ಕೋವಿಡ್ ಸಾಂಕ್ರಾಮಿಕ ಆರಂಭಕ್ಕೆ ಮೊದಲೇ ಕೆನ್ಯಾವು ಭಾರಿ ಸಾಲವನ್ನು ಹೊಂದಿತ್ತು. ಕೋವಿಡ್ ಸಂದರ್ಭದಲ್ಲಿ ದೇಶವು ಮತ್ತಷ್ಟು ಸಾಲ ಮಾಡಿದೆ.

ಟ್ಯುನೀಷಿಯಾ

ಆಫ್ರಿಕಾದ ಹಲವು ದೇಶಗಳು ಐಎಂಎಫ್ ಮೊರೆ ಹೋಗಲೇಬೇಕಾದ ಸ್ಥಿತಿಯಲ್ಲಿ ಇವೆ. ಟ್ಯುನೀಷಿಯಾ ಅದರಲ್ಲಿ ಮುಂಚೂಣಿಯಲ್ಲಿ ಇದೆ. ಈ ದೇಶದ ಆರ್ಥಿಕ ಕೊರತೆಯು ಒಟ್ಟು ಬಜೆಟ್‌ನ ಶೇ 10ರಷ್ಟಿದೆ. ಹಾಗೆಯೇ ಸಾಲದ ಮೊತ್ತವು ಒಟ್ಟು ಆಂತರಿಕ ಉತ್ಪನ್ನದಷ್ಟೇ (ಜಿಡಿಪಿ) ಇದೆ ಎಂದು ಅಂದಾಜಿಸಲಾಗಿದೆ. 2020ರಲ್ಲಿ ಜಿಡಿಪಿಯಲ್ಲಿ ಶೇ 9ರಷ್ಟು ಕುಸಿತ ಆಗಿತ್ತು. ನಿರಂಕುಶಾಧಿಕಾರಿ ಝೈನ್ ಅಲ್ ಆಬಿದೀನ್ ಬಿನ್ ಅಲಿ ಸರ್ಕಾರವನ್ನು ಜನರ ಪ್ರತಿಭಟನೆಯು 2011ರಲ್ಲಿ ಪತನಗೊಳಿಸಿತು. ಆದರೆ, ಪ್ರಜಾಪ್ರಭುತ್ವದೆಡೆಗಿನ ಪರಿವರ್ತನೆಯು ಸುಲಲಿತವಾಗಿ ಆಗಲಿಲ್ಲ. ಅರ್ಥ ವ್ಯವಸ್ಥೆಗೆ ಪುನಶ್ಚೇತನವೂ ಸಿಗಲಿಲ್ಲ. ಐಎಂಎಫ್‌ನ ನೆರವು ಅನಿವಾರ್ಯವಾಗಿದೆ.

ಈಜಿಪ್ಟ್


ಈಜಿಪ್ಟ್‌ನ ಸಾಲದ ಪ್ರಮಾಣವು ಜಿಡಿಪಿಯ ಶೇ 95ರಷ್ಟಿದೆ. ಜೆ.ಪಿ. ಮಾರ್ಗನ್ ಪ್ರಕಾರ, ಅತಿ ಹೆಚ್ಚು ಅಂದರೆ 1,100 ಕೋಟಿ ಡಾಲರ್ (₹88,000 ಕೋಟಿ) ವಿದೇಶಿ ಹೂಡಿಕೆ ಈ ವರ್ಷದಲ್ಲಿ ಹೊರಹೋಗಿದೆ. ಮುಂದಿನ ನಾಲ್ಕು ವರ್ಷಗಳಲ್ಲಿ ಈಜಿಪ್ಟ್ ಭಾರಿ ಮೊತ್ತದ ಸಾಲ ಪಾವತಿಸಬೇಕಿದೆ. ಹಾಗೆಯೇ 2024ರಲ್ಲಿ 3,300 ಕೋಟಿ ಡಾಲರ್ (₹26,400 ಕೋಟಿ) ಬಾಂಡ್ ಮೊತ್ತವನ್ನೂ ಪಾವತಿಸಬೇಕಿದೆ. ಈಜಿಪ್ಟ್ ಪೌಂಡ್‌ನ ಮೌಲ್ಯ ಶೇ 15ರಷ್ಟು ಕಡಿತಗೊಂಡಿದೆ. ದೇಶವು ಐಎಂಎಫ್‌ನ ನೆರವು ಕೋರಿದೆ. ಈಜಿಪ್ಟ್‌ಗೆ ಎಷ್ಟು ಸಾಲ ನೀಡಬೇಕೋ ಅದಕ್ಕಿಂತ ಹೆಚ್ಚಿನ ಸಾಲವನ್ನು ಐಎಂಎಫ್ ಈಗಾಗಲೇ ನೀಡಿದೆ.

ಆಧಾರ: ರಾಯಿಟರ್ಸ್, ಐಎಂಎಫ್

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು


ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಕ್ರಿಪ್ಟೋಕರೆನ್ಸಿಗಳು ಆರ್ಥಿಕತೆಯನ್ನು ಅಸ್ಥಿರಗೊಳಿಸುತ್ತವೆ ಎಂದು ನೀವು ಭಾವಿಸುತ್ತೀರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ





ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 178

ದಕ್ಷಸಂಹಾರಕ್ಕೆ ಹೊರಟ ವೀರಭದ್ರ


'ಪರಮೇಶ್ವರನು ದಕ್ಷನ ಯಜ್ಞವನ್ನ ನಾಶ ಮಾಡುವಂತೆ ಹೇಳಿದ್ದನ್ನು ಕೇಳಿದ ವೀರಭದ್ರ ಸಂತೋಷಗೊಳ್ಳುತ್ತಾನೆ. ವೀರಭದ್ರನೊಡನೆ ಪ್ರಳಯಾಗ್ನಿಯಂತೆ ಭಯಂಕರರೂ ವೀರರೂ ಆದಂತಹ ಕೋಟಿ ಗಣಗಳು ಹೊರಡುತ್ತವೆ. ಮಹಾಬಲಶಾಲಿ ಗಣಗಳೊಂದಿಗೆ ಮಹಾತ್ಮನಾದ ವೀರಭದ್ರ ರಥವನ್ನೇರುತ್ತಾನೆ. ಸಾವಿರ ಭುಜಗಳುಳ್ಳ ಮಹಾವೀರನಾದ ಆತ ತನ್ನ ಶರೀರಕ್ಕೆ ಸರ್ಪಗಳನ್ನು ಸುತ್ತಿಕೊಂಡು ಮಹಾಭಯಂಕರನಾಗಿ ಕಾಣಿಸುತ್ತಿದ್ದ. ಅವನ ರಥ ಎರಡು ಸಾವಿರ ಗಜಗಳಷ್ಟು ದೊಡ್ಡದಾಗಿತ್ತು. ಅದಕ್ಕೆ ಹತ್ತು ಸಾವಿರ ಸಿಂಹಗಳನ್ನು ಕಟ್ಟಲಾಗಿತ್ತು. ರಥದ ರಕ್ಷಣೆಗಾಗಿ ಉಭಯ ಬದಿಯಲ್ಲೂ ಆಯುಧಗಳನ್ನು ಧರಿಸಿದ ಅನೇಕ ವೀರ ಸೈನಿಕ ಗಣಗಳಿದ್ದರು. ಇದರ ಜೊತೆಗೆ ಸಾವಿರಗಟ್ಟಲೆ ಸಿಂಹಗಳು, ಹುಲಿಗಳು, ಮೊಸಳೆಗಳು, ಆನೆಗಳು ಇದ್ದವು. ವೀರಭದ್ರನಿಗೆ ಅಲ್ಲಿದ್ದ ಕಲ್ಪವೃಕ್ಷವು ಹೂವಿನ ಮಳೆಯನ್ನು ಸುರಿಸಿ ಹರಸಿತು. ಶಿವಪ್ರಮಥ ಗಣಗಳು ವೀರಭದ್ರನನ್ನು ಹೊಗಳಿ ಹುರಿದುಂಬಿಸಿದವು. ಶಿವನ ಮಹಿಮೆಯನ್ನು ಕೀರ್ತಿಸಿದುವು. ಅಲ್ಲಿ ಮಹೋತ್ಸವವೇ ನಡೆಯಿತು.

'ಕಾಳಿ, ಕಾತ್ಯಾಯನೀ, ಈಶಾನೀ, ಚಾಮುಂಡಾ, ಮುಂಡಮರ್ದಿನೀ ಭದ್ರಕಾಳೀ, ಭದ್ರಾ, ತ್ವರಿತಾ, ವೈಷ್ಣವೀ ಎಂಬ ಒಂಬತ್ತು ದುರ್ಗಾದೇವತೆಗಳೊಡನೆ ಮಹಾಕಾಳಿಯು ದಕ್ಷನ ವಿನಾಶಕ್ಕಾಗಿ ಹೊರಟಳು. ಶಿವನ ಆಜ್ಞೆಯಂತೆ ಡಾಕೀನೀ, ಶಾಕೀನಿ, ಭೂತಗಳು, ಪ್ರಮಥಗಳು, ಗುಹ್ಯಕಗಳು, ಕೂಷ್ಮಾಂಡಗಳೆಂಬ ಗಣಗಳು, ಪರ್ಪಟಗಣಗಳು, ಚಟಕಗಣಗಳು, ಬ್ರಹ್ಮರಾಕ್ಷಸಗಳು, ಭೈರವರು, ಕ್ಷೇತ್ರಪಾಲಗಣಗಳು ಸಹ ದಕ್ಷಯಜ್ಞ ಧ್ವಂಸಕ್ಕಾಗಿ ತೆರಳಿದವು. ಯೋಗಿನೀಚಕ್ರವು ತನ್ನ ಅರವತ್ತನಾಲ್ಕು ಯೋಗಿನಿಗಳ ಸಮೂಹಗಳೊಡನೆ ದಕ್ಷಯಜ್ಞನಾಶಕ್ಕೆ ತೆರಳಿತು. ಮಹಾಬಲಶಾಲಿಗಳಾದಂಥ ಕೋಟ್ಯಾಂತರ ಗಣಗಳು ವೀರಭದ್ರನನ್ನು ಹಿಂಬಾಲಿಸಿದವು. ಅವುಗಳ ಸಂಖ್ಯೆ ಹೇಳುತ್ತೇನೆ ಕೇಳು ನಾರದ' – ಎಂದ ಬ್ರಹ್ಮ ಅವುಗಳ ವಿವರ ನೀಡುತ್ತಾನೆ.

'ಶಂಕುಕರ್ಣನೆಂಬ ಗಣನಾಯಕ ಹತ್ತುಕೋಟಿ ಗಣಗಳೊಡನೆ, ಕೇಕರಾಕ್ಷಸ ಹತ್ತು ಕೋಟಿ, ವಿಕೃತ ಎಂಟು ಕೋಟಿ, ವಿಶಾಖ ಆರುಕೋಟಿ, ಜ್ವಾಲಕೋಶ ಹನ್ನೆರಡುಕೋಟಿ, ಜೀಮಂತ ಏಳುಕೋಟಿ, ದುದ್ರಭ ಎಂಟುಕೋಟಿ, ಕಪಾಲೀ ಐದುಕೋಟಿ, ಸಂದಾರಕ ಆರುಕೋಟಿ, ಕೋಟಿಕುಂಡ ಕೋಟಿ, ವಿಷ್ಟಂಭ ಅರವತ್ತನಾಲ್ಕು ಕೋಟಿ, ಶನ್ನಾದ ಮತ್ತು ಪಿಪ್ಪಲ ಸಾವಿರ ಕೋಟಿ, ಆವೇಶನ ಹಾಗೂ ಚಂದ್ರತಾಪನ ಎಂಟುಕೋಟಿ, ಮಹಾವೇಶ ಸಾವಿರಕೋಟಿ, ಕುಂಡೀಪರ್ವತರು ಹನ್ನೆರಡು ಕೋಟಿ ಗಣಗಳೊಡನೆ. ಕಾಲ, ಕಾಲಕ, ಮಹಾಕಾಲರೆಂಬ ಗಣನಾಯಕರು ನೂರು ಕೋಟಿ ಗಣಗಳೊಡನೆ, ಅಗ್ನಿಕೃತ್ತ ನೂರು ಕೋಟಿ, ಅಗ್ನಿಮುಖ ಕೋಟಿ ಗಣಗಳೊಡನೆ, ಆದಿತ್ಯಮೂರ್ಧನ ಮತ್ತು ಘನಾವಹನ ಕೋಟಿ ಗಣಗಳೊಡನೆ, ಸನ್ನಾಹ ನೂರುಕೋಟಿ ಗಣಗಳೊಡನೆ, ಕುಮುದ ಕೋಟಿ ಗಣಗಳೊಡನೆ, ಅಮೋಘ, ಕೋಕಿಲ ಕೋಟಿ ಗಣಗಳೊಡನೆ, ಕಾಷ್ಠಾಗೂಢ, ಸುಕೇಶಿ, ವೃಷಭ, ಸುಮಂತ್ರಕರೆಂಬುವವರು ಅರವತ್ತನಾಲ್ಕು ಕೋಟಿ ಗಣಗಳೊಡನೆ, ಕಾಕಪಾದೋದರ ಹಾಗೂ ಸಂತಾನಕ ಅರವತ್ತು ಕೋಟಿ, ಮಹಾಬಲ ಮತ್ತು ಮಧುಪಿಂಗ ಒಂಬತ್ತು ಕೋಟಿ, ನೀತ ಮತ್ತು ಪೂರ್ಣಭದ್ರ ತೊಂಬತ್ತು ಕೋಟಿ, ಚತುರ್ವಕ್ತ್ರ ನೂರುಕೋಟಿ, ವಿರೂಪಾಕ್ಷ ಅರವತ್ತನಾಲ್ಕು ಕೋಟಿ, ತಾಲಕೇತು, ಷಡಾನನ, ಪಂಚಾಸ್ಯ, ಸಂವರ್ತ, ಕುಲೀಶ, ಸ್ವಯಂಪ್ರಭ ಲೋಕಾಂತಕ, ದೀಪ್ತಾತ್ಮಾ, ದೈತ್ಯಾಂತಕ, ಭೃಂಗಿರಿಟಿ, ಅಶನಿ, ಭಾಲಕರೆಂಬ ಗಣನಾಯಕರು ಅರವತ್ತುಕೋಟಿ ಗಣಗಳೊಡನೆ ದಕ್ಷಯಜ್ಞ ನಾಶಕ್ಕೆ ಹೊರಟರು.

'ಹೀಗೆ ವೀರಭದ್ರನು ಕೋಟ್ಯಂತರ ಭೂತಗಣಗಳ ಜೊತೆಗೆ, ಮೂರುಕೋಟಿ ಕಾಡುನಾಯಿಗಳನ್ನು ಕೂಡಿಕೊಂಡು ದಕ್ಷಯಜ್ಞನಾಶಕ್ಕಾಗಿ ತೆರಳಿದ. ಆಗ ರುದ್ರಗಣಗಳು ಎದೆ ನಡುಗಿಸುವ ರಣಭೇರಿಯನ್ನು ಬಾರಿಸಿ, ಶಂಖಗಳನ್ನು ಊದಿ, ಜಯಘೋಷ ಮಾಡಿದವು. ಅನೇಕ ಶುಭಶಕುನಗಳು ಆದವು' ಎಂಬಲ್ಲಿಗೆ ಸತೀಖಂಡದ ಮೂವತ್ತಮೂರನೆಯ ಅಧ್ಯಾಯ ಮುಗಿಯುತ್ತದೆ. ●

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಬದುಕಿನ ಸ್ವಾರಸ್ಯ

ಸ್ವಾರಸ್ಯವ ಮಿತಮಾರಿಗಮಿರದು ಜೀವನದಿ |
ಪಾರದಿರ್ಕೆಯ ನೆನೆದು ನಡೆಯಲದು ಸಫಲ ||
ಸಾರಂಗಳ್ ಎಲ್ಲಪಣ್ಗಳವುಮ್ ಒಂದರೊಳಿರವು |
ಆರೋಗಿಸಿರುವುದನು – ಮಂಕುತಿಮ್ಮ || 676 ||

ಪದ-ಅರ್ಥ: ಸ್ವಾರಸ್ಯವಮಿತಮಾರಿಗಮಿರದು = ಸ್ವಾರಸ್ಯವು + ಅಮಿತಂ(ಮಿತಿಯಿಲ್ಲದ) + ಆರಿಗು(ಯಾರಿಗೂ) + ಇರದು, ಪಾರದಿರ್ಕೆಯ = ಪಾರದ (ಮಿತಿಯ) + ಇರ್ಕೆಯ(ಇರುವಿಕೆಯನ್ನು), ಸಾರಂಗಳ್ = ಸಾರಗಳು, ಎಲ್ಲಪಣ್ಗಳವುಮ್ = ಎಲ್ಲ + ಪಣ್ಗಳವುಮ್(ಹಣ್ಣುಗಳ), ಒಂದರೊಳಿರವು = ಒಂದರೊಳು + ಇರವು, ಆರೋಗಿಸಿರುವುದನು = ಆರೋಗಿಸು(ಅನುಭವಿಸು) + ಇರುವುದನು.

ವಾಚ್ಯಾರ್ಥ: ಅಪರಿಮಿತವಾದ ಸ್ವಾರಸ್ಯ ಯಾರಿಗೂ ಜೀವನದಲ್ಲಿ ಇರುವುದಿಲ್ಲ. ಆ ಮಿತಿಯನ್ನು ತಿಳಿದು ನಡೆದರೆ ಸಫಲತೆ. ಎಲ್ಲ ಹಣ್ಣುಗಳ ರುಚಿ, ಸಾರ ಒಂದರಲ್ಲೇ ಇರಲಾರದು. ಇರುವುದನ್ನು ಸವಿ, ಅನುಭವಿಸು.

ವಿವರಣೆ: ಸ್ವಾರಸ್ಯವೆಂಬುದು ಬದುಕಿನ ಸೊಗಸು. ಅದು ಬದುಕಿನ ಬೇಗೆಯನ್ನು ತುಸು ಕಡಿಮೆ ಮಾಡಿ, ಭಾರವನ್ನು ಹಗುರಗೊಳಿಸುತ್ತದೆ. ಸ್ವಾರಸ್ಯ ಯಾವಾಗಲೂ ಇರುವುದಲ್ಲ. ಆಗಾಗ ಬೇಸಿಗೆಯ ತಂಗಾಳಿಯಂತೆ ಬರುವುದು. ಆದರೆ ಅದನ್ನು ಮನದಲ್ಲಿ ಹಿಡಿದಿಟ್ಟುಕೊಂಡು ಬಹುಕಾಲ ಆನಂದಿಸುವುದು ರಸಿಕತೆ. ಸ್ವಾರಸ್ಯಗಳನ್ನು ಯಾರೂ ತಟ್ಟೆಯಲ್ಲಿಟ್ಟು ಕೊಡುವುದಿಲ್ಲ. ನಮ್ಮ ಕಷ್ಟಗಳ ಕಾರ್ಮೋಡಗಳ ನಡುವೆ ತೂರಿ ಬರುವ ಸೂರ್ಯನ ಕಿರಣಗಳಂತಿರುವ ಸ್ವಾರಸ್ಯಗಳನ್ನು ಕಾಣುವ, ಅನುಭವಿಸುವ ಕಣ್ಣು ಬೇಕು. ಹಾಗೆ ಕಾಣುವ ಕಣ್ಣು ಇರದಿದ್ದರೆ ಸ್ವರ್ಗದಲ್ಲೂ ಸ್ವಾರಸ್ಯ ಇರಲಾರದು. ಡಿ.ವಿ.ಜಿ ಯವರು ತಮ್ಮ "ಕೇತಕೀವನ" ಕವನಸಂಕಲನದಲ್ಲಿ ಯಾರು 'ಬಡವ'ರು ಎಂದು ತಿಳಿಸುತ್ತಾರೆ.

ಆಗಸದ ಬೆರಗಿಂದೆ ಮೈಮರೆಯದವ ಬಡವ
ಲೋಗರ ಆಯಸದ ಅಳವರಿಯದವ ಬಡವ
ರಾಗರಸಗಳ ಹತಿಗೆ ಸೋಲದಾತನು ಬಡವ
ರಾಗಿಯೊಳಗೆ ಅಮೃತವನು ಕಾಣದವ ಬಡವ
ಅರುಮೆಯೆಳೆತವೆ ಸೃಷ್ಟಿ ಮರ್ಮವೆನದವ ಬಡವ
ದುರಿತವಂತರಿಗಾಗಿ ಮರುಗದವ ಬಡವ
ಸಿರಿಯ ಹೊರಗರಸಿ ತನ್ನೊಳು ಕಾಣದವ ಬಡವ
ಸರಸತೆಯನುಳಿದು ಬಾಳ್ವವನೆ ಕಡು ಬಡವ

ಬದುಕಿನುದ್ದಕ್ಕೂ ಹರಿದು ಬರದಿರುವ ಆದರೆ ಸುಸಂಸ್ಕೃತ ಕಣ್ಣಿಗೆ ತೋರಿಬರುವ ಸ್ವಾರಸ್ಯವನ್ನು ಅನುಭವಿಸುವ ಜೀವನ ಸಫಲ. ಎಲ್ಲರಿಗೂ ಒಂದೇ ಬಗೆಯ ಸ್ವಾರಸ್ಯ ದೊರೆಯಲಾರದು. ಹೇಗೆ ಪ್ರತಿಯೊಂದು ಹಣ್ಣಿಗೂ ಅದರದೇ ಆದ ಸಾರ ಮತ್ತು ರುಚಿ ಇರುವಂತೆ ಪ್ರತಿಯೊಂದು ಜೀವಿಗೂ ಜೀವನ ಸ್ವಾರಸ್ಯವೇ ಬೇರೆ. ಇರುವುದನ್ನು, ನಮಗೆ ದೊರಕಿರುವುದನ್ನು ಆಸ್ವಾದಿಸುವುದು ರಸಿಕತೆ. ಆ ರಸಿಕತೆಯನ್ನು ಆಸ್ವಾದಿಸುವುದಕ್ಕೆ ಶ್ರೀಮಂತಿಕೆ, ಅಧಿಕಾರ, ಜನಮನ್ನಣೆ ಬೇಕಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜುಲೈ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಅಷ್ಟಮಿ ಗಂ. 08-13 ನಕ್ಷತ್ರ: ಅಶ್ವಿನಿ ಗಂ. 14-17 ಯೋಗ: ಧೃತಿ ಗಂ .12-20, **ಕರಣ:** ಕೌಲವ ಗಂ. 08-13, ಕರ್ಕಾಟಕ ಮಾಸದ 04 ನೇ ದಿನ.

ರಾಹುಕಾಲ : ಮಧ್ಯಾಹ್ನ 01:30 – 03:00

ಸೂರ್ಯೋದಯ : 06-17 ಸೂರ್ಯಾಸ್ತ : 06-57

ಮುಸ್ಲಿಂ ದಿನಾಂಕ : 21 ಜುಲ್‌ಹಿಜಾನ್

ಅದೃಷ್ಟ ಸಂಖ್ಯೆ : 1, 9

ಮೇಷ : ಪ್ರಭಾವಿ ವ್ಯಕ್ತಿಯೊಬ್ಬರಿಂದ ನಿಮ್ಮ ಕಾರ್ಯಸಾಧನೆಗೆ ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ಅನುಕೂಲ ಆಗಲಿದೆ. ಹಿಡಿತಕ್ಕೆ ಸಿಕ್ಕಿರುವ ಕೆಲಸಗಳನ್ನು ಸಮರ್ಥವಾಗಿ ಕಾರ್ಯರೂಪಕ್ಕೆ ತರುವಲ್ಲಿ ಯಶಸ್ಸು ಸಿಗುವುದು.

ವೃಷಭ : ಉದ್ಯೋಗಾಂಕ್ಷಿಗಳಿಗೆ ಸಂದರ್ಶನ ಎದುರಿಸಲು ಬೇಕಾದ ತಯಾರಿ ನಡೆಸಿಕೊಳ್ಳಿ. ವ್ಯವಹಾರದಲ್ಲೂ, ಸಂಬಂಧದಲ್ಲೂ ನಿಮ್ಮ ಮನೋಭಾವವೇ ಹಿಂದಿನ ಸೋಲುಗಳಿಗೆ ಕಾರಣವೆಂಬುವುದನ್ನು ಮರೆಯದಿರಿ.

ಮಿಥುನ: ಯಂತ್ರೋಪಕರಣಗಳ ಖರೀದಿಯಿಂದಾಗಿ ಅಧಿಕ ಮಟ್ಟದಲ್ಲಿ ಖರ್ಚು ಸಂಭವಿಸುವುದು. ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಹೆಚ್ಚಿನ ಆದಾಯ ಲಭಿಸುತ್ತದೆ. ಪುಣ್ಯ ಸಂಪಾದನೆಗಾಗಿ ತೀರ್ಥಯಾತ್ರೆ ಕೈಗೊಳ್ಳುವಿರಿ.

ಕರ್ಕಾಟಕ : ಈ ದಿನದಂದು ಒಂದು ವಿಚಾರದ ಬಗೆಗಿನ ಯೋಚನೆಯಿಂದಾಗಿ ಉಳಿದೆಲ್ಲಾ ಕೆಲಸದಲ್ಲಿ ಮನಸ್ಸಿಲ್ಲದಂತಾಗುವುದು. ಮೇಲಧಿಕಾರಿಗಳಿಂದ ಅಚ್ಚರಿಯ ಸಂಗತಿಯೊಂದು ಕೇಳಿ ಬರಲಿದೆ.

ಸಿಂಹ : ನಿಮ್ಮ ಸಂಕಷ್ಟದ ಪರಿಸ್ಥಿತಿಗೆ ತಂದೆಯವರಿಂದ ನೆರವು ಸಿಗಲಿದೆ. ಕವಲುದಾರಿಯಲ್ಲಿರುವ ನಿಮಗೆ ಸರಿಯಾದ ಮಾರ್ಗದರ್ಶನ ದೇವತಾನುಗ್ರಹದಿಂದ ಇಂದು ದೊರೆಯುವುದು. ಬಂಧುಗಳ ಆಗಮನ ಸಂತೋಷ ಕೊಡಲಿದೆ.

ಕನ್ಯಾ : ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಇನ್ನೊಂದು ಪ್ರಪಂಚವಿದೆ ಎಂಬುದನ್ನು ಮರೆಯದಿರಿ. ವೃತ್ತಿಪರ ಜಾಣ್ಮೆ ತೋರಿದಲ್ಲಿ ಅದೃಷ್ಟ ನಿಮ್ಮದಾಗಲಿದೆ. ಅತಿಯಾದ ಆತ್ಮವಿಶ್ವಾಸ ಸರಿಯಲ್ಲ.

ತುಲಾ : ಈ ದಿನದಂದು ನಿಮ್ಮ ಸ್ವಲ್ಪ ಸ್ವಲ್ಪ ಪ್ರಯತ್ನಕ್ಕೂ ಹೆಚ್ಚಿನ ಉಪಯೋಗ ಪ್ರಾಪ್ತಿಯಾಗಲಿದೆ. ನಾಯಕತ್ವದ ಗುಣಗಳು ನಿಮ್ಮಲ್ಲಿ ವೃದ್ಧಿಸಲಿದೆ. ಸಾಮರಸ್ಯ ಜೀವನಕ್ಕೆ ಹಿತೈಷಿಗಳ ದುಷ್ಟ ದೃಷ್ಟಿ ತಗಲುವಂತಾಗುತ್ತದೆ.

ವೃಶ್ಚಿಕ : ಆರೋಗ್ಯ ವೃದ್ಧಿಗಾಗಿ ದೈನಂದಿನ ಚಟುವಟಿಕೆಯಲ್ಲಿ ಸರಿಯಾದ ನಿಯಮ ಪಾಲಿಸುವುದು ಒಳ್ಳೆಯದು. ಮಕ್ಕಳ ಬಗ್ಗೆ ಹೆಚ್ಚಿನ ನಿಗಾ ಇರಲಿ. ನವದಂಪತಿಗಳಿಗೆ ಶುಭಪ್ರದವಾದ ಸಂತಾನ ಭಾಗ್ಯ ದೊರೆಯಲಿದೆ.

ಧನು: ಯಾವುದೇ ವಿಷಯದಲ್ಲಿ ಜವಾಬ್ದಾರಿಯನ್ನು ಹೊರುವ ಮೊದಲು ಅದರ ಬಗೆಗಿನ ಸಾಮಾನ್ಯ ಜ್ಞಾನ, ಲಾಭ-ನಷ್ಟ, ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಹೆಚ್ಚಿನ ಗಮನವಿರಲಿ.

ಮಕರ: ಪರರಿಗೆ ಸಹಾಯ ಮಾಡುವ ಸಮಯದಲ್ಲಿ ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ತಿಳಿಯದಂತೆ ವ್ಯವಹರಿಸಿ. ಯಾರೊಂದಿಗೂ ಯಾವ ಕಾರಣಕ್ಕೂ ಮನಸ್ತಾಪ ಬೇಡ. ಹೊಸ ಬಟ್ಟೆ ಖರೀದಿಸುವ ಯೋಗವಿರುವುದು.


ಕುಂಭ : ಅಸೂಯೆ ಪಡುವ ಸಹೋದ್ಯೋಗಿಗಳ ನಡುವೆ ನೀವು ಕೆಲಸ ನಿರ್ವಹಿಸಬೇಕಾಗುತ್ತದೆ. ಅವರಿಂದ ಅಸಹಕಾರ, ತೊಂದರೆಗಳೂ ಆಗಬಹುದು. ಷೇರು ವ್ಯಾಪಾರವು ಅದೃಷ್ಟದಾಯಕವಾಗಿರುತ್ತದೆ.

ಮೀನ : ಪ್ರಾಚಾರ್ಯರಿಗೆ ಮತ್ತು ಸಲಹೆಗಾರರಿಗೆ ಸ್ವಂತ ಜೀವನದ ಅಭಿವೃದ್ಧಿಗೆಬೇಕಾದ ಹೆಚ್ಚಿನ ಅವಕಾಶಗಳು ಸಿಗುವುದು. ಜಮೀನು ಖರೀದಿ ಅಥವಾ ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನ ಹೆಚ್ಚಿಸಿಕೊಳ್ಳಬಹುದು.

ಪದಬಂಧ 5025 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಡಗಿಕೊಳ್ಳಲು ಪ್ರಶಸ್ತವಾದ ಕಾಡು(3)
3. ಯೋಗವಿದ್ದರಷ್ಟೇ ಇದು ಪ್ರಯೋಜನ!(4)
5.ಅಂಬರ ನೋಡಿದಾಗ ಆವರಿಸಿರುವ ಕ್ಷಾಮ(2)
6.ಕಗ್ಗೊಲೆಯ ಪ್ರಸಂಗವಿದು(4)
7.ಕನ್ನಡಿಗನು ನೀಡಿರುವ ಇನ್‌ಕಮ್‌ಟ್ಯಾಕ್ಸ್!(7)
10.ವೇದಾದಿಗಳನ್ನು ಅಧ್ಯಯನ ಮಾಡಿರುವವನು(4)
11.ಸವತಿ ಹತ್ತಿರವೇ ಪತ್ನಿ ಇದ್ದಾಳಲ್ಲ!(2)
13.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ(4)
14.ಕಣ್ಣು ಕಾಣದವನು(3)

ಮೇಲಿಂದ ಕೆಳಕ್ಕೆ
1.ಎರಕ ಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ(2)
2.ವರ ನೀಡಿದ್ದು ವಿಸ್ತಾರವಾದ ಹೇಳಿಕೆ(3)
4.ವಿಷ್ಣುವಿನ ವಾಹನ(3)
5.ಈತ ದುಡ್ಡಿಲ್ಲದವನು(3)
6.ಹಣ ನೀಡಿ ಬೆಳಗಿಸಿದ ದೀಪ(3)
8.ಮಾವನಿಗೆದುರಾಗಿ ನಿಂತಿರುವ ಸ್ತ್ರೀ(3)
9.ತಿಳವಳಿಕೆ ಹೇಳಿದ ಸ್ನೇಹಿತೆ(3)
10. ಪ್ರೀತಿ ಪಾತ್ರನಾದ ಮಗ(3)
11.ಸರದ ಜೊತೆಗಿರುವ ಸಾಮಾನು(3)
12.ಈತ ನಾಚಿಕೆಯಿಲ್ಲದವನು(2)



5024ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಮುಚಿತ3.ಬಾತ್ಮಿದಾರ5.ಮುಸುಕು7.ರವಿ9.ಜನ 10.ಅಮಲು11.ಸಂತ12.ರಿಪು14.ಕವನ16.ಕಡುಜಾಣ 17.ಗುಪ್ತದ್ವಾರ

ಮೇಲಿಂದ ಕೆಳಕ್ಕೆ: 1.ಸಪೂರ2.ತಮ3.ಬಾಕು4.ರಸನ6.ಸುವರ್ಣಮಹೋತ್ಸವ 8.ವಿಶ್ವಾಸಘಾತ9.ಜವಾಬುದಾರಿ11.ಸಂದೂಕ13.ಪುಷ್ಪರ14.ಕಣ15.ನಗು

ಸುಡೊಕು 5411

3		2	1		4		6	
							3	2
7			6		2	5		
2					3			5
				4		2	9	
			9					1
	4		2				8	
9				7	8		5	
	6			5		4	2	9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5410 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

ಸಿದ್ದರಾಮಯ್ಯ – ಡಿ.ಕೆ. ಶಿವಕುಮಾರ್ ನಡುವೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ಮುಸುಕಿನ ಗುದ್ದಾಟ

'ಹಸ್ತ' ಲಾಘವದ ಬದಲು 'ಸಿಎಂ' ಕುರ್ಚಿ ಸುತ್ತ ಗಿರಕಿ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ



ಸಿದ್ದರಾಮಯ್ಯ



ಶಿವಕುಮಾರ್

ವಿಧಾನಸಭೆಗೆ 2023ಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಜನಾದೇಶ ಸಿಗುವುದೋ, ಇಲ್ಲವೋ ಎಂಬುದೇ ಖಾತ್ರಿ ಇಲ್ಲ. ಆದರೆ, ಅಧಿಕಾರಕ್ಕೇರುವ ಬಿಟ್ಟವೆಲ ತುಂಬು ಭರವಸೆಯಲ್ಲಿರುವ ಕಾಂಗ್ರೆಸ್ ನಾಯಕರು, ಮುಖ್ಯಮಂತ್ರಿ ಹುದ್ದೆಗೇರಲು ಪೈಪೋಟಿಗೆ ಬಿದ್ದಿದ್ದಾರೆ.

ಮತ್ತೊಮ್ಮೆ ಮುಖ್ಯಮಂತ್ರಿಯಾಗಲೇಬೇಕು ಎಂಬ ಹಂಬಲ ಹೊಂದಿರುವ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಮ್ಮದೇ ಕಾರ್ಯತಂತ್ರವನ್ನು ಹೆಣೆದಿರುವುದು ಗುಟ್ಟಾಗಿ ಉಳಿದಿಲ್ಲ. ಪಕ್ಷಕ್ಕೆ ಬಹುಮತ ಬಂದರೆ ಕೆಪಿಸಿಸಿ ಅಧ್ಯಕ್ಷರಾದವರಿಗೆ ಮುಖ್ಯಮಂತ್ರಿ ಪಟ್ಟ ಎಂಬ ಒಂದು ಕಾಲದ ಕಾಂಗ್ರೆಸ್ ಸಂಪ್ರದಾಯವನ್ನೇ ದೃಢವಾಗಿ ನೆಚ್ಚಿಕೊಂಡಂತಿದ್ದಾರೆ ಡಿ.ಕೆ. ಶಿವಕುಮಾರ್. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ಕೃಪಾಶೀರ್ವಾದ ತಮ್ಮ ಮೇಲಿದೆ ಎಂಬ ವಿಶ್ವಾಸದಲ್ಲಿ ಆಡಳಿತ ಚುಕ್ಕಾಣಿ ತಮ್ಮ ಕೈಗೆ ಸಿಗಲೇಬೇಕು ಎಂಬ ಲೆಕ್ಕಾಚಾರದಲ್ಲಿ ಅವರು ರಾಜಕೀಯ ದಾಳ ಉರುಳಿಸಲು ಆರಂಭಿಸಿದ್ದಾರೆ.

75ನೇ ಜನ್ಮದಿನವನ್ನು ಅದ್ದೂರಿಯಾಗಿ ಆಚರಿಸುವ ಮೂಲಕ ಸಿದ್ದರಾಮಯ್ಯ ಅವರ ಪ್ರಭಾವಳಿ ವಿಸ್ತರಿಸಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅವರಿಗೇ ಮುಖ್ಯಮಂತ್ರಿ ಪಟ್ಟ ಸಿಗಬೇಕು ಎಂಬುದು ಜನಾಭಿಪ್ರಾಯ ಎಂದು ಬಿಂಬಿಸಲು ಅವರ 'ಆಪ್ತ' ವಲಯ ಭರ್ಜರಿ ತಯಾರಿ ನಡೆಸಿದೆ. ಒಂದು ಕಾಲದಲ್ಲಿ ಜನತಾ ಪರಿವಾರದಲ್ಲಿದ್ದು ಹಠ ಹಿಡಿದು ಕಾಂಗ್ರೆಸ್ ಸೇರಿದವರು 'ಅಮೃತ ಮಹೋತ್ಸವ'ದ ಮೂಲಕ 'ಸಿದ್ದರಾಮಯ್ಯನವರೇ ಮುಂದಿನ ಮುಖ್ಯಮಂತ್ರಿ' ಎಂಬ ಕಥನ ಮಂಡಿಸುವ ಯತ್ನವನ್ನು ನಡೆಸಿದ್ದಾರೆ.

ಅಮೃತ ಮಹೋತ್ಸವದ ತಯಾರಿಯ ಆರಂಭದ ದಿನಗಳಲ್ಲಿ, 'ಇದು ಕಾಂಗ್ರೆಸ್ ಪಕ್ಷವನ್ನು ಸಂಘಟನಾತ್ಮಕವಾಗಿ ಬಲಪಡಿಸುವ ಯತ್ನ, ಹಿಂದುಳಿದ ಸಮುದಾಯದವರನ್ನು ಕಾಂಗ್ರೆಸ್ ತೆಕ್ಕೆಗೆ ಬರಸೆಳೆಯುವ ಹೊಸ ದಾರಿ' ಎಂದು ಹೇಳಲಾಗಿತ್ತು. ದಾವಣಗೆರೆಯಲ್ಲಿ ಐದು ಲಕ್ಷಕ್ಕೂ ಹೆಚ್ಚು ಜನ ಸೇರಿಸುವುದು ಹಾಗೂ ಜಿಲ್ಲಾ ಮಟ್ಟದಲ್ಲಿ ಅಮೃತ ಮಹೋತ್ಸವ ಆಚರಿಸುವ ಮೂಲಕ ಸಿದ್ದರಾಮಯ್ಯನವರನ್ನು ಮುನ್ನೆಲೆಗೆ ತರುವ ಯತ್ನ ಗುಟ್ಟಾಗಿತ್ತಾದರೂ ಒಳಗಿಂದೊಳಗೆ ಅಪಸ್ವರ ಶುರುವಾಯಿತು. ಬಹಿರಂಗವಾಗಿ ಯಾರೊಬ್ಬರೂ ಹೇಳಿಕೆ ನೀಡದಿದ್ದರೂ ಪಕ್ಷದ ಅಂತರಂಗ ವಲಯದಲ್ಲಿ ಪಕ್ಷಕ್ಕಿಂತ ವ್ಯಕ್ತಿಯನ್ನು ವೈಭವೀಕರಿಸುವ 'ಅಮೃತ ಮಹೋತ್ಸವ'ಕ್ಕೆ ತಕರಾರುಗಳು ಶುರುವಾದವು. ಅದು ಬಹಿರಂಗವಾಗುವುದಕ್ಕೆ ಮುನ್ನವೇ, 'ಪಕ್ಷದ ವೇದಿಕೆಯಲ್ಲೇ ಅಮೃತ ಮಹೋತ್ಸವ ಆಚರಿಸುತ್ತೇವೆ' ಎಂಬ ಮಾತುಗಳು ಹೊರಬಿದ್ದವು.

ಅಮೃತ ಮಹೋತ್ಸವ ಆಚರಣೆಯ ಸಮಿತಿಯ ನೇತೃತ್ವ ವಹಿಸಿರುವ ಡಾ. ಎಚ್.ಸಿ. ಮಹದೇವಪ್ಪ, 'ಪಕ್ಷದ ವೇದಿಕೆಯಲ್ಲ; ಇದು ಆಪ್ತರು ಸೇರಿ ನಡೆಸುತ್ತಿರುವ ಕಾರ್ಯಕ್ರಮ' ಎಂದು ಬಹಿರಂಗವಾಗಿ ಹೇಳುವ ಮೂಲಕ ಬೇರೆಯದೇ ಆದ 'ಸಂದೇಶ'ವನ್ನು ರವಾನಿಸಿದ್ದರು. ಪಕ್ಷ ಹಾಗೂ ಸಿದ್ದರಾಮಯ್ಯನವರ ಆಪ್ತವಲಯ ವಿಭಿನ್ನವೇ ಎಂಬ ಚರ್ಚೆಗೆ ಇದು ಹಾದಿ ಮಾಡಿಕೊಟ್ಟಿತು.

'ಪಕ್ಷಕ್ಕೆ ಅನುಕೂಲವಾಗುವುದಾದರೆ ಸಿದ್ದರಾಮಯ್ಯನವರ ಜನ್ಮದಿನ ಆಚರಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ನನಗೆ ವ್ಯಕ್ತಿ ಪೂಜೆಗಿಂತ ಪಕ್ಷದ ಸಂಘಟನೆಯೇ ಮುಖ್ಯ' ಎಂದು ಆರಂಭದ ದಿನಗಳಲ್ಲೇ ಡಿ.ಕೆ.ಶಿವಕುಮಾರ್ ಹೇಳುತ್ತಲೇ ಬಂದಿದ್ದರು. 'ಕಾರ್ಯಕ್ರಮಕ್ಕೆ ಕರೆದಿದ್ದಾರೆ, ಹೋಗುತ್ತೇನೆ' ಎಂದೂ ಅವರು ಹೇಳಿದ್ದಾರೆ.

ಸಿದ್ದರಾಮಯ್ಯ ಮತ್ತೊಮ್ಮೆ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರುವುದನ್ನು ಇಷ್ಟಪಡದ ಕಾಂಗ್ರೆಸ್ ನಾಯಕರು, ತಮ್ಮದೇ ಆದ ರೀತಿಯಲ್ಲಿ ಒಳಗೊಳಗೆ ಅಮೃತ ಮಹೋತ್ಸವಕ್ಕೆ ಮೆಲುದನಿಯಲ್ಲಿ ತಕರಾರು ತೆಗೆಯುತ್ತಿದ್ದಾರೆ. ಆದರೆ, ಅದನ್ನು ಬಹಿರಂಗವಾಗಿ ಟೀಕಿಸಿ, ಸಿದ್ದರಾಮಯ್ಯ ಹಾಗೂ ಅವರ ಬೆಂಬಲಿಗರ ವಿರೋಧ ಕಟ್ಟಿಕೊಳ್ಳಲು ಯಾರೊಬ್ಬರೂ ತಯಾರಿಲ್ಲ.

ಈ ಬೆಳವಣಿಗೆಗಳ ಮಧ್ಯೆಯೇ, ಶಿವಕುಮಾರ್ ಅವರು ಹೊಸ ಬಾಣಗಳನ್ನು ಬಿಡಲಾರಂಭಿಸಿದ್ದಾರೆ. 'ನಾನು ಎಲ್ಲ ಜಾತಿ-ಧರ್ಮಗಳನ್ನು ಪ್ರತಿನಿಧಿಸುವ ಕಾಂಗ್ರೆಸ್ ನಾಯಕ' ಎಂದು ಹೇಳುತ್ತಿದ್ದ ಅವರು, 'ಒಕ್ಕಲಿಗರಿಗೆ ಮುಖ್ಯಮಂತ್ರಿಯಾಗುವ ಅವಕಾಶ ಒದಗಿ ಬಂದಿದೆ. ನನ್ನ ಕೈಹಿಡಿದು ಬೆಂಬಲಕ್ಕೆ ನಿಲ್ಲಿ' ಎಂದು ಒಕ್ಕಲಿಗರ ಸಭೆಯಲ್ಲಿ ಪ್ರತಿಪಾದಿಸಲು ಶುರು ಮಾಡಿದ್ದಾರೆ.

'ಎಸ್.ಎಂ.ಕೃಷ್ಣ ಅವರ ಬಳಿಕ ಒಕ್ಕಲಿಗ ಸಮುದಾಯದಿಂದ ನಾನು ಸಿಎಂ ಆಗುವ ಹಂತ ತಲುಪಿದ್ದೇನೆ. ಹೀಗಾಗಿ ನನ್ನ ಕೈಬಲಪಡಿಸಿ. ನಾನು ಕಾವಿ ಬಟ್ಟೆ ಧರಿಸಿದ ಸನ್ಯಾಸಿಯಲ್ಲ' ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಹುದ್ದೆಗೆ ನಾನು ಸ್ಪರ್ಧಾಳು ಎಂಬ ಸಂದೇಶ ರವಾನಿಸಿದ್ದಾರೆ. ಸಿದ್ದರಾಮಯ್ಯ ಜನ್ಮದಿನ ಕಾರ್ಯಕ್ರಮಕ್ಕೆ ಇನ್ನು 13 ದಿನ ಬಾಕಿ ಇರುವಾಗ, ಶಿವಕುಮಾರ್ ಹಾಕುತ್ತಿರುವ ಹೊಸ ವರಸೆ ನಾನಾ ರೀತಿಯ ಚರ್ಚೆಗಳಿಗೆ ಕಾರಣವಾಗಿದೆ.

80ನೇ ವರ್ಷಕ್ಕೆ ಕಾಲಿಡಲಿರುವ ಮಲ್ಲಿಕಾರ್ಜುನ ಖರ್ಗೆ, 'ನನ್ನ ಹುಟ್ಟುಹಬ್ಬ ಆಚರಿಸುವ ಬದಲು ಬುದ್ಧ, ಬಸವ, ಅಂಬೇಡ್ಕರ್ ತತ್ವಗಳನ್ನು, ಸಂವಿಧಾನದ ಆಶಯಗಳನ್ನು ಗಟ್ಟಿಗೊಳಿಸುವ ಕೆಲಸ ಮಾಡಿ' ಎಂದು ಕರೆ ಕೊಟ್ಟಿದ್ದಾರೆ. ಸಿದ್ದರಾಮಯ್ಯನವರ ಜನ್ಮದಿನದ ಆಚರಣೆಗೆ ಇದು ವಿರೋಧ ಅಲ್ಲದೇ ಇದ್ದರೂ ಆಚರಣೆಯನ್ನೇ ಪ್ರಶ್ನಿಸುವ ಸಂದೇಶ ನೀಡಿದ್ದಾರೆ.

ಸುದ್ದಿ 2 ನಿಮಿಷ

ಕೆಐಟಿ ದರ್ಜೆಗೆ ಉನ್ನತೀಕರಣ: ಕಾರ್ಯಪಡೆ ರಚನೆ

ಬೆಂಗಳೂರು: 'ರಾಜ್ಯದಲ್ಲಿರುವ 14 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳ ಪೈಕಿ ಏಳು ಕಾಲೇಜುಗಳನ್ನು 'ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' (ಕೆಐಟಿ) ಆಗಿ ಉನ್ನತೀಕರಿಸುವ ಉದ್ದೇಶದಿಂದ ಪ್ರೊ.ಸಡಗೋಪನ್ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದ್ದಾರೆ.

'ಯೋಜನೆಯಡಿ ಹಾಸನ, ಹಾವೇರಿ, ಕೆ.ಆರ್. ಪೇಟೆ, ಕಾರವಾರ, ರಾಮನಗರ ಮತ್ತು ತಳಕಲ್‌ನಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಬೆಂಗಳೂರಿನ ಎಸ್‌ಕೆ-ಎಸ್‌ಜೆಐಟಿ ಕಾಲೇಜು ಆಯ್ಕೆ ಮಾಡಲಾಗಿದೆ. ಕಾರ್ಯಪಡೆಯು ಎರಡು ತಿಂಗಳಲ್ಲಿ ವಿಸ್ತೃತ ಯೋಜನಾ ವರದಿ ಸಲ್ಲಿಸಲಿದೆ' ಎಂದೂ ಮಾಹಿತಿ ನೀಡಿದ್ದಾರೆ.

'ಬೆಂಗಳೂರಿನ ಐಐಐಟಿ ಸ್ಥಾಪಕ ನಿರ್ದೇಶಕರಾಗಿರುವ ಸಡಗೋಪನ್ ನೇತೃತ್ವದ ಸಮಿತಿಯಲ್ಲಿ ಪ್ರೊ.ಎಲ್.ಎಸ್. ಗಣೇಶ್, ಪ್ರೊ.ಸಿ. ರಾಜೇಂದ್ರ, ಪ್ರೊ.ರಾಮಗೋಪಾಲ್ ರಾವ್, ಪ್ರೊ.ಚಕ್ರವರ್ತಿ, ಪ್ರೊ.ಮಣೀಂದ್ರ ಅಗರವಾಲ್, ಪ್ರೊ.ವೈ.ನರಹರಿ ಸದಸ್ಯರಾಗಿದ್ದಾರೆ. ಐದು ವರ್ಷಗಳಲ್ಲಿ ಈ ಕಾಲೇಜುಗಳಲ್ಲಿ ಕೈಗೊಳ್ಳಬಹುದಾದ ಶೈಕ್ಷಣಿಕ ಚಟುವಟಿಕೆಯನ್ನು ಸಮಿತಿ ಸೂಚಿಸಲಿದೆ. ಈ ಕಾಲೇಜುಗಳ ಮೂಲಸೌಕರ್ಯ ಅಭಿವೃದ್ಧಿಗೆ ₹ 95 ಕೋಟಿ ಅಗತ್ಯವಿದ್ದು, ₹ 21 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮುನಿಯಪ್ಪ ಮನೆಯಲ್ಲಿ ಬಿಜೆಪಿ, ಜೆಡಿಎಸ್ ಮುಖಂಡರಿಗೆ ಊಟ!




ಶಿಡ್ಲಘಟ್ಟ: ಕಾಂಗ್ರೆಸ್ ಮುಖಂಡ ಹಾಗೂ ಕೇಂದ್ರ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ ತಮ್ಮ ಹುಟ್ಟೂರು ಶಿಡ್ಲಘಟ್ಟ ತಾಲ್ಲೂಕಿನ ಕಂಬದಹಳ್ಳಿಯಲ್ಲಿ ಬುಧವಾರ ನಡೆದ ಊರ ಜಾತ್ರೆಗೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರನ್ನು ಆಹ್ವಾನಿಸಿದ್ದರು.

ಗ್ರಾಮದ ಮನೆಯಲ್ಲಿ ಎರಡೂ ಪಕ್ಷದ ನಾಯಕರಿಗೆ ಮುನಿಯಪ್ಪ ಊಟ ಹಾಕಿಸಿದ್ದಾರೆ. ಸಚಿವರಾದ ಡಾ.ಕೆ.ಸುಧಾಕರ್, ಜೆಡಿಎಸ್ ಶಾಸಕ ಎಂ.ಕೃಷ್ಣಾರೆಡ್ಡಿ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರನ್ನು ಅವರು ಊಟಕ್ಕೆ ಆಹ್ವಾನಿಸಿದ್ದರು. ಶ್ರೀನಿವಾಸಪುರದ ಕಾಂಗ್ರೆಸ್ ಶಾಸಕ ಕೆ.ಆರ್.ರಮೇಶ್ ಕುಮಾರ್ ರಾಜಕೀಯ ವಿರೋಧಿ, ಜೆಡಿಎಸ್ ಜಿಲ್ಲಾ ಅಧ್ಯಕ್ಷ ಹಾಗೂ ಶ್ರೀನಿವಾಸಪುರ ಮಾಜಿ ಶಾಸಕ ವೆಂಕಟಶಿವಾರೆಡ್ಡಿ ಸಹ ಭಾಗಿ ಆಗಿದ್ದರು.

'ಊರ ಜಾತ್ರೆ ಹಿನ್ನೆಲೆಯಲ್ಲಿ ನಮ್ಮ ಮನೆಗೆ ಊಟಕ್ಕೆ ಪಕ್ಷಾತೀತವಾಗಿ ಎಲ್ಲರನ್ನೂ ಆಹ್ವಾನಿಸಿದ್ದೇನೆ. ಇದರಲ್ಲಿ ರಾಜಕೀಯ ಇಲ್ಲ' ಎಂದು ಕೆ.ಎಚ್. ಮುನಿಯಪ್ಪ ಹೇಳುತ್ತಿದ್ದಾರೆ. ಆದರೆ ಸ್ಥಳೀಯ ಶಾಸಕರಾದ ಕಾಂಗ್ರೆಸ್‌ನ ವಿ.ಮುನಿಯಪ್ಪ ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಶಾಸಕರು ಮತ್ತು ಮುಖಂಡರ ಗೈರು ಹಾಜರಿ ಎದ್ದು ಕಾಣುತಿತ್ತು.

ಕಾಂಗ್ರೆಸ್–ಜೆಡಿಎಸ್: ಕೂಸು ಹುಟ್ಟುವ ಮುನ್ನವೇ ಕುಲಾವಿ

ಪ್ರಜಾವಾಣಿ ವಾರ್ತೆ



ಎಚ್‌.ಡಿ. ಕುಮಾರಸ್ವಾಮಿ

ರಾಮನಗರ: ಕರಗ ಮಹೋತ್ಸವ ಅಂಗವಾಗಿ ಮಂಗಳವಾರ ತಡರಾತ್ರಿ ಇಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆಗಳಲ್ಲಿ ಜಿಲ್ಲೆಯ ಇಬ್ಬರು ಪ್ರಭಾವಿ ರಾಜಕೀಯ ನಾಯಕರ 'ಮುಖ್ಯಮಂತ್ರಿ' ಕನವರಿಕೆ ಸುದ್ದಿ ಇದೀಗ ಚರ್ಚೆಗೆ ಗ್ರಾಸವಾಗಿದೆ.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ರಸಮಂಜರಿ ಕಾರ್ಯಕ್ರಮದಲ್ಲಿ ರಾತ್ರಿ 11.30ರ ಸುಮಾರಿಗೆ ಮಾತನಾಡಿದ ಕುಮಾರಸ್ವಾಮಿ 'ಈಗ ನಾಡಿನಲ್ಲಿ ಮುಖ್ಯಮಂತ್ರಿಯಾಗಲು ಬಹಳ ಮಂದಿ ಸ್ಪರ್ಧೆಯಲ್ಲಿದ್ದಾರೆ. ಆದರೆ ಜನತೆ ಅಂತಹವರನ್ನು ಬೆಂಬಲಿಸದೆ ನನಗೆ ಮತ್ತೆ ಆಶೀರ್ವಾದ ನೀಡಬೇಕು' ಎಂದು ಕೋರಿದರು. 'ಎರಡು ಬಾರಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾದರೂ ಆ ನೋವು ಮರೆತು ಪಕ್ಷ ಸಂಘಟನೆ ಮಾಡುತ್ತಿದ್ದೇನೆ' ಎಂದೂ ಅಳಲು ತೋಡಿಕೊಂಡರು.

ಅತ್ತ ನಗರದ ಅರಳೀಮರ ವೃತ್ತದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಡರಾತ್ರಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಈ ಹಿಂದೆ ಇಲ್ಲಿನ ಜನರು ದೇವೇಗೌಡರಿಗೆ, ಕುಮಾರಸ್ವಾಮಿ ಅವರಿಗೆ ಅವಕಾಶ ನೀಡಿದ್ದೀರಿ. ಈಗ ನನಗೂ ಒಂದು ಅವಕಾಶ ಕೊಡಿ. ರಾಜ್ಯದ ಮುಖ್ಯಮಂತ್ರಿ ಆಗಲು ಆಶೀರ್ವಾದ ಮಾಡಿ' ಎಂದು ಮನವಿ ಮಾಡಿಕೊಂಡರು.

ಕಾಂಗ್ರೆಸ್ ಕಾರ್ಯಕರ್ತರು ಹಾರ ಹಾಕಲು ಬಂದಾಗ ಅದನ್ನು ತಡೆದ ಡಿಕೆಶಿ 'ನನಗೆ ಹೂವಿನ ಹಾರ ಬೇಡ. ನಾನು ಇಲ್ಲಿ ನಿಲ್ಲಿಸುವ ಅಭ್ಯರ್ಥಿಯನ್ನು ಗೆಲ್ಲಿಸಿ ವಿಧಾನಸೌಧಕ್ಕೆ ಕಳುಹಿಸಿಕೊಡಿ. ಅದೇ ನನಗೆ ಹೂವಿನ ಹಾರ' ಎಂದು ಹೇಳಿದರು.

'ಜಾತಿ ಆಧಾರದಲ್ಲಿ ಸಿ.ಎಂ. ಸ್ಥಾನ ಬಯಸುವವರು ಜಾತಿ ಸಂಘಟನೆ ಕಟ್ಟಲಿ'



ಬಿ ಕೆ ಹರಿಪ್ರಸಾದ್

ಮಂಗಳೂರು: 'ಕಾಂಗ್ರೆಸ್ ಪಕ್ಷವು ಯಾವುದೇ ಜಾತಿಯನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡುವುದಿಲ್ಲ. ಜಾತಿ ಆಧಾರದಲ್ಲಿ ಮುಖ್ಯಮಂತ್ರಿ ಆಗಬಯಸುವವರು ತಮ್ಮ ಜಾತಿ ಸಂಘಟನೆ ಕಟ್ಟಿ, ಅದರ ಮೂಲಕವೇ ಆಸೆ ತೀರಿಸಿಕೊಳ್ಳಲಿ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಲ್ಲ ಜಾತಿ –ಧರ್ಮಗಳ ನಾಯಕರಿಗೂ ಅಧಿಕಾರದ ಕನಸು ಇದ್ದೇ ಇರುತ್ತದೆ. ಜಾತಿ– ಧರ್ಮದ ಹೆಸರಿನಲ್ಲಿ ಕಾಂಗ್ರೆಸ್ ಯಾವತ್ತೂ ರಾಜಕಾರಣ ಮಾಡಿಲ್ಲ. ಕಾಂಗ್ರೆಸ್‌ಗೆ ಬಹುಮತ ಬಂದರೆ ಪಕ್ಷದ ಅಧ್ಯಕ್ಷರಾದ ಸೋನಿಯಾ ಗಾಂಧಿ ಅವರು ಪಕ್ಷದ ಶಾಸಕರ ಅಭಿಪ್ರಾಯ ಪಡೆದು ಮುಖ್ಯಮಂತ್ರಿ ಯಾರಾಗಬೇಕು ಎಂಬ ತೀರ್ಮಾನ ಮಾಡುತ್ತಾರೆ' ಎಂದು ಅವರು ಹೇಳಿದರು.

'ಯಾರ‍್ಯಾರೋ ಸಿ.ಎಂ ಗಾದಿ ಕೇಳುತ್ತಿದ್ದಾರೆ'




ಎಚ್‌.ಸಿ. ಮಹದೇವಪ್ಪ

ಮೈಸೂರು: 'ಯಾರ‍್ಯಾರೋ ಮುಖ್ಯಮಂತ್ರಿ ಹುದ್ದೆ ಕೇಳುತ್ತಿದ್ದಾರೆ. ಆ ಹುದ್ದೆ ಎಂದರೆ ಎಲ್ಲರಿಗೂ ಹಗುರವಾಗಿ ಹೋಗಿದೆ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ.ಮಹದೇವಪ್ಪ ಬೇಸರ ವ್ಯಕ್ತಪಡಿಸಿದರು.

ಪತ್ರಕರ್ತರೊಂದಿಗೆ ಬುಧವಾರ ಮಾತನಾಡಿದ ಅವರು, 'ಆ ಹುದ್ದೆಯ ಗೌರವ ಬೇರೆಯೇ ಇದೆ. ಹೋರಾಟ, ಸಾಮಾಜಿಕ ಬದ್ಧತೆ, ರಾಜಕೀಯ ಜೀವನದ ಅನುಭವ ಎಲ್ಲವೂ ಬೇಕು' ಎಂದರು.

'ಪಕ್ಷ ಅವಕಾಶ ನೀಡಿದರೆ ಜವಾಬ್ದಾರಿ ನಿರ್ವಹಿಸಲು ನಾನೂ ಸಿದ್ಧವಿದ್ದೇನೆ. ಲೋಕೋಪಯೋಗಿ, ಆರೋಗ್ಯ ಖಾತೆ ಸೇರಿದಂತೆ ಹಲವು ಜವಾಬ್ದಾರಿ ನಿರ್ವಹಿಸಿದ್ದೇನೆ. ಸಾಕಷ್ಟು ಅನುಭವವಿದೆ. ಅವಕಾಶ ಸಿಕ್ಕರೆ ನಿಭಾಯಿಸುತ್ತೇನೆ' ಎಂದರು.

'ಕೆಪಿಸಿಸಿ ಅಧ್ಯಕ್ಷರಾಗಿ ಡಿಕೆಶಿ ವಿಫಲ'



ಬಸವರಾಜ ಬೊಮ್ಮಾಯಿ

'ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವುದಕ್ಕೆ ಪಾಪ ಬಹಳ ವರ್ಷಗಳಿಂದ ಒದ್ದಾಡುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿ ಸರಿಯಾಗಿ ಕೆಲಸ ಮಾಡಲು ಆಗುತ್ತಿಲ್ಲ. ಸಿದ್ದರಾಮಯ್ಯ ಮತ್ತು ಡಿಕೆಶಿ ಇಬ್ಬರೂ ನಾನೊಂದು ತೀರ, ನೀನೊಂದು ತೀರ ಎಂಬಂತಿದ್ದಾರೆ. ಮೊದಲು ಅವರ ತಟ್ಟೆಯಲ್ಲಿ ಏನಿದೆ ಎಂಬುದನ್ನು ನೋಡಿಕೊಳ್ಳಲಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

'ಒಕ್ಕಲಿಗರ ಬೆಂಬಲ ಕೇಳುವುದರಲ್ಲಿ ತಪ್ಪೇನಿದೆ?'

ಬೆಂಗಳೂರು: 'ದಲಿತರೆಲ್ಲರೂ ಒಟ್ಟಾಗಿ ದಲಿತ ಮುಖ್ಯಮಂತ್ರಿ ಆಗಬೇಕು ಎನ್ನುತ್ತಾರೆ. ಅದೇ ರೀತಿ ನಮ್ಮ ಸಮುದಾಯದವರೂ ಒಂದಾಗಲಿ ಎಂದು ನಾನು ಹೇಳಿದ್ದೇನೆ. ಅದರಲ್ಲಿ ತಪ್ಪೇನಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಸೋನಿಯಾ ಗಾಂಧಿ ಅವರು ನನ್ನನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಿದ್ದಾರೆ. 20 ವರ್ಷಗಳ ನಂತರ ಈ ಸಮುದಾಯದವರಿಗೆ ಉನ್ನತ ಜವಾಬ್ದಾರಿ ನೀಡಿದ್ದಾರೆ. ಎಲ್ಲರಿಗೂ ಅವಕಾಶ ನೀಡಿದ್ದೀರಿ, ನನಗೂ ಒಂದು ಅವಕಾಶ ನೀಡಿ ಎಂದು ಸಮುದಾಯದವರಲ್ಲಿ ಕೇಳಿದ್ದೇನೆ' ಎಂದರು.

'ಒಕ್ಕಲಿಗ ಸಮಾಜಕ್ಕೆ ಶಿವಕುಮಾರ್ ಕೊಡುಗೆ ಏನು' ಎಂದು ಎಚ್.ಡಿ.ಕುಮಾರಸ್ವಾಮಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಾನು ಕುಮಾರಸ್ವಾಮಿಗೆ ಉತ್ತರಿಸಬೇಕಿಲ್ಲ. ಜನರಿಗೆ ಉತ್ತರ ನೀಡುವ ಜವಾಬ್ದಾರಿ ಇದೆ. ಜನ ನನ್ನನ್ನು ಸುಮ್ಮನೆ ಏಳು ಬಾರಿ ಗೆಲ್ಲಿಸಿದ್ದಾರಾ? ಕುಮಾರಸ್ವಾಮಿ ಅವರ ಪತ್ನಿ ವಿರುದ್ಧ ನನ್ನ ತಮ್ಮನ ನಿಲ್ಲಿಸಿದ್ದೆ. ಎರಡೂ ಪಕ್ಷ ಆಗ ಒಂದಾಗಿತ್ತಲ್ಲ. ಅವರು ಸಂಸದರಾಗಿದ್ದಾಗ ನನ್ನ ವಿರುದ್ಧ ಸ್ಪರ್ಧಿಸಿದ್ದರು. ನಾನು ಕೊಡುಗೆ ನೀಡಿದ್ದಕ್ಕೆ, ಅವರಿಗಿಂತ ಉತ್ತಮ ಎಂಬ ಕಾರಣಕ್ಕೆ ಜನರು ನನ್ನನ್ನು ಗೆಲ್ಲಿಸಿದ್ದು' ಎಂದರು.



'ನಾನೂ ಒಕ್ಕಲಿಗ ಜಾತಿಯವನೇ. ಕೆಲವರು ಜಾತಿ ಹೆಸರಿನಲ್ಲಿ ಕುಟುಂಬವನ್ನು ಬಲಪಡಿಸಿಕೊಳ್ಳುತ್ತಿದ್ದು, ನಾವು ಅಂತಹ ಕೆಲಸ ಮಾಡುವುದಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ತಿರುಗೇಟು ನೀಡಿದ್ದಾರೆ. ಬುಧವಾರ ರಾತ್ರಿ ರಾಮನಗರದಲ್ಲಿ ಪತ್ರಕರ್ತರ ಜೊತೆ ಮಾತನಾಡಿ 'ಒಂದು ಜಾತಿ ಹೆಸರು ಹೇಳಿಕೊಂಡು ರಾಜಕೀಯ ಮಾಡಿ ಗೆಲ್ಲಲು ಸಾಧ್ಯವಿಲ್ಲ' ಎಂದರು.



ದೇಶದಲ್ಲಿ ಕಾಂಗ್ರೆಸ್ ಅವನತಿಗೆ ಇಬ್ಬರು ಸಿದ್ದುಗಳು ಕಾರಣ. ಒಬ್ಬರು ಪಂಜಾಬ್‌ನ ಸಿದ್ದು. ಮತ್ತೊಬ್ಬರು ರಾಜ್ಯದಲ್ಲಿನ ಸಿದ್ದು (ಸಿದ್ದರಾಮಯ್ಯ)

ಜಗದೀಶ ಶೆಟ್ಟರ್, ಶಾಸಕ

ಐವರು ನ್ಯಾಯಾಧೀಶರ ಪದೋನ್ನತಿಗೆ ಒಪ್ಪಿಗೆ

ಬೆಂಗಳೂರು: ಐವರು ಹಿರಿಯ ಸೆಷನ್ಸ್ ನ್ಯಾಯಾಧೀಶರಿಗೆ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಪದೋನ್ನತಿ ನೀಡುವ ಪ್ರಸ್ತಾವಕ್ಕೆ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಒಪ್ಪಿಗೆ ನೀಡಿದೆ.

ಅನಿಲ್ ಭೀಮಸೇನ ಕಟ್ಟಿ, ಗುರುಸಿದ್ದಯ್ಯ ಬಸವರಾಜ, ಚಂದ್ರಶೇಖರ ಮೃತ್ಯುಂಜಯ ಜೋಶಿ, ಉಮೇಶ ಮಂಜುನಾಥ ಅಡಿಗ ಹಾಗೂ ತಲಕಾಡು ಗಿರಿಗೌಡ ಶಿವಶಂಕರೇಗೌಡ ಪದೋನ್ನತಿ ಹೊಂದಲಿರುವ ನ್ಯಾಯಾಧೀಶರು.

ಈ ಸಂಬಂಧ ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಕೊಲಿಜಿಯಂ ಇದೇ 19ರಂದು ನಡೆಸಿರುವ ಸಭೆಯಲ್ಲಿ ಈ ಕುರಿತ ಪ್ರಸ್ತಾವನೆಯನ್ನು ಅಂಗೀಕರಿಸಿದೆ.

ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳ ಮಂಜೂರಾತಿ ಸಂಖ್ಯೆ ಒಟ್ಟು 62. ಸದ್ಯ 44 ನ್ಯಾಯಮೂರ್ತಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಮುಂದಿನ ತಿಂಗಳ 7ಕ್ಕೆ ನ್ಯಾಯಮೂರ್ತಿ ಪಿ.ಕೃಷ್ಣಭಟ್ ನಿವೃತ್ತಿ ಹೊಂದಲಿದ್ದಾರೆ.

ಅಭಿಪ್ರಾಯ ನೀಡಬೇಡಿ: 'ಸುಪ್ರೀಂ'

ಒಂದನೇ ಪುಟದಿಂದ...

ಕರ್ನಾಟಕ ಸರ್ಕಾರದ ಪರವಾಗಿ ವಾದಿಸಿದ ವಕೀಲ ಶ್ಯಾಮ್ ದಿವಾನ್, 'ಈ ಯೋಜನೆಯಿಂದ ಕಾವೇರಿ ನೀರಿನ ಹರಿವಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದಿಲ್ಲ. ಕರ್ನಾಟಕಕ್ಕೆ ಹಂಚಿಕೆಯಾದ ನೀರನ್ನು ಮಾತ್ರ ಈ ಯೋಜನೆಗೆ ಬಳಸಿಕೊಳ್ಳಲಾಗುತ್ತಿದೆ' ಎಂದು ಸಮರ್ಥಿಸಿಕೊಂಡರು.

ಆಗ ನ್ಯಾಯಪೀಠವು, 'ಮೇಕೆದಾಟು ಡಿಪಿಆರ್ ಬಗ್ಗೆ ಅಭಿಪ್ರಾಯ ನೀಡಲು ಪ್ರಾಧಿಕಾರಕ್ಕೆ ಅಧಿಕಾರ ಇದೆಯೇ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ' ಎಂದು ಹೇಳಿತು.

ಆಗ ಶ್ಯಾಮ್ ದಿವಾನ್, 'ಈ ವಿಷಯದ ಕುರಿತು ಅಭಿಪ್ರಾಯ ನೀಡಲು ಪ್ರಾಧಿಕಾರಕ್ಕೆ ಅನುವು ಮಾಡಿಕೊಡಬೇಕು' ಎಂದು ಕೋರಿದರು.

ನ್ಯಾಯಪೀಠವು, 'ವಿಸ್ತೃತ ಯೋಜನಾ ವರದಿ ಕುರಿತು ಪ್ರಾಧಿಕಾರ ಸಭೆ ಹಾಗೂ ಚರ್ಚೆಗಳನ್ನು ನಡೆಸಬಹುದು. ಆದರೆ, ಯಾವುದೇ ಅಂತಿಮ ಅಭಿಪ್ರಾಯಕ್ಕೆ ಬರುವಂತಿಲ್ಲ' ಎಂದು ಸ್ಪಷ್ಟಪಡಿಸಿತು.

ಆಗ ರೋಹಟಗಿ, 'ಕರ್ನಾಟಕ ಸರ್ಕಾರ ಉದ್ದೇಶಪೂರ್ವಕವಾಗಿ ನ್ಯಾಯಾಲಯದ ಆದೇಶ ಉಲ್ಲಂಘಿಸಲು ಮುಂದಾಗಿದೆ. ಶುಕ್ರವಾರ ನಡೆಯಬೇಕಿರುವ ಪ್ರಾಧಿಕಾರದ ಅಂತಿಮ ಸಭೆಗೆ ತಡೆಯಾಜ್ಞೆ ನೀಡಬೇಕು' ಎಂದರು.

ಕರ್ನಾಟಕದ ಪರ ವಕೀಲರು, 'ಕಾವೇರಿ ನೀರು ಹಂಚಿಕೆ ಕುರಿತು ಈ ನ್ಯಾಯಾಲಯ ಈಗಾಗಲೇ ಅಂತಿಮ ತೀರ್ಪು ನೀಡಿದೆ. ಅದರಂತೆ ಹಂಚಿಕೆಯಾದ ನೀರನ್ನು ಬಿಡುಗಡೆ ಮಾಡಲು ಕರ್ನಾಟಕ ಸರ್ಕಾರ ಬದ್ಧವಾಗಿದೆ' ಎಂದರು. ಆ ಬಳಿಕ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿತು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಪತ್ನಿ ಚನ್ನಮ್ಮ ಅವರೊಂದಿಗೆ ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಿಸಿದರು. ಸಚಿವರಾದ ಗೋವಿಂದ ಕಾರಜೋಳ, ಎಸ್‌.ಟಿ.ಸೋಮಶೇಖರ್, ಶಾಸಕರಾದ ರವೀಂದ್ರ ಶ್ರೀಕಂಠಯ್ಯ, ಕೆ.ಅನ್ನದಾನಿ ಇದ್ದರು

ಈಶ್ವರಪ್ಪಗೆ 'ಬಿ' ರಿಪೋರ್ಟ್

ಒಂದನೇ ಪುಟದಿಂದ....

ಬೆಳಗಾವಿಯ ಹಿಂಡಲಗಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನಡೆದ ₹ 4 ಕೋಟಿ ವೆಚ್ಚದ ಕಾಮಗಾರಿ ಬಿಲ್ ಮಂಜೂರು ಮಾಡಲು ಈಶ್ವರಪ್ಪ 40 ಪರ್ಸೆಂಟ್ ಕಮಿಷನ್‌ಗೆ ಒತ್ತಾಯಿಸಿದ್ದರು ಎಂದು ಆರೋಪಿಸಿ ಏ.12ರಂದು ಸಂತೋಷ್ ಪಾಟೀಲ, ಉಡುಪಿಯ ಶಾಂಭವಿ ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಮೃತ ಸಂತೋಷ್ ಪಾಟೀಲ ಸಂಬಂಧಿಗಳು ನೀಡಿದ ದೂರಿನಂತೆ ಸೆಕ್ಷನ್ 306, 334 ಅಡಿ ಈಶ್ವರಪ್ಪ (ಎ 1), ಬಸವರಾಜ್ (ಎ 2), ರಮೇಶ್ (ಎ 3) ವಿರುದ್ಧ ಉಡುಪಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಪ್ರಕರಣವನ್ನು ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿತ್ತು.

'ಬಿ' ರಿಪೋರ್ಟ್ ಹಾಕಿ ಅನ್ಯಾಯ: ಪತ್ನಿ ಆಕ್ರೋಶ

'ತನಿಖೆ ಮೇಲೆ ಈಶ್ವರಪ್ಪ ಪ್ರಭಾವ ಬಳಸುತ್ತಿದ್ದಾರೆ, ನಿಷ್ಪಕ್ಷಪಾತವಾಗಲಿ ಎಂದು ಕೋರಿ ಈಚೆಗಷ್ಟೇ ರಾಜ್ಯಪಾಲರಿಗೂ ಪತ್ರ ಬರೆದು ಬೇಡಿಕೊಂಡಿದ್ದೇನೆ. ನನ್ನ ಪತಿಯ ಮೊಬೈಲ್‌ನಲ್ಲಿ ಈಶ್ವರಪ್ಪ ವಿರುದ್ಧದ ಎಲ್ಲ ಸಾಕ್ಷ್ಯಗಳಿದ್ದವು. ಆದರೆ, ಪೊಲೀಸರು ಈವರೆಗೂ ಆ ಮೊಬೈಲ್ ನಮ್ಮ ಕೈಗೆ ಕೊಟ್ಟಿಲ್ಲ. ನನ್ನ ಪತಿಯ ಸಹೋದರ ತನಿಖಾಧಿಕಾರಿ ಹಾಗೂ ಎಸ್ಪಿಗೆ ಕರೆ ಮಾಡಿದರೂ ಸ್ವೀಕರಿಸುತ್ತಿಲ್ಲ. ಉಡುಪಿ ಪೊಲೀಸರು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಅನ್ಯಾಯ ಮಾಡಿದ್ದಾರೆ ಎಂದೆಲ್ಲವನ್ನೂ ಪತ್ರದಲ್ಲಿ ವಿವರಿಸಿರುವೆ' ಎಂದು ರೇಣುಕಾ ಕಣ್ಣೀರು ಸುರಿಸಿದರು.

ಪ್ರತಿಭಟಿಸಿದ್ದ ಸಂಬಂಧಿಗಳು: 'ಸಂತೋಷ್ ಆತ್ಮಹತ್ಯೆಗೆ ಕಾರಣವಾಗಿರುವ ಈಶ್ವರಪ್ಪ ವಿರುದ್ಧ ಪ್ರಕರಣ ದಾಖಲಾಗುವವರೆಗೂ ಶವ ಸಾಗಿಸುವುದಿಲ್ಲ' ಎಂದು ಸಂಬಂಧಿಗಳು ಪ್ರಕರಣ ನಡೆದಾಗ ಪಟ್ಟು ಹಿಡಿದು ಪ್ರತಿಭಟನೆ ನಡೆಸಿದ್ದರು. ಪ್ರಕರಣ ದಾಖಲಾದ ಬಳಿಕ ಶವವನ್ನು ಹುಟ್ಟೂರಿಗೆ ಕೊಂಡೊಯ್ದಿದ್ದರು. ಬಳಿಕ ಈಶ್ವರಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು.

ಕನ್ನಡ–ಸಂಸ್ಕೃತಿ: ನೆರವಿಗೆ ಹಲವು ನಿರ್ಬಂಧ

ಒಂದನೇ ಪುಟದಿಂದ...

ಪರಿಷ್ಕೃತ ಮಾರ್ಗಸೂಚಿ ಪ್ರಕಾರ ಮೂರು ವರ್ಷ ಸತತವಾಗಿ ಅನುದಾನ ಪಡೆಯುವ ಸಂಘ–ಸಂಸ್ಥೆಗಳು ನಾಲ್ಕನೇ ವರ್ಷ ಆರ್ಥಿಕ ನೆರವಿಗೆ ಅರ್ಜಿ ಸಲ್ಲಿಸುವಂತಿಲ್ಲ. ಅಂತೆಯೇ, ಹೊಸದಾಗಿ ನೋಂದಣಿಯಾದ ಸಂಘ–ಸಂಸ್ಥೆಗಳು ಸರ್ಕಾರದ ಧನಸಹಾಯಕ್ಕೆ ಮೂರು ವರ್ಷಗಳವರೆಗೆ ಅರ್ಜಿ ಸಲ್ಲಿಸುವಂತಿಲ್ಲ. ನೆರವು ಪಡೆಯಲು ಆಯ್ಕೆಯಾದ ಸಂಘ–ಸಂಸ್ಥೆಯೊಂದಕ್ಕೆ ಅನುದಾನದ ಗರಿಷ್ಠ ಮಿತಿಯನ್ನೂ ₹ 2 ಲಕ್ಷಕ್ಕೆ ಮಿತಿಗೊಳಿಸಲಾಗಿದೆ. ಈ ನಿರ್ಬಂಧಗಳು ಕಲಾವಿದರು, ಸಂಘ–ಸಂಸ್ಥೆಗಳ ಮುಖ್ಯಸ್ಥರ ಅಸಮಾಧಾನಕ್ಕೆ ಕಾರಣವಾಗಿವೆ.

ಕಾರ್ಯಕ್ರಮ ಕಷ್ಟ: ಜಿಲ್ಲಾ ಹಂತದಲ್ಲಿ ಅನುಷ್ಠಾನಾಧಿಕಾರಿಗಳಾದ ಸಹಾಯಕ ನಿರ್ದೇಶಕರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವಂತೆ ನೋಡಿಕೊಳ್ಳಲು ಅವರಿಗೆ ಹೆಚ್ಚಿನ ಅಧಿಕಾರ ನೀಡಲಾಗಿದೆ. ಕ್ರಿಯಾಯೋಜನೆಗೆ ಅವರ ಅನುಮೋದನೆ ಪಡೆದು, ಕಾರ್ಯಕ್ರಮ ಏರ್ಪಡಿಸಬೇಕಿದೆ. ಇದನ್ನೂ ಆಕ್ಷೇಪ ವ್ಯಕ್ತವಾಗಿವೆ.

'ಪಾರದರ್ಶಕತೆಯ ಹೆಸರಿನಲ್ಲಿ ಅವೈಜ್ಞಾನಿಕವಾಗಿ ಮಾರ್ಗಸೂಚಿ ಹೊರಡಿಸಲಾಗಿದೆ. ₹ 2 ಲಕ್ಷದಲ್ಲಿ ಹೇಗೆ ವರ್ಷಪೂರ್ತಿ ಕಾರ್ಯಕ್ರಮ ಮಾಡಲು ಸಾಧ್ಯ? ರವೀಂದ್ರ ಕಲಾಕ್ಷೇತ್ರದಲ್ಲಿ ಮಾಡುವ ಒಂದು ಕಾರ್ಯಕ್ರಮಕ್ಕೆ ಸರ್ಕಾರವೇ ₹ 25 ಲಕ್ಷ ವ್ಯಯಿಸಲಿದೆ. ಮೂರು ವರ್ಷಗಳ ಬಳಿಕ ಅನುದಾನ ನೀಡದಿದ್ದರೆ ಸಾಂಸ್ಕೃತಿಕ ಚಟುವಟಿಕೆ ಮುಂದುವರೆಸುವುದು ಹೇಗೆ' ಎಂಬ ತಕರಾರುಗಳು ಕೇಳಿಬಂದಿವೆ.

'ರಾಜ್ಯದ ಕೆಲ ಜಿಲ್ಲೆಗಳಲ್ಲಿ ಇಲಾಖೆಗೆ ಸಹಾಯಕ ನಿರ್ದೇಶಕರೇ ಇಲ್ಲ. ಇನ್ನೂ ಕೆಲವೆಡೆ ಕಲೆ, ಸಂಸ್ಕೃತಿ ಕುರಿತು ಆಸಕ್ತಿ ಇಲ್ಲದ ಅಧಿಕಾರಿಗಳಿದ್ದಾರೆ. ಹೀಗಿರುವಾಗ, ವಿಕೇಂದ್ರೀಕರಣದಿಂದ ಪಾರದರ್ಶಕತೆ ಹೇಗೆ ಬರಲಿದೆ? ಕಳೆದ ವರ್ಷ ಅನುದಾನ ₹ 2.5 ಲಕ್ಷಕ್ಕೆ ಸೀಮಿತವಾಗಿತ್ತು. ಕೆಲ ಸಂಸ್ಥೆಗಳಿಗೆ ಮುಖ್ಯಮಂತ್ರಿ, ಸಚಿವರ ಶಿಫಾರಸ್ಸಿನಂತೆ ಹೆಚ್ಚಿನ ಅನುದಾನ ಸಂದಾಯವಾಗಿದೆ' ಎಂದು ಕಲಾವಿದ ಡಾ. ಜಯಸಿಂಹ ಅವರು ಬೇಸರ ವ್ಯಕ್ತಪಡಿಸಿದರು.

ಈ ಮೊದಲು ಕೆಲ ಸಂಸ್ಥೆಗಳಿಗೆ ಮಾತ್ರವೇ ನೆರವು ಹಣ ಹೋಗುತ್ತಿತ್ತು. ಹೆಚ್ಚಿನ ಸಂಘ–ಸಂಸ್ಥೆಗಳಿಗೆ ಅನುದಾನ ಸಿಗಬೇಕೆಂದು ₹ 2 ಲಕ್ಷಕ್ಕೆ ಮಿತಿ ಮಾಡಲಾಗಿದೆ. ಆಕ್ಷೇಪಗಳು ಬಂದಿರುವುದರಿಂದ ಪರಿಶೀಲಿಸಲಾಗುವುದು.

ಪ್ರಕಾಶ್ ಜಿ.ನಿಟ್ಟಾಲಿ, ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಹಿಂದೆ ಸಂಘ–ಸಂಸ್ಥೆಗಳ ಕಾರ್ಯವೈಖರಿ ನೋಡಿ ಅನುದಾನ ನೀಡಲಾಗುತ್ತಿತ್ತು. ಏಕಾಏಕಿ ಅನುದಾನವನ್ನು ₹ 2 ಲಕ್ಷ ನಿಗದಿಗೊಳಿಸಿದ್ದು ಸರಿಯಲ್ಲ. ಈ ರೀತಿ ಕ್ರಮದಿಂದ ಕಲೆ ಉಳಿಸಿ, ಬೆಳೆಸಲು ಸಾಧ್ಯವಿಲ್ಲ.

ವೈ.ಕೆ.ಮುದ್ದುಕೃಷ್ಣ, ಅಧ್ಯಕ್ಷ, ಕರ್ನಾಟಕ ಸುಗಮ ಸಂಗೀತ ಪರಿಷತ್ತು

ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಹತ್ತಿಪ್ಪತ್ತು ಪಟ್ಟು ಹೆಚ್ಚು ಕಾರ್ಯಕ್ರಮ ಮಾಡುತ್ತಿದ್ದೇವೆ. ಸಂಘ–ಸಂಸ್ಥೆಗಳಿಗೆ ಈ ರೀತಿ ನಿರ್ಬಂಧ ವಿಧಿಸಿದರೆ ಕಾರ್ಯಕ್ರಮಗಳನ್ನು ಮುಂದುವರೆಸಲು ಸಾಧ್ಯವಿಲ್ಲ.

ಬೈರಮಂಗಲ ರಾಮೇಗೌಡ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ

ಪಿಎಸ್‌ಐ ನೇಮಕಾತಿ ಅಕ್ರಮ: 'ಸಹ ಆರೋಪಿಗಳಿಗೆ ಪೌಲ್ ಬೆದರಿಕೆ'

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಪ್ರಮುಖ ಆರೋಪಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರು ಪ್ರಕರಣದ ಸಹ ಆರೋಪಿಗಳಿಗೆ ಬೆದರಿಕೆ ಒಡ್ಡಿದ್ದಾರೆ ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ.

ಪೌಲ್ ಅವರ ಜಾಮೀನು ಅರ್ಜಿಗೆ ಸಂಬಂಧಿಸಿದಂತೆ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಬುಧವಾರ ಒಂದನೇ ಎಸಿಎಂಎಂ ನ್ಯಾಯಾಲಯದಲ್ಲಿ ವಾದ ಮುಂದುವರಿಸಿದರು.

'ಸಹ ಆರೋಪಿಗಳಿಗೆ ಪೌಲ್ ಬೆದರಿಕೆ ಒಡ್ಡಿದ್ದು ತಮಗೆ ನೀಡಲಾಗಿರುವ ಲಂಚದ ಮೊತ್ತ ಬಹಿರಂಗಪಡಿಸಬಾರದು. ನೀವೆಲ್ಲಾ ತೆಪ್ಪಗಿರಬೇಕು ಎಂದು ಹೆದರಿಕೆ ಹುಟ್ಟಿಸಿದ್ದಾರೆ' ಎಂದು ಆರೋಪಿಸಿದರು.

'ಇಡೀ ಹಗರಣ ಮೇಲ್ನೋಟಕ್ಕೆ ಮಧ್ಯಪ್ರದೇಶದಲ್ಲಿ ನಡೆದಿದ್ದ 'ವ್ಯಾಪಂ' ಹಗರಣದಂತಿದೆ. ಪೌಲ್ ಎಷ್ಟೇ ಒಳ್ಳೆಯ ಅಧಿಕಾರಿ ಎಂದು ಹೇಳಿಕೊಂಡರೂ, ಕೋರ್ಟ್ ಸಮಾಜದ ಅಳಲನ್ನು ಆಲಿಸಬೇಕಾದ ತುರ್ತಿದೆ' ಎಂದು ಕೋರಿದರು.

'ಆರೋಪಿಯು ಒಎಂಆರ್ ಉತ್ತರ ಪತ್ರಿಕೆಗಳನ್ನು ತಿದ್ದಿರುವುದು ಎಫ್‌ಎಸ್‌ಎಲ್ ವಿಶ್ಲೇಷಣೆಯಲ್ಲಿ ದೃಢಪಟ್ಟಿದೆ. ಜಾಮೀನು ನೀಡಬಾರದು' ಎಂದು ಪ್ರಸನ್ನ ಕುಮಾರ್ ಕೋರಿದರು.

ಪೌಲ್ ಪರ ವಕೀಲ ನಿತಿನ್ ರಮೇಶ್, 'ನನ್ನ ಕಕ್ಷಿದಾರರ ಆರೋಗ್ಯ ಸರಿ ಇಲ್ಲ. ಈಗ ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಿದರೆ ಆರೋಗ್ಯದ ಮೇಲೆ ಮತ್ತಷ್ಟು ದುಷ್ಪರಿಣಾಮ ಉಂಟಾಗಬಹುದು' ಎಂದರು, ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿದರು.

ಕಾಡುವ ಅಂಗಮಾರಿ ರೋಗ: ಬೆಂಬಿಡದೇ ಸುರಿಯುತ್ತಿರುವ ಮಳೆ

ರೈತರಿಗೆ ಆಸರೆಯಾಗದ ಆಲೂಗೆಡ್ಡೆ

• ಚಿದಂಬರಪ್ರಸಾದ

ಹಾಸನ: 'ಹರಸಾಹಸ ಪಟ್ಟು ಬಿತ್ತನೆ ಬೀಜ ತರಬೇಕು. ದೇವರ ಮೇಲೆ ಭಾರ ಹಾಕಿ ಬಿತ್ತನೆ ಮಾಡಬೇಕು. ಮಳೆ ಬಂದರೆ ಮುಗಿದೇ ಹೋಯಿತು. ಜೊತೆಗೆ ಅಂಗಮಾರಿ, ಕರಿಕಡ್ಡಿ ರೋಗ ಬೇರೆ. ಹಾಕಿದ ಬಂಡವಾಳವೂ ವಾಪಸ್ ಬರಲಾರದು ಎಂಬ ಪರಿಸ್ಥಿತಿ. ಅದಕ್ಕೇ ಆಲೂಗೆಡ್ಡೆಯ ಸಹವಾಸವೇ ಬೇಡ ಎನ್ನುವಂತಾಗಿದೆ'

-ಆಲೂರು ತಾಲ್ಲೂಕು ಬಸವನಹಳ್ಳಿಯ ರೈತ ಸ್ವಾಮಿನಾಥ ಅವರ ಸಂಕಟದ ನುಡಿಗಳಿವು.

ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾದ ಆಲೂಗೆಡ್ಡೆಯಿಂದ ಮೂರೇ ತಿಂಗಳಲ್ಲಿ ರೈತರ ಜೇಬು ತುಂಬುತ್ತಿತ್ತು. ಮುಂಗಾರು ಮಳೆ ಭರ್ತಿಯಾಗಿ ಶುರುವಾಗುವ ಹೊತ್ತಿಗೆ ಲಾಭಾಂಶ ಕೈಸೇರುತ್ತಿತ್ತು. ಮತ್ತೆ ಕೃಷಿ ಚಟುವಟಿಕೆ ನಡೆಸಲು ಅನುಕೂಲವೂ ಆಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ರೈತರು, 'ಆಲೂಗೆಡ್ಡೆ ಬೆಳೆಯುವುದೇ ಕೈಸುಟ್ಟುಕೊಳ್ಳುವ ಕೆಲಸ' ಎನ್ನುತ್ತಿದ್ದಾರೆ.

ಜಿಲ್ಲೆಯ ಅರಕಲಗೂಡು, ಆಲೂರು, ಹಾಸನ ತಾಲ್ಲೂಕಿನಲ್ಲಿ ಹೆಚ್ಚಾಗಿ ಆಲೂಗೆಡ್ಡೆ ಬೆಳೆಯಲಾಗುತ್ತದೆ. 15 ವರ್ಷಗಳ ಹಿಂದೆ ಸುಮಾರು 50 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯುತ್ತಿದ್ದ ಆಲೂಗೆಡ್ಡೆ ಬೆಳೆ, ಈ ವರ್ಷ ಕೇವಲ 3,600 ಹೆಕ್ಟೇರ್‌ಗೆ ಇಳಿದಿದೆ. ಮಳೆ, ರೋಗದ ಬಾಧೆ ಕಾಡದಿದ್ದರೆ, ಒಳ್ಳೆಯ ಬೆಳೆ ಬರುತ್ತದೆ. ಆಗ ಮಾರುಕಟ್ಟೆಯ ಸಮಸ್ಯೆ ಎದುರಾಗುತ್ತದೆ. ಆದರೆ 3-4 ವರ್ಷದಿಂದ ಮಾರುಕಟ್ಟೆಯನ್ನು ನೋಡುವ ಪರಿಸ್ಥಿತಿಯೇ ಬರುತ್ತಿಲ್ಲ. ಆಲೂಗೆಡ್ಡೆ ಹೊಲದಲ್ಲಿಯೇ ಹಾಳಾಗಿ ಹೋಗುತ್ತಿದೆ' ಎನ್ನುವ ನೋವು ರೈತರದ್ದು.

'ಈ ವರ್ಷ 190 ಹೆಕ್ಟೇರ್ ಬೆಳೆ ಮಳೆಯಿಂದ ಹಾಳಾಗಿದೆ' ಎನ್ನುವುದು ತೋಟಗಾರಿಕೆ ಇಲಾಖೆಯ ಮಾಹಿತಿ. ಆದರೆ, 'ಶೇ 50 ರಷ್ಟು ಬೆಳೆ ನಷ್ಟವಾಗಿದೆ' ಎನ್ನುವುದು ರೈತರ ವಾದ.

'ಪ್ರತಿ ಎಕರೆ ಆಲೂಗೆಡ್ಡೆ ಬೆಳೆಯಲು ₹ 50 ಸಾವಿರ ಖರ್ಚಾಗುತ್ತದೆ. ಕಳಪೆ ಗುಣಮಟ್ಟದ ಬಿತ್ತನೆ ಬೀಜ, ಮಳೆ, ಅಂಗಮಾರಿ ರೋಗ ಸೇರಿದಂತೆ ಹಲವು ಸಂಕಷ್ಟಗಳನ್ನು ಎದುರಿಸಬೇಕು' ಎಂದು ಹಾಸನ ತಾಲ್ಲೂಕಿನ ದುದ್ದ ಗ್ರಾಮದ ರೈತ ರಾಮಣ್ಣ ಹೇಳುತ್ತಾರೆ.

'ಈ ಬಾರಿ ಅರಕಲಗೂಡು ತಾಲ್ಲೂಕಿನಲ್ಲಿ 780 ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆಯಲಾಗಿದ್ದು, ಹೆಚ್ಚಿನ ಮಳೆಗೆ ಬೆಳೆ ಹಾನಿಯಾಗಿದೆ. ಉಳಿದ ಬೆಳೆಯಲ್ಲೂ ಇಳುವರಿ ಕಡಿಮೆಯಾಗುವ ಸಾಧ್ಯತೆ ಇದೆ. 53 ರೈತರ ಬೆಳೆ ಹಾನಿಯಾಗಿದ್ದು, ₹4.68 ಲಕ್ಷ ಪರಿಹಾರಕ್ಕೆ ಶಿಫಾರಸು ಮಾಡಲಾಗಿದೆ' ಎಂದು ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಡಿ. ರಾಜೇಶ್ ತಿಳಿಸಿದರು.

ಮೇ ತಿಂಗಳಲ್ಲೂ ಮಳೆ ಹೆಚ್ಚಾಗಿತ್ತು. ಕೆಲವೆಡೆ ಬಿತ್ತನೆ ಮಾಡಿದ ಬೀಜ ಹಾಳಾಗಿತ್ತು. ಈಗಲೂ ಧಾರಾಕಾರ ಮಳೆಯಿಂದ ಆಲೂಗೆಡ್ಡೆಗೆ ಹಾನಿಯಾಗಿದೆ.

ಎಚ್‌.ಆರ್. ಯೋಗೇಶ್, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ, ಹಾಸನ

2.10 ಎಕರೆ ಪ್ರದೇಶದಲ್ಲಿ ಆಲೂಗೆಡ್ಡೆ ಕೃಷಿ ಮಾಡಿದ್ದೆ. ಭಾರಿ ಮಳೆಗೆ ಜಮೀನಿನಲ್ಲಿ ನೀರು ತುಂಬಿ ಸಂಪೂರ್ಣ ಬೆಳೆ ಹಾಳಾಗಿದೆ. ಸರ್ಕಾರ ಪರಿಹಾರ ನೀಡಬೇಕು.

ಜಗದೀಶ್, ಶ್ಯಾನುಭೋಗನಹಳ್ಳಿ ಆಲೂಗೆಡ್ಡೆ ಬೆಳೆಗಾರ

ಮಳೆ ಕಥೆ– ವ್ಯಥೆ

ಆಲೂಗೆಡ್ಡೆ ಬಿತ್ತನೆ (ಹೆಕ್ಟೇರ್‌ಗಳಲ್ಲಿ)

ವರ್ಷ	ಬಿತ್ತನೆ
2019-20	9392
2020-21	8337
2021-22	10420
2022-23	3600

ವರ್ಷದಲ್ಲಿ 2 ಬಾರಿ ಮಳೆ

ಜಿಲ್ಲೆಯಲ್ಲಿ ಮೇ ಎರಡನೇ ವಾರದಲ್ಲಿಯೇ ಆಲೂಗೆಡ್ಡೆಯನ್ನು ಬಿತ್ತನೆ ಮಾಡಲಾಗಿತ್ತು. ಆದರೆ, ಮೂರನೇ ವಾರದಲ್ಲಿ ನಿರಂತರ ಮಳೆಯಾಗಿದ್ದು, ಆಲೂಗಡ್ಡೆ ಬೀಜಗಳು ನೀರಿನಲ್ಲಿ ಕೊಳೆತು ಹೋಗಿದ್ದವು.

ಕೆಲ ರೈತರು ಜೂನ್‌ನಲ್ಲಿ ಬಿತ್ತನೆ ಮಾಡಿದ್ದರು. ಇದೀಗ ಸುರಿದ ಮಳೆಯಿಂದಾಗಿ ಆ ರೈತರೂ ಸಂಕಷ್ಟ ಎದುರಿಸುವಂತಾಗಿದೆ. ಅಳಿದುಳಿದ ಆಲೂಗಡ್ಡೆಗೂ ರೋಗ ಬಾಧೆ ಕಾಡುತ್ತಿದೆ.

ಪ್ರಾರಂಭದ ವರ್ಷಗಳಲ್ಲಿ ಕೆಲ ರೈತರು ಲೋಡ್‌ಗಟ್ಟಲೆ ಬೆಳೆದು ಉತ್ತಮ ಲಾಭ ಪಡೆದರು.

ಬಿಳಿಗಿರಿರಂಗನಬೆಟ್ಟ: ಜಂಟಿ ಸಮೀಕ್ಷೆಗೆ 10 ತಿಂಗಳು; ಅಂತಿಮ ನಿರ್ಧಾರಕ್ಕೆ ಬಾರದ ಜಿಲ್ಲಾಡಳಿತ

ಅರಣ್ಯ ಒತ್ತುವರಿ: ಬಗೆಹರಿಯದ ಪ್ರಕರಣ

• ಸೂರ್ಯನಾರಾಯಣ ವಿ.

ಚಾಮರಾಜನಗರ: ಜಿಲ್ಲೆಯ ಬಿಳಿಗಿರಿರಂಗನಬೆಟ್ಟದಲ್ಲಿ ಅರಣ್ಯ ಭೂಮಿ ಒತ್ತುವರಿಯನ್ನು ಅರಣ್ಯ ಹಾಗೂ ಕಂದಾಯ ಇಲಾಖೆಯು ಜಂಟಿ ಸರ್ವೆ ಮೂಲಕ ಗುರುತಿಸಿ 10 ತಿಂಗಳಾದರೂ ಪ್ರಕರಣ ಇತ್ಯರ್ಥವಾಗಿಲ್ಲ.

‘ಒತ್ತುವರಿದಾರರ ಪಟ್ಟಿಯಲ್ಲಿ ಕೆಲವು ಪ್ರಭಾವಿಗಳ ಹೆಸರಿದ್ದು, ಯಥಾಸ್ಥಿತಿ ಮುಂದುವರಿಸಬೇಕೆಂದು ಒತ್ತಡ ಹಾಕುತ್ತಿದ್ದಾರೆ’ ಎಂಬ ಮಾತು ಕೇಳಿಬರುತ್ತಿದೆ. ಆದರೆ, ಜಿಲ್ಲಾಡಳಿತ ಹಾಗೂ ಅರಣ್ಯ ಇಲಾಖೆ ಆರೋಪವನ್ನು ನಿರಾಕರಿಸಿವೆ.

ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ ಬಿಳಿಗಿರಿರಂಗನಬೆಟ್ಟದಲ್ಲಿ ರಂಗನಾಥಸ್ವಾಮಿ ದೇವಾಲಯವಿದೆ. ಸೋಲಿಗರೂ ವಾಸಿಸುತ್ತಿದ್ದಾರೆ. ಅರಣ್ಯ ಭೂಮಿ ಹೆಚ್ಚಿದ್ದು, ಕಂದಾಯ ಭೂಮಿಯೂ ಸ್ವಲ್ಪ ಪ್ರಮಾಣದಲ್ಲಿದೆ.

‘ಕೆಲವರು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾರೆ’ ಎಂಬ ಆರೋಪವನ್ನು ಆಧರಿಸಿ, ಉಪ ಲೋಕಾಯುಕ್ತರಾಗಿದ್ದ ಸುಭಾಷ್ ಬಿ.ಅಡಿ ಅವರು ವಿಸ್ತೃತ ತನಿಖೆ ನಡೆಸಿ, 2018ರಲ್ಲಿ ವರದಿ ನೀಡಿದ್ದರು. ‘ನಿಗದಿಗಿಂತ ಹೆಚ್ಚಿನ ಭೂಮಿ ಒತ್ತುವರಿಯಾಗಿದೆ. ವಾಪಸ್ ಪಡೆಯಬೇಕು’ ಎಂದು ಹೇಳಿದ್ದರು.

2021ರ ಆಗಸ್ಟ್‌ನಲ್ಲಿ ಜಿಲ್ಲಾಡಳಿತವು ಅರಣ್ಯ ಹಾಗೂ ಕಂದಾಯ ಇಲಾಖೆಯ ಮೂಲಕ ಜಂಟಿ ಸರ್ವೆ ನಡೆಸಿತ್ತು. ಬಿಳಿಗಿರಿರಂಗನಬೆಟ್ಟದ ಸರ್ವೆ ನಂಬರ್ 1, 2, 3 ಮತ್ತು 4ರಲ್ಲಿ ಒಟ್ಟು 605.26 ಎಕರೆ ಪ್ರದೇಶದ ಸರ್ವೆ ನಡೆಸಲಾಗಿತ್ತು.

ಸರ್ವೆ ನಂ 4ರಲ್ಲಿ 22,735.06 ಎಕರೆ ಜಮೀನಿದ್ದು, 22,180.06 ಎಕರೆ ಬಿಆರ್‌ಟಿ ಅರಣ್ಯಕ್ಕೆ ಸೇರಿದೆ. 555 ಎಕರೆ ಜಮೀನು ಅರಣ್ಯೇತರ ಭೂಮಿ. ಆ ಪೈಕಿ 430 ಎಕರೆಯನ್ನು 1962ರಲ್ಲಿ ದೇವಸ್ಥಾನದ ಉಪಯೋಗ ಹಾಗೂ ಬೆಟ್ಟದ ಸ್ಥಳೀಯರಿಗೆ ಇನಾಂ ಅಡಿಯಲ್ಲಿ ಮಂಜೂರು ಮಾಡಲಾಗಿದೆ. 125 ಎಕರೆ ಜಮೀನು ಸೋಲಿಗರಿಗೆ ದರಖಾಸ್ತು ಅಡಿಯಲ್ಲಿ ಮಂಜೂರಾಗಿದೆ.

1, 2, 3 ಸರ್ವೆ ನಂಬರ್‌ಗಳಲ್ಲಿ ಸ್ವಲ್ಪ ಹಾಗೂ ಸರ್ವೆ ನಂಬರ್ 4ರಲ್ಲಿ ಅತಿ ಹೆಚ್ಚು ಅಂದರೆ, 147.28 ಎಕರೆ ಜಮೀನು ಒತ್ತುವರಿಯಾಗಿರುವುದನ್ನು ಸರ್ವೆ ಪತ್ತೆ ಹಚ್ಚಿತ್ತು. ಖಾಸಗಿ ವ್ಯಕ್ತಿಗಳು ಹಾಗೂ ಸೋಲಿಗರ ಕುಟುಂಬಗಳು ಜಮೀನನ್ನು ಅನುಭವಿಸುತ್ತಿದ್ದು, ಅವರಲ್ಲಿ ಮೂಲ ದಾಖಲೆಗಳಿಲ್ಲ. ಪಹಣಿ ಮಾತ್ರ ಇದೆ. ಅರಣ್ಯಭೂಮಿಯಾಗಿರುವುದರಿಂದ ಎಲ್ಲ ಪಹಣಿಗಳನ್ನು ರದ್ದುಪಡಿಸಬೇಕು ಎಂದು ಅರಣ್ಯ ಇಲಾಖೆ ಕಳೆದ ವರ್ಷದ ಅಕ್ಟೋಬರ್‌ನಲ್ಲೇ ಕಂದಾಯ ಇಲಾಖೆಯನ್ನು ಕೋರಿತ್ತು. ಆದರೂ, ಒತ್ತುವರಿ ಭೂಮಿ ಅರಣ್ಯ ಇಲಾಖೆಗೆ ದೊರಕಿಲ್ಲ.

‘ಸರ್ವೆ ನಂಬರ್ 4ರಲ್ಲಿರುವ 25 ಸೋಲಿಗ ಕುಟುಂಬಗಳನ್ನು ಒಕ್ಕಲೆಬ್ಬಿಸಲು ಹುನ್ನಾರ ನಡೆಸಲಾಗಿದೆ’ ಎಂದು ಸೋಲಿಗರ ಸಂಘಟನೆಗಳು ಆರೋಪಿಸಿವೆ. ಸೋಲಿಗರು ಬೃಹತ್ ಪ್ರತಿಭಟನೆಯನ್ನೂ ನಡೆಸಿದ್ದಾರೆ.



ಜಂಟಿ ಸಮೀಕ್ಷೆ ವರದಿ ಸಂಬಂಧ ಸಭೆಗಳನ್ನು ನಡೆಸಲಾಗಿದೆ. ಅರಣ್ಯ, ಕಂದಾಯ ಇಲಾಖೆಗಳ ನಿಯಮಗಳಡಿ ಕ್ರಮ ಕೈಗೊಳ್ಳಲಾಗುತ್ತಿದೆ

ಚಾರುಲತಾ ಸೋಮಲ್, ಜಿಲ್ಲಾಧಿಕಾರಿ



ಈ ವಿಚಾರ ಅಂತಿಮ ಹಂತದಲ್ಲಿದೆ. ಉನ್ನತ ಅಧಿಕಾರಿಗಳಿಗೆ ವಿವರಗಳನ್ನು ನೀಡಬೇಕಾಗಿದ್ದು, ಶೀಘ್ರ ಇತ್ಯರ್ಥವಾಗುವ ವಿಶ್ವಾಸವಿದೆ

ಡಾ.ಜಿ.ಸಂತೋಷ್‌ಕುಮಾರ್, ಡಿಸಿಎಫ್, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ



ಜಿಲ್ಲಾಡಳಿತವು ಜಮೀನಿನ ಮೂಲ ದಾಖಲೆಗಳನ್ನು ಕೇಳಿದೆ. ನಾವು ಆರ್‌ಟಿಸಿ, ಪಟ್ಟಾ, ತೆರಿಗೆ ಪಾವತಿಸಿರುವ ದಾಖಲೆಗಳನ್ನು ನೀಡಿದ್ದೇವೆ

ಡಾ.ಸಿ.ಮಾದೇಗೌಡ, ಜಿಲ್ಲಾ ಸೋಲಿಗ ಅಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ

ಅರಣ್ಯ ಹಕ್ಕು ಕಾಯ್ದೆಯಲ್ಲಿ ಭೂಮಿ ನೀಡಲು ಪ್ರಯತ್ನ

‘ಕಂದಾಯ ಇಲಾಖೆ ದಾಖಲೆಯ ಪ್ರಕಾರ, ಒತ್ತುವರಿ ಭೂಮಿಯನ್ನು ಯಾರಿಗೂ ಮಂಜೂರು ಮಾಡಿಲ್ಲ. ಹಿಂದೆ ಹೇಗೋ ಆರ್‌ಟಿಸಿ ಮಾಡಿಕೊಂಡಿದ್ದಾರೆ. ಆರ್‌ಟಿಸಿ ಭೂಮಿ ಮಾಲೀಕತ್ವದ ದಾಖಲೆ ಅಲ್ಲ’ ಎಂದು ಹೇಳುತ್ತಾರೆ ಹಿರಿಯ ಅಧಿಕಾರಿಗಳು.

‘ಆದಿವಾಸಿಗಳಿಗೆ ಅರಣ್ಯ ಹಕ್ಕು ಕಾಯ್ದೆ ಅಡಿ ಜಮೀನು, ಹಕ್ಕು ಪತ್ರ ನೀಡಲು ಜಿಲ್ಲಾಡಳಿತ ಹಾಗೂ ಕಂದಾಯ ಇಲಾಖೆ ಪ್ರಯತ್ನ ನಡೆಸುತ್ತಿದೆ. ಆ ಕಾರಣಕ್ಕೆ ವಿಳಂಬವಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

‘ಸೋಲಿಗರಿಗೆ ಸಂಬಂಧಿಸಿದ ಜಮೀನನ್ನು ಮಾತ್ರ ವಿಶೇಷ ಪ್ರಕರಣವೆಂದು ಪರಿಗಣಿಸಿ ಅರಣ್ಯ ಹಕ್ಕು ಕಾಯ್ದೆ ಅಡಿಯಲ್ಲಿ ಅವರಿಗೆ ಜಮೀನು ನೀಡುವುದಕ್ಕೆ ಕ್ರಮ ವಹಿಸಿ, ಉಳಿದ ಒತ್ತುವರಿ ಪ್ರಕರಣಗಳನ್ನು ಬೇಗ ಇತ್ಯರ್ಥ ಮಾಡಬೇಕು’ ಎಂದು ಪರಿಸರವಾದಿಗಳು ಆಗ್ರಹಿಸುತ್ತಿದ್ದಾರೆ.

ಯಾರದ್ದೆಲ್ಲಾ ಹೆಸರು

ಒತ್ತುವರಿ ಪ್ರದೇಶದಲ್ಲಿ ಜಮೀನು ಹೊಂದಿರುವವರ ಪಟ್ಟಿಯಲ್ಲಿ ಡಾ.ಎಚ್.ಸುದರ್ಶನ್, ವಿ.ಸುದರ್ಶನ್, ಜಿ.ಎಸ್. ಜಯದೇವ, ಎಚ್.ಬಾಲ ಸುಬ್ರಹ್ಮಣ್ಯಂ, ಆರ್.ನಾಗರಾಜು, ಎಸ್.ಗೋವಿಂದರಾಜು, ವಿ.ನಾರಾಯಣಸ್ವಾಮಿ, ಎನ್.ಗಿರಿಧರ್ ಶ್ರೀನಿವಾಸ್, ಸೋಲಿಗ ಸಮುದಾಯದವರಾದ ಜಡೇಗೌಡ, ಜಡೆಯಗೌಡ, ಕೇತೇಗೌಡ ಸೇರಿದಂತೆ ಹಲವು ಹೆಸರುಗಳಿವೆ. ಇದೇ ಪ್ರದೇಶದಲ್ಲಿ ಲೋಕೋಪಯೋಗಿ ಇಲಾಖೆಯ ರಾಷ್ಟ್ರಪತಿ ಭವನ, ಗಾಂಧಿ ಸ್ಮಾರಕ ವೀಧಿ, ರೇಷ್ಮೆ ಇಲಾಖೆಯ ಫಾರ್ಮ್ ಕೂಡ ಇದೆ.

ಟೋಲ್‌ಗೇಟ್‌ಗೆ ಆಂಬುಲೆನ್ಸ್ ಡಿಕ್ಕಿ: ನಾಲ್ವರು ಸಾವು

ಬೈಂದೂರು (ಉಡುಪಿ ಜಿಲ್ಲೆ): ಹೊನ್ನಾವರದಿಂದ ಉಡುಪಿಗೆ ರೋಗಿಗಳನ್ನು ಚಿಕಿತ್ಸೆಗೆ ಕರೆತರುತ್ತಿದ್ದ ಆಂಬುಲೆನ್ಸ್ ಬೈಂದೂರು ತಾಲ್ಲೂಕಿನ ಶಿರೂರು ಟೋಲ್ ಗೇಟ್ ಬಳಿ ಬುಧವಾರ ಅಪಘಾತಕ್ಕೀಡಾಗಿದ್ದು ನಾಲ್ವರು ಮೃತಪಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಹಡಿನಬಾಳ ಸಮೀಪದ ಹಾಡಗೇರಿಯ, ಚಿಕಿತ್ಸೆ ಪಡೆಯಲು ಬರುತ್ತಿದ್ದ ಹೃದ್ರೋಗಿ ಗಜಾನನ ನಾಯ್ಕ, ಸಂಬಂಧಿಗಳಾದ ಮಂಜುನಾಥ ನಾಯ್ಕ, ಲೋಕೇಶ್ ನಾಯ್ಕ, ಜ್ಯೋತಿ ನಾಯ್ಕ ಮೃತರು. ಆಂಬುಲೆನ್ಸ್ ಒಳಗಿದ್ದ ಗಣೇಶ್ ನಾಯ್ಕ, ಗೀತಾ ಗಜಾನನ ನಾಯ್ಕ, ಶಶಾಂಕ್ ನಾಯ್ಕ, ಆಂಬುಲೆನ್ಸ್ ಚಾಲಕ ರೋಷನ್ ಹಾಗೂ ಟೋಲ್ ಸಿಬ್ಬಂದಿ ಸಂಭಾಜಿ ಘೋರ್ಪಡೆ ಗಾಯಗೊಂಡಿದ್ದಾರೆ.

ವೇಗವಾಗಿ ಬರುತ್ತಿದ್ದ ಆಂಬುಲೆನ್ಸ್ ಗಮನಿಸಿದ ಟೋಲ್ ಸಿಬ್ಬಂದಿ, ರಸ್ತೆಗೆ ಅಡ್ಡಲಾಗಿದ್ದ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸುತ್ತಿದ್ದರು. ರಸ್ತೆಯಲ್ಲಿ ಮಲಗಿದ್ದ ದನವನ್ನು ಓಡಿಸಲು ಯತ್ನಿಸುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ಕಳೆದುಕೊಂಡ ಆಂಬುಲೆನ್ಸ್ ಟೋಲ್ ಕಂಬಕ್ಕೆ ಡಿಕ್ಕಿ ಹೊಡೆದಿದೆ.

ಆಂಬುಲೆನ್ಸ್ ವೇಗವಾಗಿ ಬಂದು ಟೋಲ್‌ಗೆ ಡಿಕ್ಕಿಯಾಗುವ ಸಿಸಿ ಟಿವಿ ಕ್ಯಾಮೆರಾ ದೃಶ್ಯಾವಳಿಗಳು ಅಪಘಾತದ ಭೀಕರತೆಗೆ ಸಾಕ್ಷಿಯಾಗಿವೆ.



ಬೈಂದೂರು ಬಳಿಯ ಟೋಲ್‌ಗೇಟ್‌ನಲ್ಲಿ ಅಪಘಾತಕ್ಕೀಡಾಗಿರುವ ಆಂಬುಲೆನ್ಸ್

‘ವಿಡಿಯೊ’ ನೋಡಲು ಕೋಡ್ ಸ್ಕ್ಯಾನ್ ಮಾಡಿ.... ಪ್ರಜಾವಾಣಿ ನೋಡಿಯೊ

ವನಿಲ್ ವೇಗಸ್‌ಗೆ ತಲುಪಿದ ಗ್ರ್ಯಾಮಿ ಪ್ರಶಸ್ತಿ

ಬೆಂಗಳೂರು: ‘ಡಿವೈನ್ ಟೈಡ್ಸ್’ ಸಂಗೀತ ಆಲ್ಬಂಗೆ ಖ್ಯಾತ ಗಾಯಕ ರಿಕಿ ಕೇಜ್ ಜೊತೆ ಕನ್ನಡಿಗ ವನಿಲ್ ವೇಗಸ್ ಹಾಗೂ ಮುಂಬೈನ ಪಿ.ಎ.ದೀಪಕ್ ಅವರಿಗೂ ಪ್ರತಿಷ್ಠಿತ ಗ್ರ್ಯಾಮಿ ಪ್ರಶಸ್ತಿ ತಲುಪಿದೆ.

ಈ ವರ್ಷ ಏಪ್ರಿಲ್ 4ರಂದು ಈ ಪ್ರಶಸ್ತಿ ಪ್ರಕಟವಾಗಿತ್ತು. ರಿಕಿ ಅವರು ಲಾಸ್‌ವೇಗಸ್‌ನಲ್ಲಿ ಈ ಪ್ರಶಸ್ತಿ ಸ್ವೀಕರಿಸಿದ್ದರು. ವನಿಲ್ ಅವರಿಗೆ ಗ್ರ್ಯಾಮಿ ಟ್ರೋಫಿ ಇತ್ತೀಚೆಗೆ ಕೈ ಸೇರಿದೆ.

‘ಬೆಸ್ಟ್ ನ್ಯೂ ಏಜ್’ ವಿಭಾಗದಲ್ಲಿ ಈ ಆಲ್ಬಂನ ಧ್ವನಿ ವಿನ್ಯಾಸಕ್ಕೆ (ಸೌಂಡ್ ಎಂಜಿನಿಯರಿಂಗ್ ಮತ್ತು ಮಿಕ್ಸಿಂಗ್) ಈ ಪ್ರಶಸ್ತಿ ಸಿಕ್ಕಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಪ್ರಶಸ್ತಿ ಸಿಕ್ಕಿರುವುದು ಸಂತಸ ತಂದಿದೆ’ ಎಂದು ವನಿಲ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಈ ಹಿಂದೆ (2015) ರಿಕಿ ಅವರು ‘ವಿಂಡ್ಸ್ ಆಫ್ ಸಂಸಾರ’ ಆಲ್ಬಂ ಮಾಡಿದಾಗ ಅವರಿಗೆ ‘ಗ್ರ್ಯಾಮಿ’ ಪ್ರಶಸ್ತಿ ಒಲಿದಿತ್ತು. ನನಗೆ ಗ್ರ್ಯಾಮಿ ಪ್ರಮಾಣಪತ್ರ ಸಿಕ್ಕಿತ್ತು. ಈಗ ಕರ್ನಾಟಕಕ್ಕೆ ಸಿಕ್ಕಿರುವುದು ಎರಡನೇ ಗ್ರ್ಯಾಮಿ ಪ್ರಶಸ್ತಿ’ ಎಂದು ವನಿಲ್ ಅವರು ಹೇಳಿದರು.

ವನಿಲ್ ಅವರು ಮೂಲತಃ ಮಂಗಳೂರಿನ ಉಳ್ಳಾಲದವರು. 2000ರ ವೇಳೆಗೆ ಕೀಬೋರ್ಡ್ ವಾದಕರಾಗಿ ಸಂಗೀತ ಕ್ಷೇತ್ರ ಪ್ರವೇಶಿಸಿದವರು. ಹಲವು ಸಂಗೀತ ತಂಡಗಳಲ್ಲಿ ಕೀಬೋರ್ಡ್ ವಾದಕರಾಗಿದ್ದರು. ಮುಂದೆ ಸಂಗೀತ ನಿರ್ದೇಶಕರಾಗಿ ಗುರುತಿಸಿಕೊಂಡರು. ‘ವೈಲ್ಡ್ ಕರ್ನಾಟಕ’ ಸಾಕ್ಷ್ಯಚಿತ್ರ, ರಮೇಶ್ ಅರವಿಂದ್ ನಟನೆಯ ‘ಆ್ಯಕ್ಸಿಡೆಂಟ್’, ‘ವೆಂಕಟ ಇನ್ ಸಂಕಟ’, ‘ಕ್ರೇಜಿ ಕುಟುಂಬ’ ಚಿತ್ರಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಬೆಂಗಳೂರಿನಲ್ಲಿ ನೆಲೆಸಿರುವ ಅವರು, ಅಮೆರಿಕ ಸಹಿತ ವಿವಿಧ ದೇಶಗಳ ಸಂಗೀತ ಯೋಜನೆಗಳಿಗೆ ಕೆಲಸ ಮಾಡುತ್ತಿದ್ದಾರೆ.



ಗ್ರ್ಯಾಮಿ ಪ್ರಶಸ್ತಿಯೊಂದಿಗೆ ಪಿ.ಎ. ದೀಪಕ್ (ಎಡ), ರಿಕಿ ಕೇಜ್, ವನಿಲ್ ವೇಗಸ್

ಗಂಟಲಿನಲ್ಲಿ ಚಾಕೊಲೇಟ್ ಸಿಲುಕಿ ಸಾವು

ಬೈಂದೂರು (ಉಡುಪಿ ಜಿಲ್ಲೆ): ತಾಲ್ಲೂಕಿನ ಬಿಜೂರು ಗ್ರಾಮದ ಕಬ್ಸೆಯಲ್ಲಿ ಬುಧವಾರ ಚಾಕೊಲೇಟ್ ಗಂಟಲಿನಲ್ಲಿ ಸಿಲುಕಿ ಏಳು ವರ್ಷದ ಬಾಲಕಿ ಮೃತಪಟ್ಟಿದ್ದಾಳೆ.

ಉಪ್ಪುಂದದ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಒಂದನೇ ತರಗತಿ ವಿದ್ಯಾರ್ಥಿನಿ ಸಮನ್ವಿ ಮೃತ ಬಾಲಕಿ. ಬೆಳಿಗ್ಗೆ ಬಾಲಕಿ ಶಾಲಾ ಬಸ್ ಹತ್ತಲು ಅವಸರದಲ್ಲಿ ಓಡುವಾಗ ಕವರ್ ಸಹಿತವಾಗಿ ಚಾಕೊಲೇಟ್ ಬಾಯಿಗೆ ಹಾಕಿಕೊಂಡಿದ್ದಾಳೆ. ಈ ಸಂದರ್ಭ ಆಕಸ್ಮಿಕವಾಗಿ ಅದು ಗಂಟಲಿನಲ್ಲಿ ಸಿಲುಕಿ, ಉಸಿರಾಡಲು ಕಷ್ಟವಾಗಿ ಶಾಲಾ ವಾಹನದ ಬಳಿಯೇ ಕುಸಿದು ಬಿದ್ದಿದ್ದಾಳೆ.

ಕೂಡಲೇ ಪೋಷಕರು, ವಾಹನದ ಚಾಲಕ ಹಾಗೂ ಸ್ಥಳೀಯರು ಬಾಲಕಿಗೆ ಉಪಚರಿಸಿ ಬೈಂದೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಷ್ಟರಲ್ಲಿ ಸಮನ್ವಿ ಮೃತಪಟ್ಟಿದ್ದಾಳೆ. ಮರಣೋತ್ತರ ಪರೀಕ್ಷೆಯ ವರದಿ ಬಳಿಕ ಸಾವಿನ ಕಾರಣ ತಿಳಿಯಲಿದೆ ಎಂದು ವೈದ್ಯರು ತಿಳಿಸಿದ್ದಾರೆ.



ಸಮನ್ವಿ

ಸಂವಿಧಾನ್ ಫೆಲೊಶಿಪ್‌ಗೆ ಅರ್ಜಿ ಆಹ್ವಾನ

ಬೆಂಗಳೂರು: ಕಾನೂನು ಅರಿವು ಮೂಡಿಸುವ ಸಂಸ್ಥೆ ‘ನ್ಯಾಯ’ ಸಂವಿಧಾನ್ ಫೆಲೊಶಿಪ್‌ಗೆ ಅರ್ಜಿ ಆಹ್ವಾನಿಸಿದೆ. ಕಾನೂನು ಅಭ್ಯಾಸ ಮಾಡುತ್ತಿರುವ ಆಸಕ್ತರು ಆಗಸ್ಟ್ 1ರೊಳಗೆ ಅರ್ಜಿ ಸಲ್ಲಿಸಬಹುದು.

ಫೆಲೊಶಿಪ್ ಪಡೆಯಲಿರುವ ಆರು ವಕೀಲರು ತಳಮಟ್ಟದ ಸಂಸ್ಥೆಗಳೊಂದಿಗೆ ಮತ್ತು ‘ನ್ಯಾಯ’ ತಂಡದೊಂದಿಗೆ ಕೆಲಸ ಮಾಡಬಹುದು.

ಮಾಹಿತಿಗಳಿಗೆ https://kannada.nyaaya.org/components/samvidhaan--fellowship/ ನೋಡಿ.

ಆಗಸ್ಟ್ 10ರಿಂದ ರಾಯರ ಆರಾಧನಾ ಮಹೋತ್ಸವ

ರಾಯಚೂರು: ಮಂತ್ರಾಲಯದಲ್ಲಿ ಆಗಸ್ಟ್ 10ರಿಂದ 16ರವರೆಗೆ ರಾಘವೇಂದ್ರ ಸ್ವಾಮಿಯವರ 351ನೇ ಆರಾಧನಾ ಮಹೋತ್ಸವ ನಡೆಯಲಿದೆ.

ರಾಘವೇಂದ್ರ ಸ್ವಾಮಿ ಮಠದ ಪೀಠಾಧಿಪತಿ ಶ್ರೀಸುಬುಧೇಂದ್ರ ತೀರ್ಥರ ಸಾನಿಧ್ಯದಲ್ಲಿ ಸಪ್ತರಾತ್ರೋತ್ಸವ ಕಾರ್ಯಕ್ರಮ ಜರುಗಲಿದೆ. ಪ್ರತಿ ದಿನ ಬೆಳಿಗ್ಗೆ 4.30ರಿಂದ 8.30ರವರೆಗೆ ಮೂಲ ವೃಂದಾವನದಲ್ಲಿ ನಿರ್ಮಾಲ್ಯ ವಿಸರ್ಜನೆ, ರಾಯರ ಪಾದಪೂಜೆ, ಪಂಚಾಮೃತಾಭಿಷೇಕ ನಡೆಯುತ್ತದೆ. ಬೆಳಿಗ್ಗೆ 11 ರಿಂದ ಮಧ್ಯಾಹ್ನ 2.30ರವರೆಗೆ ಸಂಸ್ಥಾನ ಪೂಜೆ, ಅಲಂಕಾರ, ಹಸ್ತೋದಕ, ಮಹಾಮಂಗಳಾರತಿ ನಡೆಯಲಿದೆ.

12ರಂದು ಶ್ರೀಗುರುಸಾರ್ವಭೌಮರ ಪೂರ್ವಾರಾಧನೆ ಪ್ರಯುಕ್ತ ರಜತ ಸಿಂಹ ವಾಹನೋತ್ಸವ, 13ರಂದು ಮಧ್ಯಾರಾಧನೆ, ಗಜ, ರಜತ, ಸ್ವರ್ಣ ರಥೋತ್ಸವ ನಡೆಯಲಿದೆ. 14ರಂದು ಉತ್ತರಾರಾಧನಾ ಮಹೋತ್ಸವದ ಪ್ರಯುಕ್ತ ಮಹಾರಥೋತ್ಸವ ನಡೆಯಲಿದೆ.

ಪ್ರತಿದಿನ ವಿದ್ವಾಂಸರಿಂದ ಪ್ರವಚನ, ಉಪನ್ಯಾಸ, ವಿವಿಧ ಸಂಗೀತ ಕಲಾವಿದರಿಂದ ದಾಸವಾಣಿ ಕಾರ್ಯಕ್ರಮ, ಭರತನಾಟ್ಯ, ನೃತ್ಯ ರೂಪಕ ಸೇರಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

ಮಂತ್ರಾಲಯದ ವಿದ್ವಾನ್ ಅರ್ಚಕ ಕೃಷ್ಣಾಚಾರ್, ಆಂಧ್ರಪ್ರದೇಶದ ನಿವೃತ್ತ ಡಿಜಿಪಿ ಆರ್.ಪ್ರಭಾಕರರಾವ್, ತಿರುವನಂತಪುರಂನ ವಿದ್ವಾನ್ ಆರ್. ಕೃಷ್ಣಮೂರ್ತಿ ಶಾಸ್ತ್ರಿ, ಬೆಂಗಳೂರಿನ ವಿದ್ವಾನ್ ಮಾಳಗಿ ರಾಮಾಚಾರ, ಮೈಸೂರಿನ ವಿದ್ವಾನ್ ಸಿ.ಎಚ್.ಶ್ರೀನಿವಾಸಮೂರ್ತಿ, ಆಂಧ್ರಪ್ರದೇಶದ ಧಾರ್ಮಿಕ ದತ್ತಿ ಇಲಾಖೆ ನಿವೃತ್ತ ಜಂಟಿ ಆಯುಕ್ತ ಎಲ್.ಮಾಧವಶೆಟ್ಟಿ, ಕರ್ನೂಲ್‌ನ ಡಾ.ಜಿ.ಆರ್ ಚಂದ್ರಶೇಖರ, ಹುಬ್ಬಳ್ಳಿಯ ಡಾ.ವಿ.ಜಿ ನಾಡಗೌಡ, ದಾನಿ ಎಂ.ಸೋಮಶೇಖರ್ ಅವರಿಗೆ ಶ್ರೀಅನುಗ್ರಹ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಜೈಲಿನಿಂದ ಜುಬೈರ್ ಬಿಡುಗಡೆ

ಒಂದನೇ ಪುಟದಿಂದ...

‘ಜುಬೈರ್ ಅವರು ಭವಿಷ್ಯದಲ್ಲಿ ಯಾವುದೇ ಟ್ವೀಟ್‌ಗಳನ್ನು ಮಾಡದಂತೆ ನಿರ್ಬಂಧ ವಿಧಿಸಬೇಕು’ ಎಂಬ ಉತ್ತರಪ್ರದೇಶ ಸರ್ಕಾರ ಪರ ವಾದ ಮಂಡಿಸಿದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್ ಅವರ ಮನವಿಯನ್ನು ನ್ಯಾಯಪೀಠ ತಿರಸ್ಕರಿಸಿತು.

‘ಒಬ್ಬ ಪತ್ರಕರ್ತನಿಗೆ ಬರೆಯಬೇಡ ಎಂದು ನಾವು ಹೇಳಲು ಹೇಗೆ ಸಾಧ್ಯ? ಇದು ವಕೀಲರೊಬ್ಬರಿಗೆ ವಾದ ಮಂಡಿಸಬೇಡಿ ಎಂದು ತಾಕೀತು ಮಾಡಿದಂತೆ’ ಎಂದು ಅಭಿಪ್ರಾಯಪಟ್ಟಿತು. ಇದಕ್ಕೆ ಪ್ರತಿಕ್ರಿಯಿಸಿದ ಗರಿಮಾ ಪ್ರಸಾದ್, ‘ಅವರು (ಜುಬೈರ್) ಪತ್ರಕರ್ತ ಅಲ್ಲ’ ಎಂದು ತಿಳಿಸಿದರು.

‘ಕಾನೂನಿಗೆ ವಿರುದ್ಧವಾಗಿ ಯಾವುದಾದರೂ ಟ್ವೀಟ್ ಮಾಡಿದರೆ, ಅದಕ್ಕೆ ಅವರು ಉತ್ತರದಾಯಿಯಾಗಿರುತ್ತಾರೆ. ಒಬ್ಬ ವ್ಯಕ್ತಿ ಮಾತನಾಡಬಾರದು ಎಂದು ಸೂಚಿಸಿ, ಮುಂಚಿತವಾಗಿಯೇ ನಾವು ಆದೇಶ ನೀಡಲು ಹೇಗೆ ಸಾಧ್ಯ. ಅವರು ಪುನಃ ಟ್ವೀಟ್ ಮಾಡುವುದಿಲ್ಲ ಎಂದು ನಾವು ಹೇಳಲು ಸಾಧ್ಯವಿಲ್ಲ’ ಎಂದು ನ್ಯಾಯಮೂರ್ತಿಗಳು ಹೇಳಿದರು.

‘ಟ್ವೀಟ್ ಮಾಡಿದರೆ ಜುಬೈರ್ ಅವರಿಗೆ ಹಣ ಪಾವತಿಸಲಾಗುತ್ತದೆ. ಟ್ವೀಟ್‌ಗಳು ಹೆಚ್ಚು ದ್ವೇಷಪೂರಿತವಾಗಿದ್ದಷ್ಟು ಅವರಿಗೆ ಹೆಚ್ಚು ಹಣ ನೀಡಲಾಗುತ್ತದೆ. ಜುಬೈರ್ ಈ ವರೆಗೆ ₹ 2 ಕೋಟಿಗೂ ಹೆಚ್ಚು ಹಣ ಪಡೆದಿದ್ದಾರೆ’ ಎಂದು ಉತ್ತರ ಪ್ರದೇಶ ಪರ ವಕೀಲರು ಹೇಳಿದರು.

ಈ ವಾದವನ್ನು ಅಲ್ಲಗಳೆದ, ಜುಬೈರ್ ಪರ ವಕೀಲರಾದ ವೃಂದಾ ಗ್ರೋವರ್, ‘ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುವ ಉದ್ದೇಶದಿಂದಲೇ ಪ್ರಕರಣಗಳನ್ನು ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಜುಬೈರ್ ವಿರುದ್ಧ ಹಾಥ್ರಸ್‌ನಲ್ಲಿ ಎರಡು ಎಫ್‌ಐಆರ್ ದಾಖಲಾಗಿವೆ. ಲಖೀಂಪುರ ಖೇರಿ, ಮುಜಫ್ಫನಗರ, ಗಾಜಿಯಾಬಾದ್ ಹಾಗೂ ಸೀತಾಪುರದಲ್ಲಿ ತಲಾ ಒಂದು ಎಫ್‌ಐಆರ್ ದಾಖಲಾಗಿವೆ. ಜೂನ್ 27ರಂದು ದೆಹಲಿ ಪೊಲೀಸರು ಬಂಧಿಸಿದ ನಂತರ ಅವರು ನ್ಯಾಯಾಂಗ ಬಂಧನದಲ್ಲಿದ್ದರು.

ರಾಂಚಿಯಲ್ಲಿ ಗೋವುಗಳ ಅಕ್ರಮ ಸಾಗಣೆ ಜಾಲದ ಕೃತ್ಯ: ಎಸ್ಪಿ ಶಂಕೆ

ವಾಹನ ಹರಿಸಿ ಮಹಿಳಾ ಪಿಎಸ್‌ಐ ಹತ್ಯೆ

ರಾಂಚಿ (ಪಿಟಿಐ): ಗೋವುಗಳ ಅಕ್ರಮ ಸಾಗಣೆಯಲ್ಲಿ ತೊಡಗಿದ್ದವರ ವಾಹನ ತಪಾಸಣೆ ನಡೆಸುತ್ತಿದ್ದ ಮಹಿಳಾ ಸಬ್‌ಇನ್ಸ್‌ಪೆಕ್ಟರ್ ಒಬ್ಬರ ಮೇಲೆಯೇ ಪಿಕಪ್ ವಾಹನ ಹರಿಸಿ ಹತ್ಯೆ ಮಾಡಿರುವ ಘಟನೆ ಬುಧವಾರ ಜಾರ್ಖಂಡ್‌ನ ರಾಜಧಾನಿಯಾದ ಇಲ್ಲಿ ನಡೆದಿದೆ. ಮಂಗಳವಾರವಷ್ಟೇ ಹರಿಯಾಣದ ನೂಹ್‌ನಲ್ಲಿ ಡಿವೈಎಸ್‌ಪಿ ಸುರೇಂದ್ರ ಸಿಂಗ್ ಬಿಷ್ಣೋಯಿ ಅವರನ್ನು ಗಣಿ ಮಾಫಿಯಾ ಇದೇ ರೀತಿ ಹತ್ಯೆ ಮಾಡಿತ್ತು.



ಸಂಧ್ಯಾ

‘ಸಂಧ್ಯಾ ಟೋಪ್ನೊ (32) ಹತ್ಯೆಯಾದವರು. ರಾಂಚಿಯ ಹೊರವಲಯದಲ್ಲಿರುವ ತುಪುದಾನಾ ಪ್ರದೇಶದಲ್ಲಿ ಸಂಧ್ಯಾ ಅವರು ವಾಹನ ತಪಾಸಣೆ ನಡೆಸುತ್ತಿದ್ದರು. ಈ ವೇಳೆ ದನಗಳನ್ನು ಸಾಗಿಸುತ್ತಿದ್ದ ವಾಹನವೊಂದು ವೇಗವಾಗಿ ಬಂದು ಸಂಧ್ಯಾ ಮೇಲೆ ಹರಿದಿದೆ’ ಎಂದು ಪೊಲೀಸರು ವಿವರಿಸಿದರು.

‘ಸಂಧ್ಯಾ ಅವರನ್ನು ತಕ್ಷಣವೇ ರಾಂಚಿಯ ರಾಜೇಂದ್ರ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ (ಆರ್‌ಐಎಂಎಸ್) ಆಸ್ಪತ್ರೆಗೆ ಕರೆದೊಯ್ಯಲಾಯಿತು. ತೀವ್ರವಾಗಿ ಗಾಯಗೊಂಡಿದ್ದ ಅವರು ಮಾರ್ಗಮಧ್ಯೆದಲ್ಲೇ ತೀರಿಕೊಂಡರು’ ಎಂದು ತುಪುದಾನಾ ಪೊಲೀಸ್ ಠಾಣೆಯ ಠಾಣಾಧಿಕಾರಿ ಕನ್ಹಯ್ಯ ಸಿಂಗ್ ತಿಳಿಸಿದರು.

‘ಗೋ ಸಾಗಣೆಯಲ್ಲಿ ತೊಡಗಿರುವವರೇ ಈ ಕೃತ್ಯ ಎಸಗಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಇಲ್ಲಿಯವರೆಗೆ ಒಬ್ಬರನ್ನು ಬಂಧಿಸಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇತರರಿಗಾಗಿ ಹುಡುಕಾಟ ನಡೆದಿದೆ. ಪ್ರಕರಣದ ತನಿಖೆ ಪ್ರಗತಿಯಲ್ಲಿದೆ’ ಎಂದು ರಾಂಚಿ ಎಸ್ಪಿ ಅನ್ಶುಮಾನ್ ಕುಮಾರ್ ಹೇಳಿದರು.

‘ಸಬ್‌ಇನ್ಸ್‌ಪೆಕ್ಟರ್ ಅವರು ವಾಹನವನ್ನು ತಡೆಯಲು ದೂರದಿಂದಲೇ ಕೈಬೀಸಿದರು. ಆದರೂ, ವಾಹನವು ಅವರ ಮೇಲೆ ಹರಿಯಿತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ಗೋವು ಅಕ್ರಮ ಸಾಗಣೆ: ರಾಜಕೀಯ ಮೇಲಾಟ

ರಾಂಚಿಯಲ್ಲಿ ನಡೆದ ಸಂಧ್ಯಾ ಅವರ ಹತ್ಯೆಯು ರಾಜಕೀಯ ಮೇಲಾಟಕ್ಕೆ ಕಾರಣವಾಗಿದೆ.

ಜೆಎಂಎಂ ನೇತೃತ್ವದ ಸಮ್ಮಿಶ್ರ ಸರ್ಕಾರವು ಗೋವು ಅಕ್ರಮ ಸಾಗಣೆಗೆ ಬೆಂಬಲ ನೀಡುತ್ತಿದೆ ಎಂದು ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಆರೋಪಿಸಿದರೆ, ಇಲ್ಲಸಲ್ಲದ ಆರೋಪ ಮಾಡಿ, ಕರ್ತವ್ಯನಿರತ ಪೊಲೀಸರ ಆತ್ಮವಿಶ್ವಾಸವನ್ನು ಬಿಜೆಪಿ ಕುಗ್ಗಿಸುತ್ತಿದೆ ಎಂದು ಕಾಂಗ್ರೆಸ್ ಹೇಳಿದೆ.

‘ಹೇಮಂತ ಸೊರೇನ್ ಅವರು ಮುಖ್ಯಮಂತ್ರಿ ಆದಾಗಿನಿಂದ ಗೋವುಗಳ ಅಕ್ರಮ ಸಾಗಣೆ ಪ್ರಕರಣಗಳು ಹೆಚ್ಚಾಗಿವೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ತುಪುದಾನಾದಲ್ಲಿ ನಡೆದ ಘಟನೆಯು ರಾಜ್ಯವು ಜಂಗಲ್‌ರಾಜ್ ಕಡೆಗೆ ಸಾಗುತ್ತಿರುವುದರ ಉದಾಹರಣೆಯಾಗಿದೆ’ ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ದೀಪಕ್ ಪ್ರಕಾಶ್ ಆರೋಪಿಸಿದ್ದಾರೆ.

ಅರಾವಳಿ ಬೆಟ್ಟ: ‘ಸುಪ್ರೀಂ’ ನಿಷೇಧ ಹೇರಿದರೂ ನಿಲ್ಲದ ಗಣಿಗಾರಿಕೆ

ನೂಹ್, ಹರಿಯಾಣ (ಪಿಟಿಐ): ‘ಅರಾವಳಿ ಬೆಟ್ಟ ಪ್ರದೇಶದಲ್ಲಿ ಗಣಿಗಾರಿಕೆ ನಡೆಸುವುದನ್ನು ಸುಪ್ರೀಂಕೋರ್ಟ್ ನಿಷೇಧಿಸಿದ್ದರೂ ಈ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದೆ. ಇದಕ್ಕೆ ಕಡಿವಾಣ ಹಾಕುವುದು ಪೊಲೀಸರಿಗೂ ಸವಾಲಾಗಿ ಪರಿಣಮಿಸಿದೆ.

ಈ ಭಾಗದಲ್ಲಿನ ಅಕ್ರಮ ಕಲ್ಲು ಗಣಿಗಾರಿಕೆ ತಡೆಯಲು ಮುಂದಾಗಿದ್ದ ಡಿವೈಎಸ್‌ಪಿ ಸುರೇಂದ್ರ ಸಿಂಗ್ ಅವರನ್ನು ಅಕ್ರಮದಲ್ಲಿ ತೊಡಗಿದ್ದವರು ಟ್ರಕ್ ಹರಿಸಿ ಮಂಗಳವಾರ ಹತ್ಯೆ ಮಾಡಿದ್ದರು.

ಸರ್ಕಾರದ ಅಂಕಿ ಅಂಶಗಳ ಪ್ರಕಾರ 2022–23ನೇ ಸಾಲಿನಲ್ಲಿ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದ 68 ವಾಹನಗಳನ್ನು ಜಪ್ತಿ ಮಾಡಲಾಗಿದೆ. ನೂಹ್ ಜಿಲ್ಲೆಯಲ್ಲೇ 23 ಎಫ್‌ಐಆರ್‌ಗಳು ದಾಖಲಾಗಿವೆ. ಒಟ್ಟು ₹4.28 ಲಕ್ಷ ದಂಡ ಮೊತ್ತವನ್ನೂ ಸಂಗ್ರಹಿಸಲಾಗಿದೆ.



ಸುರೇಂದ್ರ ಸಿಂಗ್

ವಾಹನ ಹಾಯಿಸಿ ಪೊಲೀಸ್ ಹತ್ಯೆ

(ಆನಂದ್ ವರದಿ): ತಪಾಸಣೆ ವೇಳೆ ವಾಹನವನ್ನು ತಡೆದ ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರ ಮೇಲೆ ಟ್ರಕ್ ಹರಿದ ಘಟನೆ ಗುಜರಾತ್‌ನ ಆನಂದ್ ಜಿಲ್ಲೆಯಲ್ಲಿ ಮಂಗಳವಾರ ಮಧ್ಯರಾತ್ರಿ ನಡೆದಿದೆ.

ಬೊರಸದ್ ಪಟ್ಟಣದ ಹೆದ್ದಾರಿ ಬಳಿ ರಾತ್ರಿ 1 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಕರಣ್‌ಸಿಂಹ ರಾಜ್ (40) ಹತ್ಯೆಯಾದವರು.

ರಾಜೀನಾಮೆ: ಉತ್ತರ ಪ್ರದೇಶ ಸಚಿವ ಇಂಗಿತ?

ಲಖನೌ (ಪಿಟಿಐ): ‘ನಾನು ಪರಿಶಿಷ್ಟ ಸಮುದಾಯಕ್ಕೆ ಸೇರಿದ ವ್ಯಕ್ತಿ ಎಂಬ ಕಾರಣಕ್ಕೆ ಇಲಾಖೆಯ ಅಧಿಕಾರಿಗಳು ತಮ್ಮನ್ನು ನಿರ್ಲಕ್ಷಿಸುತ್ತಿದ್ದಾರೆ’ ಎಂದು ಆರೋಪಿಸಿರುವ ಉತ್ತರ ಪ್ರದೇಶದ ಜಲಶಕ್ತಿ ಸಚಿವ ದಿನೇಶ್ ಖಟಿಕ್, ರಾಜೀನಾಮೆ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಈ ಸಂಬಂಧ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬರೆದಿರುವುದು ಎನ್ನಲಾದ ಪತ್ರವೊಂದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಆದರೆ, ಖಟಿಕ್ ಇದನ್ನು ನಿರಾಕರಿಸಿದ್ದು, ರಾಜೀನಾಮೆ ನೀಡಲು ಮುಂದಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಎನ್‌ಕೌಂಟರ್: ಮೂಸೆವಾಲಾ ಹಂತಕರ ಹತ್ಯೆ

ಅಮೃತಸರ/ಚಂಡೀಗಡ (ಪಿಟಿಐ): ಗಾಯಕ ಸಿಧು ಮೂಸೆವಾಲಾ ಹತ್ಯೆಯಲ್ಲಿ ಭಾಗಿಯಾಗಿದ್ದಾರೆಂದು ಶಂಕಿಸಲಾದ ಇಬ್ಬರನ್ನು ಅಮೃತಸರದಲ್ಲಿ ಬುಧವಾರ ನಡೆದ ಎನ್‌ಕೌಂಟರ್‌ನಲ್ಲಿ ಪಂಜಾಬ್ ಪೊಲೀಸರು ಹತ್ಯೆ ಮಾಡಿದ್ದಾರೆ.

ಐದು ಗಂಟೆಗಳಿಗೂ ಹೆಚ್ಚು ಕಾಲ ನಡೆದ ಗುಂಡಿನ ಚಕಮಕಿಯಲ್ಲಿ ಶಂಕಿತ ಹಂತಕರಾದ ಜಗ್ರೂಪ್ ಸಿಂಗ್ ರೂಪ ಮತ್ತು ಮನ್‌ಪ್ರೀತ್ ಸಿಂಗ್ ಅಲಿಯಾಸ್ ಮನ್ನು ಕುಸಾ ಮೃತಪಟ್ಟಿದ್ದಾರೆ. ಅವರಿಂದ ಎಕೆ-47, ಪಿಸ್ತೂಲ್ ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡಿರುವ ಒಂದು ಚೀಲವನ್ನು ವಿಧಿವಿಜ್ಞಾನ ತಂಡ ಪರಿಶೀಲಿಸುತ್ತಿದೆ’ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಮೋದ್ ಬಾನ್ ತಿಳಿಸಿದರು.

ಅಮೃತಸರದ ಭಾರತ-ಪಾಕಿಸ್ತಾನ ಗಡಿಯ ಸಮೀಪದಲ್ಲಿರುವ ಭಕ್ನಾ ಗ್ರಾಮದ ಕಟ್ಟಡದಲ್ಲಿ ಇಬ್ಬರು ಅಡಗಿಕೊಂಡಿದ್ದರು. ಘಟನೆಯಲ್ಲಿ ಮೂವರು ಪೊಲೀಸರು ಗಾಯಗೊಂಡಿದ್ದಾರೆ.

ಜಿಎಸ್‌ಟಿ ಚರ್ಚೆಗೆ ಆಗ್ರಹಿಸಿ ಪ್ರತಿಪಕ್ಷ ಧರಣಿ; ಚರ್ಚೆಯಿಂದ ಪಲಾಯನ ಆರೋಪ ಅಲ್ಲಗಳೆದ ಸರ್ಕಾರ

ವಾಕ್ಸಮರ; ನಡೆಯದ ಸಂಸತ್ ಕಲಾಪ

ನವದೆಹಲಿ: ಬೆಲೆ ಏರಿಕೆ ಹಾಗೂ ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಹೇರಿಕೆ ಖಂಡಿಸಿ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಪಕ್ಷಗಳು ಧರಣಿ ಮುಂದುವರಿಸಿದ್ದರಿಂದ, ಸಂಸತ್ತಿನ ಉಭಯ ಸದನಗಳ ಕಲಾಪ ಮೂರನೇ ದಿನವಾದ ಬುಧವಾರವೂ ನಡೆಯಲಿಲ್ಲ.

ಕೇಂದ್ರ ಸಚಿವರಾದ ಪೀಯೂಷ್ ಗೋಯಲ್, ಪ್ರಲ್ಹಾದ ಜೋಷಿ ಹಾಗೂ ಸ್ಮೃತಿ ಇರಾನಿ ಅವರು ಕಲಾಪಕ್ಕೆ ಅಡ್ಡಿಪಡಿಸುತ್ತಿರುವ ಪ್ರತಿಪಕ್ಷಗಳ ವಿರುದ್ಧ ಲೋಕಸಭೆ ಹಾಗೂ ರಾಜ್ಯಸಭೆಗಳಲ್ಲಿ ವಾಗ್ದಾಳಿ ನಡೆಸಿದರು.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೋವಿಡ್‌ನಿಂದ ಗುಣಮುಖರಾದ ಬಳಿಕ ಬೆಲೆ ಏರಿಕೆ ಕುರಿತ ಚರ್ಚೆಗೆ ಸರ್ಕಾರ ಸಿದ್ಧವಿದೆ ಎಂದು ಗೋಯಲ್ ಹಾಗೂ ಜೋಷಿ ಸ್ಪಷ್ಟನೆ ನೀಡಿದರು.

ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳ ಸಚಿವರು ತೆರಿಗೆ ಹಾಕಲು ಒಪ್ಪಿಗೆ ನೀಡಿದ್ದರು ಎಂದು ಗೋಯಲ್ ಹೇಳಿದರು.

ಸಚಿವೆ ಸ್ಮೃತಿ ಇರಾನಿ ಅವರ ಕೋಪ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಕಡೆಗೆ ತಿರುಗಿತು. ‘ರಾಹುಲ್ ಗಾಂಧಿ ಅವರು ರಾಜಕೀಯವಾಗಿ ಅಪ್ರಯೋಜಕ ಆಗಿರಬಹುದು. ಆದರೆ ಅವರು ಸಂಸದೀಯ ಕಲಾಪಗಳ ಉತ್ಪಾದಕತೆಗೆ ಅಡ್ಡಿಯಾಗಬಾರದು’ ಎಂದು ಟೀಕಿಸಿದರು. ರಾಹುಲ್ ತಮ್ಮ ಹಟಮಾರಿ ಧೋರಣೆಯಿಂದ ಕಲಾಪಗಳನ್ನು ತಡೆಯುತ್ತಿದ್ದು, ಯಾವ ಚರ್ಚೆಯೂ ನಡೆಯದೆ ಕಲಾಪ ವ್ಯರ್ಥವಾಗುತ್ತಿದೆ ಎಂದು ಅವರು ಆರೋಪಿಸಿದರು.

ಆಹಾರ ಪದಾರ್ಥಗಳ ಮೇಲೆ ತೆರಿಗೆ ವಿಧಿಸಿರುವ ಕುರಿತು ಚರ್ಚೆ ನಡೆಸಲು ಪ್ರತಿಪಕ್ಷಗಳು ಇಟ್ಟಿರುವ ಬೇಡಿಕೆಗೆ ಅವಕಾಶ ನೀಡದಿರುವ ಸರ್ಕಾರದ ಹಟಮಾರಿ ಧೋರಣೆಯಿಂದ ಕಲಾಪಗಳು ನಡೆಯುತ್ತಿಲ್ಲ ಎಂದು ಆರೋಪಿಸಿದ ಕಾಂಗ್ರೆಸ್, ಸರ್ಕಾರವನ್ನು ‘ಅಸಂಸದೀಯ’ ಎಂದು ಕರೆಯಿತು.

ಚರ್ಚೆಯಿಂದ ಸರ್ಕಾರ ಪಲಾಯನ ಮಾಡುತ್ತಿದೆ ಎಂಬ ಪ್ರತಿಪಕ್ಷಗಳ ಆರೋಪವನ್ನು ಸಚಿವ ಗೋಯಲ್ ಅಲ್ಲಗಳೆದರು. ‘ಪ್ರಜಾಪ್ರಭುತ್ವದ ಬಗ್ಗೆ ಕಾಂಗ್ರೆಸ್ ವಿನಾಶಕಾರಿ ವರ್ತನೆ ತೋರುತ್ತಿದೆ. ಕಲಾಪ ತಡೆಯುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ ಎಂಬುದಾಗಿ ಪಕ್ಷದ ಮುಖಂಡ ಜೈರಾಮ್ ರಮೇಶ್ ಅವರು ಮಾಡಿರುವ ಟ್ವೀಟ್‌ನಿಂದ ಇದು ಸಾಬೀತಾಗಿದೆ’ ಎಂದು ಹೇಳಿದರು.

ರಾಹುಲ್‌ಗೆ ಸ್ಮೃತಿ ತರಾಟೆ

‘ಸಂಸದೀಯ ಪ್ರಕ್ರಿಯೆ ಹಾಗೂ ಸಂಪ್ರದಾಯಗಳಿಗೆ ನಿರಂತರವಾಗಿ ಅಗೌರವ ತೋರುವ ವರ್ತನೆಯು ರಾಹುಲ್ ಗಾಂಧಿ ಅವರ ರಾಜಕೀಯ ಜೀವನಕ್ಕೆ ಕಪ್ಪು ಚುಕ್ಕೆಯಾಗಿದೆ’ ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಆರೋಪಿಸಿದರು.

‘2004ರಿಂದ 2019ರವರೆಗೆ ಅಮೇಠಿ ಕ್ಷೇತ್ರದ ಸಂಸದರಾಗಿದ್ದ ರಾಹುಲ್, ಕ್ಷೇತ್ರದ ಜನರ ಪರವಾಗಿ ಸಂಸತ್ತಿನಲ್ಲಿ ಒಂದೂ ಪ್ರಶ್ನೆ ಕೇಳಿಲ್ಲ. ಯಾವುದೇ ಖಾಸಗಿ ಮಸೂದೆಯನ್ನೂ ಮಂಡಿಸಿಲ್ಲ. ವಯನಾಡ್ ಸಂಸದರಾದ ಬಳಿಕ, 2019ರ ಚಳಿಗಾಲದ ಅಧಿವೇಶನದಲ್ಲಿ ಶೇ 40ಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದರು’ ಎಂದು ಸ್ಮೃತಿ ದೂರಿದರು. ಪದೇ ಪದೇ ವಿದೇಶ ಪ್ರವಾಸಕ್ಕೆ ತೆರಳುವ ರಾಹುಲ್ ನಡೆಯಿಂದ ಅವರ ಪಕ್ಷಕ್ಕೆ ಚಿಂತೆಯಾಗಿದೆ ಎಂದೂ ಹೇಳಿದರು.


2019ರಲ್ಲಿ ಅಮೇಠಿ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಸ್ಮೃತಿ ಇರಾನಿ ಹಾಗೂ ರಾಹುಲ್ ಗಾಂಧಿ ಅವರು ಪರಸ್ಪರ ಎದುರಾಳಿಯಾಗಿದ್ದರು. ರಾಹುಲ್ ಅವರನ್ನು ಸ್ಮೃತಿ ಸೋಲಿಸಿದ್ದರು.

ರಚನಾತ್ಮಕ ಚರ್ಚೆಯಲ್ಲಿ ಆಸಕ್ತಿಯಿಲ್ಲದ ಕಾಂಗ್ರೆಸ್, ಸಂಸದೀಯ ಕಾರ್ಯಕಲಾಪಗಳನ್ನು ನಾಶ ಮಾಡುತ್ತಿದೆ. ಚರ್ಚೆಯ ನಿಯಮಾವಳಿಗಳನ್ನು ಪ್ರತಿಪಕ್ಷಗಳು ಅನುಸರಿಸಬೇಕು

ಪ್ರಲ್ಹಾದ ಜೋಷಿ, ಕೇಂದ್ರ ಸಚಿವ

ಚರ್ಚೆಯಿಂದ ಸರ್ಕಾರ ಪಲಾಯನ ಮಾಡುತ್ತಿದೆ. ಎಲ್ಲ ವಿಷಯಗಳನ್ನು ಬದಿಗೊತ್ತಿ ನಿಯಮ 267ರ ಅಡಿ ಚರ್ಚೆ ನಡೆಸಲು ಸರ್ಕಾರ ಅವಕಾಶ ನೀಡುತ್ತಿಲ್ಲ

ಮಲ್ಲಿಕಾರ್ಜುನ ಖರ್ಗೆ, ಪ್ರತಿಪಕ್ಷ ನಾಯಕ



ಐಬಿಪಿಎಸ್ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಇಂದು (ಜು.21) ಕೊನೆಯ ದಿನ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು ಹೀಗಿವೆ.

ಆನ್‌ಲೈನ್ ಅರ್ಜಿ ಸಲ್ಲಿಕೆ ಹೇಗೆ?

ಆರ್.ಕೆ. ಬಾಲಚಂದ್ರ

ಐಬಿಪಿಎಸ್ ಬ್ಯಾಂಕ್ ಪರೀಕ್ಷೆ

ಬ್ಯಾಂಕ್ ನೇಮಕಾತಿ ಸಿಬ್ಬಂದಿ ಸಂಸ್ಥೆ (ಐಬಿಪಿಎಸ್) ವಿವಿಧ ಬ್ಯಾಂಕ್‌ಗಳಲ್ಲಿನ ಕ್ಲರ್ಕ್ ಹುದ್ದೆಗಳ ಭರ್ತಿಗಾಗಿ ಪ್ರಸಕ್ತ ಸಾಲಿನಲ್ಲಿ ನಡೆಸುತ್ತಿರುವ ಬ್ಯಾಂಕ್ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಇಂದು (ಜು.21) ಕೊನೆಯ ದಿನ. ಈ ಪರೀಕ್ಷೆಗೆ ಆನ್‌ಲೈನ್ ಮೂಲಕವೇ ಅರ್ಜಿ ಸಲ್ಲಿಸಬೇಕು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಇಲ್ಲಿ ವಿವರಿಸಲಾಗಿದೆ.

- ಅರ್ಜಿ ಸಲ್ಲಿಸಲು ಅರ್ಹತೆ ಇದೆಯಾ ಎಂಬುದನ್ನು ಮೊದಲು ಪರೀಕ್ಷಿಸಿಕೊಳ್ಳಿ. ಮುಖ್ಯವಾಗಿ ವಯೋಮಿತಿ, ವಿದ್ಯಾರ್ಹತೆಯನ್ನು ಗಮನಿಸಿಕೊಳ್ಳಿ.
- ಪರೀಕ್ಷಾ ಅಧಿಸೂಚನೆಯ ಅನುಬಂಧ-II (Annexure-II) ರಲ್ಲಿರುವಂತೆ ನಿಮ್ಮ ಭಾವಚಿತ್ರ, ಹೆಬ್ಬೆಟ್ಟಿನ ಗುರುತು ದೃಢೀಕರಣ ಪತ್ರ ಹಾಗೂ ಸಹಿಯನ್ನು ಮೊದಲೇ ಸ್ಕ್ಯಾನ್ ಮಾಡಿ 'ಜೆಪಿಜಿ'(ಉದಾ: pic.jpg) ಫಾರ್ಮೆಟ್‌ನಲ್ಲಿ ಸೇವ್ ಮಾಡಿಟ್ಟುಕೊಳ್ಳಿ. ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆ ಹೊಂದಿರುವುದು ಕಡ್ಡಾಯ. ಆದ್ದರಿಂದ ಇ-ಮೇಲ್ ಅಕೌಂಟ್ ಇಲ್ಲದಿದ್ದಲ್ಲಿ ಅರ್ಜಿ ಸಲ್ಲಿಸುವ ಮುನ್ನ ಹೊಸದಾಗಿ ಇಮೇಲ್ ಖಾತೆ ತೆರೆದುಕೊಳ್ಳಿ.
- ಅರ್ಜಿಯಲ್ಲಿ ನಮೂದಿಸಿದ ಇ-ಮೇಲ್ ಐ.ಡಿ.ಯನ್ನು ಪರೀಕ್ಷಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಿ. ಏಕೆಂದರೆ, ಐಬಿಪಿಎಸ್ ಸಂಸ್ಥೆ ಸಂದರ್ಶನ ಪತ್ರ / ಪರೀಕ್ಷಾ ಸೂಚನಾ ಪತ್ರ ಹಾಗೂ ಇತರೆ ಮಾಹಿತಿಗಳನ್ನು ವಿಶೇಷ ಸಂದರ್ಭಗಳಲ್ಲಿ ಇ-ಮೇಲ್ ಐ.ಡಿ.ಗೆ ಕಳುಹಿಸುತ್ತದೆ. ಆಗಾಗ ಮೇಲ್ ಚೆಕ್ ಮಾಡಲು ಮರೆಯಬೇಡಿ, ನಿಮ್ಮ ಇ-ಮೇಲ್ ಐ.ಡಿ.ಯನ್ನು ಇತರರೊಂದಿಗೆ ಹಂಚಿಕೊಳ್ಳಬೇಡಿ ಹಾಗೂ ಆನ್‌ಲೈನ್‌ನಲ್ಲಿ ಅಣಕು ಪರೀಕ್ಷೆಗೂ ಬಳಸಬೇಡಿ.
- ಆನ್‌ಲೈನ್ ಅಪ್ಲಿಕೇಷನ್ ಸಲ್ಲಿಸುವಾಗ ಅರ್ಜಿ ನಮೂನೆಯಲ್ಲಿ 'save and next' ಆಪ್ಷನ್ ಅನ್ನೇ ಬಳಸಿ. ಕೊನೆಯಲ್ಲಿ 'final submit' ಬಟನ್ ಒತ್ತುವ ಮೊದಲು ಏನಾದರೂ ಮಾಹಿತಿ ಬದಲಿಸಬೇಕಾದರೆ 'preview' ನಲ್ಲಿ ಒಮ್ಮೆ ನೋಡಿ. ಆಮೇಲೆ ಬೇಕಾದರೆ ಬದಲಿಸಲು ಅವಕಾಶವಿದೆ. ಆದರೆ ನೆನಪಿಡಿ ಯಾವುದೇ ಕಾರಣಕ್ಕೂ ಅಭ್ಯರ್ಥಿಯ ಹೆಸರು, ಹುಟ್ಟಿದ ದಿನಾಂಕ, ಮೊಬೈಲ್ ನಂಬರ್, ಇ-ಮೇಲ್ ಐ.ಡಿ. ಯಂತಹ ಮೂಲ ಮಾಹಿತಿಯನ್ನು ಒಮ್ಮೆ ನಮೂದಿಸಿದಾ ನಂತರ ಬದಲಾಯಿಸಲು ಸಾಧ್ಯವಾಗುವುದಿಲ್ಲ.
- ನಿಮ್ಮ ಐ.ಡಿ. ಪ್ರೂಫ್‌ನಲ್ಲಿ(ಗುರುತಿನ ಚೀಟಿ) ಹಾಗೂ ಇತರೆ ದಾಖಲೆಗಳಲ್ಲಿ ಇರುವಂತೆಯೇ ನಿಮ್ಮ ಮೊದಲ, ಮಧ್ಯ ಹಾಗೂ ಕೊನೆಯ ಹೆಸರನ್ನು ಅರ್ಜಿ ಸಲ್ಲಿಸುವಾಗ ಸರಿಯಾಗಿ ಭರ್ತಿ ಮಾಡಿ. ಅರ್ಜಿಯಲ್ಲಿನ ಹೆಸರು ದಾಖಲೆಗೆ ಹೊಂದಿಕೆಯಾಗದಿದ್ದರೆ ಅಭ್ಯರ್ಥಿಯನ್ನು ಅನರ್ಹಗೊಳಿಸಲಾಗುತ್ತದೆ.
- ಅರ್ಜಿ ಸಲ್ಲಿಸುವಾಗ ಒಂದೇ ಬಾರಿಗೆ ಎಲ್ಲ ಮಾಹಿತಿಯನ್ನು ತುಂಬಬೇಕೆಂಬ ನಿಯಮವಿಲ್ಲ. ಡೇಟಾ ಸೇವ್ ಮಾಡಿ ಎಲ್ಲ ಮಾಹಿತಿಯನ್ನು ತುಂಬಿದ ನಂತರವೇ 'final submit' ಬಟನ್ ಒತ್ತಿ. ಹೀಗೆ ಮಾಡುವಾಗ ನೋಂದಾಯಿತ ಇಮೇಲ್‌ಗೆ ಬಂದ ನಿಮ್ಮ ನೋಂದಣಿ ಸಂಖ್ಯೆ ಹಾಗೂ ಪಾಸ್‌ವರ್ಡ್ ಅನ್ನು ಬರೆದಿಟ್ಟುಕೊಳ್ಳಲು ಮರೆಯಬೇಡಿ.
- ಆನ್‌ಲೈನ್ ಅಪ್ಲಿಕೇಷನ್‌ನಲ್ಲಿ ನಾಲ್ಕು ವಿಭಾಗಗಳಿರುತ್ತವೆ. ಮೊದಲನೆಯದ್ದು, ಬೇಸಿಕ್ ಇನ್‌ಫರ್ಮೇಷನ್, ಎರಡನೆಯದ್ದು ಭಾವಚಿತ್ರ ಹಾಗೂ ಸಹಿ, ಮೂರನೆಯದರಲ್ಲಿ ಮೂರು ವಿಭಾಗಗಳಿದ್ದು, ಮೊದಲ ವಿಭಾಗದಲ್ಲಿ Category/Date of Birth/Address, ಎರಡನೇ ವಿಭಾಗದಲ್ಲಿ ವಿದ್ಯಾರ್ಹತೆ/ ಅನುಭವ, ಮೂರನೇ ವಿಭಾಗದಲ್ಲಿ ನೀವು ಆರಿಸಿಕೊಳ್ಳುವ ಬ್ಯಾಂಕ್ ಅನ್ನು ಕ್ರಮವಾಗಿ ಗುರುತಿಸುವುದು ಕಡ್ಡಾಯ. ನಿಮಗೆ ಇಷ್ಟವಾದ ಬ್ಯಾಂಕ್ ಅನ್ನು ಮೊದಲು ಗುರುತಿಸಿ. ಏಕೆಂದರೆ ಮುಂದೆ ನೇಮಕಾತಿ ಸಂದರ್ಭದಲ್ಲಿ ನೀವು ಗುರುತಿಸಿದ ಬ್ಯಾಂಕುಗಳಿಗೆ ಮೊದಲ ಆದ್ಯತೆ ನೀಡುತ್ತಾರೆ. ನಾಲ್ಕನೆಯದಾಗಿ ಪ್ರಿವ್ಯೂ ಮತ್ತು ಐದನೆಯದಾಗಿ ನಿಮ್ಮ ಹೆಬ್ಬೆಟ್ಟಿನ ಗುರುತು ಹಾಗೂ ಧೃಢೀಕರಣ ಪತ್ರವನ್ನು ಅಪ್ ಲೋಡ್ ಮಾಡಬೇಕು. ಎಲ್ಲವೂ ಸರಿಯಾಗಿದ್ದರೆ final submit ಬಟನ್ ಒತ್ತಿ. ನಂತರ payment ಡೀಟೇಲ್ಸ್ ನ ಇನ್ನೊಂದು ಅಡಿಷನಲ್ ಪೇಜ್ ಡಿಸ್‌ಪ್ಲೇ ಆಗುತ್ತದೆ.

ಆನ್‌ಲೈನ್‌ನಲ್ಲಿ ಶುಲ್ಕ ಭರಿಸಲು ಕ್ರೆಡಿಟ್ / ಡೆಬಿಟ್ ಕಾರ್ಡ್ ಹಾಗೂ ಪಾಸ್‌ವರ್ಡ್ ಮಾಹಿತಿಯನ್ನು ಮೊದಲೇ ಸಿದ್ಧವಾಗಿಟ್ಟುಕೊಳ್ಳಿ. ಕಾರ್ಡ್ ಮೂಲಕ ಅರ್ಜಿ ಶುಲ್ಕ ಪಾವತಿಸಿ.

- ಆನ್‌ಲೈನ್ ಪೇಮೆಂಟ್ ಮಾಡುವಾಗ ಪೇಮೆಂಟ್ ಇನ್‌ಫರ್ಮೇಷನ್ ತುಂಬಿದ ನಂತರ ಸರ್ವರ್‌ನಿಂದ ಮಾಹಿತಿ ಬರುವವರೆಗೆ ಕಾಯಿರಿ. ಈ ಸಂದರ್ಭದಲ್ಲಿ back ಅಥವಾ refresh ಬಟನ್ ಬಳಸಬೇಡಿ, ಒಂದು ವೇಳೆ ಎರಡರಲ್ಲಿ ಯಾವುದೇ ಬಟನ್ ಬಳಸಿದರೆ ಗೊಂದಲವಾಗಿ ಎರಡು ಸಲ ಶುಲ್ಕ ಪಾವತಿಯಾಗಬಹುದು.
- **ಗಮನಿಸಿ:** ಅರ್ಜಿಯ ಕೊನೆಯಲ್ಲಿ ಕೈಬರಹದ ಘೋಷಣೆಯ ಪತ್ಯ ಹೀಗಿರುತ್ತದೆ- 'ನಾನು, _______ (ಅಭ್ಯರ್ಥಿಯ ಹೆಸರು), ಈ ಮೂಲಕ ನಾನು ಅರ್ಜಿಯಲ್ಲಿ ಸಲ್ಲಿಸಿದ ಎಲ್ಲಾ ಮಾಹಿತಿಯು ಸರಿಯಾಗಿದೆ, ನಿಜ ಮತ್ತು ಮಾನ್ಯವಾಗಿದೆ ಎಂದು ಘೋಷಿಸುತ್ತೇನೆ. ಅಗತ್ಯವಿದ್ದಾಗ ನಾನು ಪೂರಕ ದಾಖಲೆಗಳನ್ನು ಪ್ರಸ್ತುತಪಡಿಸುತ್ತೇನೆ'.

ನೆನಪಿಡಿ: ಮೇಲೆ ತಿಳಿಸಿದ ಕೈ ಬರಹದ ಘೋಷಣೆ ಅಭ್ಯರ್ಥಿಯ ಕೈ ಬರಹದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಮಾತ್ರ ಇರಬೇಕು ಮತ್ತು ಕ್ಯಾಪಿಟಲ್ ಲೆಟರ್ಸ್‌ನಲ್ಲಿ ಇರಬಾರದು. ಇದನ್ನು ಬೇರೆಯವರು ಅಥವಾ ಬೇರೆ ಯಾವುದೇ ಭಾಷೆಯಲ್ಲಿ ಬರೆದಿದ್ದರೆ, ಅರ್ಜಿ ಅಮಾನ್ಯವಾಗುತ್ತದೆ.

- ಕ್ಯಾಪಿಟಲ್ ಲೆಟರ್‌ಗಳಲ್ಲಿ ಹಾಕಿದ ಸಹಿ ಸ್ವೀಕರಿಸಲಾಗುವುದಿಲ್ಲ.
- ಎಡ ಹೆಬ್ಬೆರಳಿನ ಗುರುತು ಸರಿಯಾಗಿ ಸ್ಕ್ಯಾನ್ ಮಾಡಬೇಕು ಮತ್ತು ಮಸುಕಾಗಿರಬಾರದು.

(ಸರಣಿ ಮುಗಿಯಿತು)

(ಲೇಖಕರು: ಬ್ಯಾಂಕಿಂಗ್ ಪರೀಕ್ಷೆ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು. ಮಡಿಕೇರಿ)

ಕನಸು, ಗುರಿ ದೊಡ್ಡದಾಗಿರಲಿ ಕಠಿಣ ಪ್ರಯತ್ನವೂ ಜೊತೆಗಿರಲಿ

ಮೈಲಾರಿ ಲಿಂಗಪ್ಪ



ಎಂ.ಅರುಣಾ

ಯುಪಿಎಸ್‌ಸಿ ಟಾಪರ್ಸ್ ಟಿಪ್ಸ್

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ತಡಕಲೂರು ಗ್ರಾಮದ ರೈತ ಕುಟುಂಬದ ಎಂ.ಅರುಣಾ ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ 308ನೇ ರ್‍ಯಾಂಕ್ ಪಡೆದಿದ್ದಾರೆ. ಸತತ ಆರು ಪ್ರಯತ್ನಗಳ ನಂತರ ನಾಗರಿಕ ಸೇವಾ ಆಯೋಗ ಸೇರುವ ಕನಸನ್ನು ನನಸಾಗಿಸಿಕೊಂಡಿದ್ದಾರೆ. ಈ ಪರೀಕ್ಷೆಗಾಗಿ ನಡೆಸಿದ ಅಧ್ಯಯನ, ಸಿದ್ಧತೆ ಕುರಿತು 'ಸ್ಪರ್ಧಾವಾಣಿ'ಯೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ.

ಸಂದರ್ಶನದ ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

https://bit.ly/30lNirq

- **ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸುಗಳಿಸಿದ್ದೀರಿ. ನಿಮ್ಮ ಮುಂದಿನ ಹೆಜ್ಜೆ?**

ನಮ್ಮ ತಂದೆ ರೈತರು. ಕೃಷಿಗಾಗಿ ಮಾಡಿದ ಸಾಲ ತೀರಿಸಲು ಆಗದೆ ಆತ್ಮಹತ್ಯೆ ಮಾಡಿಕೊಂಡರು. ರೈತರ ಆತ್ಮಹತ್ಯೆ ತಡೆಯಬೇಕು ಎನ್ನುವ ಗುರಿಯಿದೆ. ಅದೇ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತೇನೆ. ನಮ್ಮೂರಿನ ಜನರಿಗೆ ಸಹಾಯ ಮಾಡಲು ಆಗುವುದಿಲ್ಲ ಎಂದು ಎಂಜಿನಿಯರಿಂಗ್ ಉದ್ಯೋಗ ಬಿಟ್ಟು, ಯುಪಿಎಸ್‌ಸಿಗೆ ಅಧ್ಯಯನ ಮಾಡುತ್ತಿದ್ದೆ. ಈಗ ಜನ ಸೇವೆಯ ಅವಕಾಶ ದೊರೆತಿದೆ. ಇದನ್ನು ಸರಿಯಾದ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುತ್ತೇನೆ.

- **ಯುಪಿಎಸ್‌ಸಿ ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳನ್ನು ಎಷ್ಟನೇ ಪ್ರಯತ್ನದಲ್ಲಿ ಪೂರ್ಣಗೊಳಿಸಿದ್ದೀರಿ?**

ಸತತ 6 ಬಾರಿ ಪರೀಕ್ಷೆ ಬರೆದಿದ್ದೇನೆ. ನಾಲ್ಕು ಬಾರಿ ಸಂದರ್ಶನಕ್ಕೆ ಹಾಜರಾಗಿದ್ದೆ. ಕೊನೆಯ ಪ್ರಯತ್ನದಲ್ಲಿ ಗುರಿ ಮುಟ್ಟಲು ಸಾಧ್ಯವಾಯಿತು. ಈ ಬಾರಿ ಕೋವಿಡ್ ಮಧ್ಯೆ ಪರೀಕ್ಷಾ ಕೇಂದ್ರಕ್ಕೆ ತೆರಳಿ, ಪ್ರತ್ಯೇಕ ಕೊಠಡಿಯಲ್ಲಿ ಕೂತು ಪರೀಕ್ಷೆ ಬರೆದಿದ್ದೇನೆ. ಇನ್ನು ಯುಪಿಎಸ್‌ಸಿ ಉತ್ತೀರ್ಣರಾಗುವುದು ಕನಸಾಗಿ ಉಳಿಯುತ್ತದೆ ಅಂದುಕೊಂಡಿದ್ದೆ. ಸತತ ಪ್ರಯತ್ನ ನನ್ನ ಕೈ ಬಿಡಲಿಲ್ಲ.

- **ಹಿಂದಿನ ಪ್ರಯತ್ನಗಳು ಫಲಿಸದಿರಲು ಕಾರಣವೇನು? ಆ ನ್ಯೂನತೆಗಳನ್ನು ಈ ಪ್ರಯತ್ನದಲ್ಲಿ ಹೇಗೆ ಸರಿಪಡಿಸಿಕೊಂಡಿರಿ?**

ಆರೋಗ್ಯ ಸಮಸ್ಯೆಯಿಂದ ಪರೀಕ್ಷೆಯ ಚೆನ್ನಾಗಿ ಬರೆಯಲು ಆಗಿಲ್ಲ. ಉಳಿದಂತೆ ಅಭ್ಯಾಸ ಮಾಡಿಕೊಳ್ಳುವಲ್ಲಿ ಪ್ರತಿ ಸಾರಿ ಎಡವುತ್ತಿದ್ದೆ. ಸಂಪೂರ್ಣವಾಗಿ ಅಭ್ಯಾಸದಲ್ಲಿ ತೊಡಗಿಸಿಕೊಳ್ಳಲು ಆಗುತ್ತಿರಲಿಲ್ಲ. ಈ ಬಾರಿ ಪ್ರತಿ ದಿನ ಅಣಕು ಪರೀಕ್ಷೆ ಬರೆಯುತ್ತಿದ್ದೆ. ವಿಷಯಗಳನ್ನು ಮತ್ತಷ್ಟು ಆಳವಾಗಿ ಓದಲು ಶುರು ಮಾಡಿದೆ. ಇದು ನೆರವಾಯಿತು.

- **ನೀವು ಬಳಸುತ್ತಿದ್ದ ಅಧ್ಯಯನ ಪರಿಕರಗಳ ಬಗ್ಗೆ ತಿಳಿಸಿ.**

6 ರಿಂದ 12ನೇ ತರಗತಿಯವರೆಗಿನ ಎಲ್ಲ ಪಠ್ಯಪುಸ್ತಕಗಳನ್ನು ಓದುತ್ತಿದ್ದೆ. ಈ ಪಠ್ಯಗಳಿಂದ ಭೂಗೋಳಶಾಸ್ತ್ರ, ಇತಿಹಾಸ ಸೇರಿದಂತೆ ಹಲವು ವಿಷಯಗಳು ತಿಳಿಯಿತು. ಒಂದು ವಿಷಯಕ್ಕೆ ಒಂದೇ ಪುಸ್ತಕ ಓದಿದರೆ ಉತ್ತಮ. ಹಲವು ಪುಸ್ತಕಗಳನ್ನು ಓದಿದರೆ ಗೊಂದಲ ಹೆಚ್ಚಾಗುತ್ತದೆ. ಪ್ರಸ್ತುತ ವಿದ್ಯಮಾನಗಳ ಬಗ್ಗೆ ತಿಳಿದುಕೊಳ್ಳಲು ದಿನಪತ್ರಿಕೆಗಳು ಸಹಾಯಕವಾದವು. ಸಂದರ್ಶನಕ್ಕೆ ತಯಾರಿ ನಡೆಸುವ ಸಮಯದಲ್ಲಿ ಪತ್ರಿಕೆಗಳನ್ನು ಹೆಚ್ಚಾಗಿ ಓದಿದೆ.

- **ಈ ಸ್ಪರ್ಧಾತ್ಮಕ ಪರೀಕ್ಷೆಗೆ ಹೆಚ್ಚುವರಿ ಕೋಚಿಂಗ್ ಅಗತ್ಯವಿದೆಯೇ ? ನೀವು ಕೋಚಿಂಗ್‌ಗೆ ಹೋಗಿದ್ದಿರಾ? ಯಾವ ರೀತಿ ಕೋಚಿಂಗ್ ನೆರವಾಗುತ್ತದೆ?**

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಎದುರಾಗುವ ಎಲ್ಲ ವಿಷಯಗಳ ಬಗ್ಗೆ ಯಾರೂ ಚೆನ್ನಾಗಿ ತಿಳಿದುಕೊಂಡಿರುವುದಿಲ್ಲ. ಕೆಲವರಿಗೆ ಸಂವಿಧಾನ, ಅರ್ಥಶಾಸ್ತ್ರ ಕಷ್ಟವಾಗುತ್ತದೆ. ಅವರು ತಮಗೆ ಕಷ್ಟವಾಗುವ ವಿಷಯಗಳಿಗೆ ಸಂಬಂಧಿಸಿದಂತೆ ಕೋಚಿಂಗ್ ಸೆಂಟರ್‌ಗಳ ಸಹಾಯ ಪಡೆಯಬಹುದು. ಅಲ್ಲಿನ ಮಾರ್ಗದರ್ಶನ ಅವರಿಗೆ ನೆರವಾಗುತ್ತದೆ.

- **ಎಷ್ಟು ಸಮಯದಿಂದ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೀರಿ? ಸಿದ್ಧತೆಗೆ ಸಮಯ ಹೊಂದಾಣಿಕೆ ಹೇಗೆ ಮಾಡಿಕೊಂಡಿರಿ?**

2014ರಿಂದ ಪರೀಕ್ಷೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೆ. 2018ರಲ್ಲಿ ಕೋಚಿಂಗ್ ಸೆಂಟರ್‌ನಲ್ಲಿ ಮೆಂಟರ್ ಆಗಿ ಕೆಲಸಕ್ಕೆ ಸೇರಿಕೊಂಡಾಗ ಅಧ್ಯಯನ ಮಾಡಲು ಇಂತಿಷ್ಟು ಸಮಯ ಎಂದು ಮೀಸಲಿಡುತ್ತಿದ್ದೆ. ಕೆಲಸ ಮುಗಿದ ನಂತರ ಕನಿಷ್ಠ 6 ಗಂಟೆ ಓದುತ್ತಿದ್ದೆ. ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುವವರು ಪ್ರತಿನಿತ್ಯ ಓದಬೇಕು. ಪರೀಕ್ಷೆಯ ಹತ್ತಿರದಲ್ಲಿ ಕನಿಷ್ಠ 9ರಿಂದ 10 ಗಂಟೆಗಳ ಕಾಲ ಅಧ್ಯಯನಕ್ಕೆ ಸಮಯ ಮೀಸಲಿಡಬೇಕು.

- **ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವವರಿಗೆ ನಿಮ್ಮ ಸಲಹೆ?**


ಯಾವುದೇ ಕಾರಣಕ್ಕೂ ನಂಬಿಕೆ ಕಳೆದುಕೊಳ್ಳಬಾರದು. ದೊಡ್ಡ ಮಟ್ಟದ ಕನಸು ಇಟ್ಟುಕೊಂಡು ಮುಂದೆ ಸಾಗಿದರೆ, ಉಳಿದ ಎಲ್ಲ ಕಷ್ಟ, ಸೋಲು ತುಂಬಾ ಚಿಕ್ಕವು ಅನ್ನಿಸುತ್ತವೆ. ಕನಸು ಸಾಕಾರ ಮಾಡಿಕೊಳ್ಳುವ ನಿಟ್ಟಿನಲ್ಲಿ ಮುನ್ನಡೆದರೆ ಯಾವುದೂ ಅಸಾಧ್ಯವಲ್ಲ. ಕೌಟುಂಬಿಕವಾಗಿ, ಭಾವನಾತ್ಮಕವಾಗಿ, ಆರ್ಥಿಕವಾಗಿ ಸದೃಢರಾಗಿರಬೇಕು. ಕಷ್ಟಗಳಿಗೆ ಹಿಂಜರಿಯಬಾರದು.

ಪ್ರಜಾವಾಣಿ ಉದ್ಯೋಗ ವಾರ್ತೆ

ನಬಾರ್ಡ್: 170 ಅಸಿಸ್ಟೆಂಟ್ ಮ್ಯಾನೇಜರ್ ಹುದ್ದೆಗಳ ನೇಮಕಾತಿಗೆ ಅರ್ಜಿ

- **ಹುದ್ದೆಗಳ ವಿವರ:** 170 ಹುದ್ದೆಗಳು
- **ವಿದ್ಯಾರ್ಹತೆ:** ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದಿರಬೇಕು. ಹೆಚ್ಚಿನ ಮಾಹಿತಿಗೆ ನೇಮಕಾತಿಯ ಅಧಿಸೂಚನೆ ನೋಡಬಹುದು.
- **ವಯಸ್ಸು:** 2022ಕ್ಕೆ ಅನ್ವಯವಾಗುವಂತೆ 21ರಿಂದ 35 ವರ್ಷದೊಳಗಿನವರಾಗಿರಬೇಕು.
- **ವಯೋಮಿತಿ:** ಸಾಮಾನ್ಯ ಹಾಗೂ ಮೀಸಲಾತಿ ರಹಿತ ಅಭ್ಯರ್ಥಿಗಳಿಗೆ ಕನಿಷ್ಠ 21 ವರ್ಷ ಹಾಗೂ ಗರಿಷ್ಠ 30 ವರ್ಷ (1 ಜುಲೈ 2021ಕ್ಕೆ ಅನ್ವಯವಾಗುವಂತೆ). ಅಂಗವಿಕಲರಿಗೆ 10 ವರ್ಷ, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ, ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷ ವಯೋಮಿತಿ ಸಡಿಲಿಕೆ ಇದೆ.
- **ಆಯ್ಕೆ ಪ್ರಕ್ರಿಯೆ:** ನೇಮಕಾತಿಯು ಮೂರು ಹಂತಗಳಲ್ಲಿ ನಡೆಯಲಿದೆ. ಪ್ರಾಥಮಿಕ ಪರೀಕ್ಷೆ, ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಮೂಲಕ ಅಂತಿಮ ನೇಮಕಾತಿ ನಡೆಯಲಿದೆ.
- **ಅರ್ಜಿ ಶುಲ್ಕ:** ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹100. ಸಾಮಾನ್ಯ ಹಾಗೂ ಇತರೆ ವರ್ಗಗಳ ಅಭ್ಯರ್ಥಿಗಳಿಗೆ ₹800.
- **ಅರ್ಜಿ ಸಲ್ಲಿಸಲು ಕೊನೆಯ ದಿನ:** 07, ಆಗಸ್ಟ್ 2022.
- **ಹೆಚ್ಚಿನ ಮಾಹಿತಿಗೆ:** www.nabard.org

ಷೇರುಪೇಟೆ ವಹಿವಾಟು ▲630



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,340
ಇಂದಿನ ಅಂತ್ಯ	16,520
▲	180
ದಿನದ ಗರಿಷ್ಠ	16,588

ವಿನಿಮಯ ದರ

$ ಡಾಲರ್	80.05
£ ಪೌಂಡ್	96.08
€ ಯುರೊ	81.89
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹440
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1250 (1250)
ಸೂರ್ಯಕಾಂತಿ (ರಿಫೈನ್ಡ್)	₹1600 (1600)
ಪಾಮೋಲಿನ್	₹1202 (1195)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹310-488
ದ್ವಿತಳಿ (ಬಿ.ವಿ)	₹333-765

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)


ಆರ್‌ಎಸ್‌ಎಸ್-4	₹171
ಆರ್‌ಎಸ್‌ಎಸ್-5	₹162
ಗುಡ್ ಲಾಟ್	₹156

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ಹಣದುಬ್ಬರದ ನಡುವೆಯೂ ಬೆಳವಣಿಗೆ: ಐಟಿಸಿ ವಿಶ್ವಾಸ


ಸಂಜೀವ್ ಪುರಿ

ಕೋಲ್ಕತ್ತ (ಪಿಟಿಐ): ಹಣದುಬ್ಬರ ಏರಿಕೆಯ ನಡುವೆಯೂ ತನ್ನ ವಹಿವಾಟುಗಳು ಬೆಳವಣಿಗೆ ಕಾಣಲಿವೆ ಎಂದು ಐಟಿಸಿ ಲಿಮಿಟೆಡ್ ವಿಶ್ವಾಸ ವ್ಯಕ್ತಪಡಿಸಿದೆ.

ಕಂಪನಿಯ ವಾರ್ಷಿಕ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿರುವ ಸಿಎಂಡಿ ಸಂಜೀವ್ ಪುರಿ, 'ಎಫ್‌ಎಂಸಿಜಿ ವಲಯದಲ್ಲಿ ನಾವು 25 ಬ್ರ್ಯಾಂಡ್‌ಗಳನ್ನು ಬೆಳೆಸಿದ್ದೇವೆ. ಹೊಸ ಬ್ರ್ಯಾಂಡ್‌ಗಳು ವಾರ್ಷಿಕ ಒಟ್ಟು ₹ 24 ಸಾವಿರ ಕೋಟಿ ಮೌಲ್ಯದ ವಹಿವಾಟು ಸಾಧ್ಯವಾಗಿಸಲಿವೆ' ಎಂದು ಹೇಳಿದ್ದಾರೆ.

ಎಫ್‌ಎಂಸಿಜಿ ಬ್ರ್ಯಾಂಡ್‌ಗಳನ್ನು ವಿದೇಶಿ ಮಾರುಕಟ್ಟೆಗಳಿಗೂ ಕೊಂಡೊಯ್ಯುವ ಮಹತ್ವಾಕಾಂಕ್ಷೆ ಐಟಿಸಿ ಕಂಪನಿಗೆ ಇದೆ. ಭವಿಷ್ಯದ ಸವಾಲುಗಳನ್ನು ಎದುರಿಸಲು ಅಗತ್ಯವಿರುವ ರೀತಿಯಲ್ಲಿ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಕಂಪನಿಯು ಹೂಡಿಕೆ ಮಾಡಲಿದೆ ಎಂದು ಅವರು ವಿವರಿಸಿದ್ದಾರೆ.

ಈ ವರ್ಷದಲ್ಲಿ ಕಂಪನಿಯು 110 ಉತ್ಪನ್ನಗಳನ್ನು ಬಿಡುಗಡೆ ಮಾಡಿದೆ.

ಆರ್ಥಿಕ ಚಟುವಟಿಕೆಗಳು ಸಹಜ ಸ್ಥಿತಿಗೆ ಬಂದಿರುವುದರ ಪರಿಣಾಮವಾಗಿ ಕಂಪನಿಯ ಸಾಂಪ್ರದಾಯಿಕ ಸಿಗರೇಟ್ ವಹಿವಾಟು ಕೋವಿಡ್ ಪೂರ್ವದ ಮಟ್ಟಕ್ಕಿಂತ ಮೇಲಕ್ಕೆ ಬಂದಿದೆ. ಆದರೆ, ಕಳ್ಳಮಾರ್ಗದ ಮೂಲಕ ದೇಶದೊಳಕ್ಕೆ ಬರುತ್ತಿರುವ ಸಿಗರೇಟುಗಳ ಕಾರಣದಿಂದಾಗಿ ಕಾನೂನುಬದ್ಧವಾಗಿ ಸಿಗರೇಟ್ ವಹಿವಾಟು ನಡೆಸುವುದಕ್ಕೆ ಧಕ್ಕೆ ಆಗಿದೆ ಎಂದು ಅವರು ತಿಳಿಸಿದ್ದಾರೆ.

ಪೆಟ್ರೋಲ್ ರಫ್ತು ಮೇಲಿನ ₹ 6 ತೆರಿಗೆ ಹಿಂಪಡೆದ ಸರ್ಕಾರ

ಆಕಸ್ಮಿಕ ಲಾಭ ತೆರಿಗೆ ತಗ್ಗಿಸಿದ ಕೇಂದ್ರ

ನವದೆಹಲಿ (ಪಿಟಿಐ): ಪೆಟ್ರೋಲ್ ರಫ್ತು ಮೇಲಿನ ತೆರಿಗೆಯನ್ನು ಕೇಂದ್ರ ಸರ್ಕಾರ ಹಿಂದಕ್ಕೆ ಪಡೆದಿದೆ. ಅಲ್ಲದೆ, ಡೀಸೆಲ್, ಎಟಿಎಫ್ ಮೇಲಿನ ರಫ್ತು ತೆರಿಗೆ ಹಾಗೂ ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆ ಪ್ರಮಾಣ ಕಡಿಮೆ ಮಾಡಿದೆ.

ಡೀಸೆಲ್ ಮತ್ತು ಎಟಿಎಫ್ ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹ 2ರಷ್ಟು ಕಡಿಮೆ ಮಾಡಲಾಗಿದೆ. ಇದರಿಂದಾಗಿ ಡೀಸೆಲ್ ಮೇಲಿನ ರಫ್ತು ತೆರಿಗೆಯು ₹ 11ಕ್ಕೆ, ಎಟಿಎಫ್ ಮೇಲಿನ ರಫ್ತು ತೆರಿಗೆಯು ₹ 4ಕ್ಕೆ ಇಳಿಕೆ ಆಗಿದೆ ಎಂದು ಸರ್ಕಾರದ ಅಧಿಸೂಚನೆಯಲ್ಲಿ ಹೇಳಲಾಗಿದೆ.

ಮುಖ್ಯಾಂಶಗಳು

- ಜಾಗತಿಕ ಮಟ್ಟದಲ್ಲಿ ಕಚ್ಚಾ ತೈಲ ದರ ಇಳಿಕೆ ಪರಿಣಾಮ
- ಒಎನ್‌ಜಿಸಿ, ವೇದಾಂತ, ರಿಲಯನ್ಸ್‌ಗೆ ಪ್ರಯೋಜನ ನಿರೀಕ್ಷೆ



ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲಕ್ಕೆ ಪ್ರತಿ ಟನ್‌ಗೆ ₹ 23,250ರಷ್ಟು ಆಕಸ್ಮಿಕ ಲಾಭ ತೆರಿಗೆ ವಿಧಿಸಲಾಗಿತ್ತು. ಈಗ ಅದನ್ನು ₹ 17 ಸಾವಿರಕ್ಕೆ ಇಳಿಕೆ ಮಾಡಲಾಗಿದೆ. ಈ ಕ್ರಮದಿಂದಾಗಿ ಒಎನ್‌ಜಿಸಿ ಮತ್ತು ವೇದಾಂತ ಲಿಮಿಟೆಡ್‌ನಂತಹ ಉತ್ಪಾದಕರಿಗೆ ಪ್ರಯೋಜನ ಆಗಲಿದೆ.

ಇದೇ ವೇಳೆ ರಫ್ತು ಕೇಂದ್ರಿತ ವಲಯಗಳಲ್ಲಿ ಇರುವ ಸಂಸ್ಕರಣಾಗಾರಗಳು ತೈಲ ರಫ್ತು ಮಾಡುವುದಕ್ಕೆ ತೆರಿಗೆ ವಿನಾಯಿತಿ ನೀಡಲಾಗಿದೆ.

ಇದರಿಂದ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಪ್ರಯೋಜನ ಸಿಗಲಿದೆ. ಗುಜರಾತ್‌ನ ಜಾಮ್‌ನಗರದಲ್ಲಿ ಕಂಪನಿಯು ಎರಡು ಸಂಸ್ಕರಣಾ ಘಟಕಗಳನ್ನು ಹೊಂದಿದ್ದು, ಈ ಘಟಕಗಳು ರಫ್ತು ಕೇಂದ್ರಿತವಾಗಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ ಆಗಿರುವುದರಿಂದ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ವಿಪ್ರೊ ನಿವ್ವಳ ಲಾಭ ಶೇ 20.6ರಷ್ಟು ಇಳಿಕೆ

ನವದೆಹಲಿ (ಪಿಟಿಐ): ವಿಪ್ರೊ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 2,563 ಕೋಟಿ ಆಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಆಗಿದ್ದ ₹ 3,342 ಕೋಟಿ ನಿವ್ವಳ ಲಾಭಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇಕಡ 20.6ರಷ್ಟು ಇಳಿಕೆ ಆಗಿದೆ.

ಉದ್ಯೋಗಿಗಳ ಮೇಲಿನ ವೆಚ್ಚ ಹೆಚ್ಚಾಗಿರುವುದು ಕಂಪನಿಯ ಒಟ್ಟಾರೆ ವೆಚ್ಚದಲ್ಲಿ ಏರಿಕೆಗೆ ಕಾರಣವಾಗಿದೆ. ಇದರಿಂದಾಗಿ ಲಾಭವು ಇಳಿಕೆ ಕಂಡಿದೆ ಎಂದು ಕಂಪನಿಯು ತಿಳಿಸಿದೆ. ತ್ರೈಮಾಸಿಕದಲ್ಲಿ ಕಂಪನಿಯ ಒಟ್ಟಾರೆ ವೆಚ್ಚವು ಶೇ 23ರಷ್ಟು ಹೆಚ್ಚಾಗಿದ್ದು ₹ 18,647 ಕೋಟಿಗೆ ತಲುಪಿದೆ. ಕಂಪನಿ ಬಿಟ್ಟು ಹೋಗುತ್ತಿರುವವರ ಪ್ರಮಾಣ ಶೇ 23.3ರಷ್ಟಿದೆ.

ಕೇರಳ: ಸಣ್ಣ ಅಂಗಡಿಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ (ಪಿಟಿಐ): ಸಣ್ಣ ಅಂಗಡಿಗಳಲ್ಲಿ 1 ಕೆ.ಜಿ. ಅಥವಾ 2 ಕೆ.ಜಿ. ಪೊಟ್ಟಣಗಳಲ್ಲಿ ಮಾರಾಟ ಮಾಡುವ ಆಹಾರ ಧಾನ್ಯಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸುವ ಉದ್ದೇಶ ಕೇರಳ ಸರ್ಕಾರಕ್ಕೆ ಇಲ್ಲ ಎಂದು ಅಲ್ಲಿನ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ತಿಳಿಸಿದ್ದಾರೆ.

ಈ ತೀರ್ಮಾನದ ಕಾರಣದಿಂದಾಗಿ ಕೇಂದ್ರ ಸರ್ಕಾರದ ಜೊತೆ ತಿಕ್ಕಾಟ ಉಂಟಾದರೂ ತೆರಿಗೆ ವಿಧಿಸುವ ಉದ್ದೇಶ ಕೇರಳ ಸರ್ಕಾರಕ್ಕೆ ಇಲ್ಲ ಎಂದು ಬಾಲಗೋಪಾಲ್ ಅವರು ವಿಧಾನಸಭೆಯಲ್ಲಿ ಹೇಳಿದ್ದಾರೆ.

'ಈ ವಿಚಾರದಲ್ಲಿ ರಾಜಿ ಮಾಡಿಕೊಳ್ಳಲು ನಾವು ಸಿದ್ಧರಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಕೇರಳ ಸರ್ಕಾರವು ಕೇಂದ್ರಕ್ಕೆ ಪತ್ರ ಬರೆದು ಮಾಹಿತಿ ನೀಡಿದೆ ಎಂದಿದ್ದಾರೆ.

ರೂಪಾಯಿ @ 80.05

ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ದಿನದ ವಹಿವಾಟಿನ ಕೊನೆಯಲ್ಲಿ ಇದೇ ಮೊದಲ ಬಾರಿಗೆ ₹ 80ಕ್ಕಿಂತ ಕೆಳಕ್ಕೆ ಕುಸಿದಿದೆ. ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣಗಳೇನು, ಅದರ ಪರಿಣಾಮಗಳು ಏನು? ಇಲ್ಲಿದೆ ಸಂಕ್ಷಿಪ್ತ ವಿವರ.



7.5%

ಈ ವರ್ಷದಲ್ಲಿ ರೂಪಾಯಿ ಮೌಲ್ಯದಲ್ಲಿ ಆಗಿರುವ ಕುಸಿತ



ರೂಪಾಯಿ ಕುಸಿತವು ಆಮದು ವೆಚ್ಚವನ್ನು ಹೆಚ್ಚಿಸಲಿದೆ. ಇದರಿಂದಾಗಿ ಹಣದುಬ್ಬರ ಮತ್ತಷ್ಟು ಜಾಸ್ತಿಯಾಗಬಹುದು. ಜಾಗತಿಕ ಆರ್ಥಿಕ ಹಿಂಜರಿತ, ಅಮೆರಿಕದಲ್ಲಿ ಬಿಗಿಯಾದ ಆರ್ಥಿಕ ನೀತಿ ಅನುಸರಿಸುತ್ತಿರುವುದು, ಚಾಲ್ತಿ ಖಾತೆ ಕೊರತೆ ತೀವ್ರವಾಗುತ್ತಿರುವುದು, ರಿಸ್ಕ್ ಇರುವ ಹೂಡಿಕೆಗಳು ಬೇಡವಾಗುತ್ತಿರುವ ಕಾರಣಗಳಿಂದಾಗಿ ರೂಪಾಯಿ ಇನ್ನಷ್ಟು ಕುಸಿಯುವ ನಿರೀಕ್ಷೆ ಇದೆ.

– **ಅನುಜ್ ಚೌಧರಿ**, ಸಂಶೋಧನಾ ವಿಶ್ಲೇಷಕ, ಶೇರ್‌ಖಾನ್ ಬ್ರೋಕರೇಜ್ ಸಂಸ್ಥೆ

ಕಾರಣ

- ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಹೆಚ್ಚಿಸುತ್ತಿರುವ ಕಾರಣ ಹೂಡಿಕೆದಾರರು ರಿಸ್ಕ್ ಹೆಚ್ಚಿರುವ ಹೂಡಿಕೆಗಳಿಂದ ಹಿಂದಕ್ಕೆ ಸರಿಯುತ್ತಿದ್ದಾರೆ.
- ವಿದೇಶಿ ಹೂಡಿಕೆದಾರರು 2022ರಲ್ಲಿ ಇದುವರೆಗೆ ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಅಂದಾಜು ₹ 2.92 ಲಕ್ಷ ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಇದರಿಂದಾಗಿ ಡಾಲರ್ ಕೊರತೆ ಸೃಷ್ಟಿಯಾಗಿದೆ.
- ಚಾಲ್ತಿ ಖಾತೆ ಕೊರತೆ ಹಾಗೂ ವ್ಯಾಪಾರ ಕೊರತೆ ಅಂತರ ಹೆಚ್ಚಾಗುವ ಭೀತಿಯು ರೂಪಾಯಿ ಮೇಲೆ ಪರಿಣಾಮ ಬೀರಿದೆ.

ಪರಿಣಾಮ

- ದೇಶವು ತನ್ನ ಅಗತ್ಯದ ಶೇಕಡ 85ರಷ್ಟು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ರೂಪಾಯಿ ಮೌಲ್ಯ ಕುಸಿತದಿಂದಾಗಿ ತೈಲ ಆಮದು ವೆಚ್ಚ ಏರಿಕೆಯಾಗಲಿದೆ.
- ಕಲ್ಲಿದ್ದಲು ಆಮದು ವೆಚ್ಚ ಹೆಚ್ಚಾಗುವ ಕಾರಣ ವಿದ್ಯುತ್ ಉತ್ಪಾದನಾ ಕಂಪನಿಗಳ ಒಟ್ಟು ಆದಾಯಕ್ಕೆ ಪೆಟ್ಟು ಬೀಳಲಿದೆ.
- ಚಿನ್ನ, ಚಿನ್ನದ ಆಭರಣಗಳನ್ನು ಖರೀದಿಸುವುದು ತುಟ್ಟಿಯಾಗಬಹುದು. ಭಾರತವು ಆಮದು ಮಾಡಿಕೊಳ್ಳುವ ಸರಕುಗಳ ಪಟ್ಟಿಯಲ್ಲಿ ಚಿನ್ನಕ್ಕೆ ಮೂರನೆಯ ಸ್ಥಾನವಿದೆ.
- ಆಮದು ಮಾಡಿಕೊಳ್ಳುವ ಅಡುಗೆ ಎಣ್ಣೆ, ಡ್ರೈಫ್ರುಟ್ಸ್, ಔಷಧ, ಸೌಂದರ್ಯ ವರ್ಧಕಗಳು, ಬಟ್ಟೆಗಳು, ವಿದ್ಯುತ್ ಉಪಕರಣಗಳು, ಸ್ಮಾರ್ಟ್‌ಫೋನ್‌ಗಳು ದುಬಾರಿ ಆಗುತ್ತವೆ.
- ವಿದೇಶಗಳಲ್ಲಿ ವ್ಯಾಸಂಗ ಮಾಡುವವರ ವೆಚ್ಚಗಳು ರೂಪಾಯಿ ಲೆಕ್ಕದಲ್ಲಿ ಹೆಚ್ಚಾಗುತ್ತವೆ.
- ಆಟೊಮೊಬೈಲ್ ಬಿಡಿಭಾಗಗಳು, ಎಂಜಿನಿಯರಿಂಗ್ ಉತ್ಪನ್ನಗಳ ತಯಾರಿಕೆ ವೆಚ್ಚ ಹೆಚ್ಚಾಗುತ್ತದೆ.

ಇವರಿಗೆ ಲಾಭ

- ಮಾಹಿತಿ ತಂತ್ರಜ್ಞಾನ ಆಧಾರಿತ ಸೇವೆಗಳನ್ನು ರಫ್ತು ಮಾಡುವ ಇನ್ಫೊಸಿಸ್, ಟಿಸಿಎಸ್, ಟೆಕ್ ಮಹೀಂದ್ರದಂತಹ ಕಂಪನಿಗಳಿಗೆ ಹೆಚ್ಚು ಲಾಭ ಆಗುವ ನಿರೀಕ್ಷೆ ಇದೆ.
- ಔಷಧ ರಫ್ತು ಕಂಪನಿಗಳು ಕೂಡ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಲಿವೆ.
- ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುವ ರಿಲಯನ್ಸ್ ಇಂಡಸ್ಟ್ರೀಸ್‌ನಂತಹ ಕಂಪನಿಗಳಿಗೆ ಲಾಭ ಆಗುವ ಸಾಧ್ಯತೆ ಇದೆ.
- ವಿದೇಶಗಳಲ್ಲಿ ಸಂಪಾದಿಸಿ, ದೇಶದಲ್ಲಿರುವ ಕುಟುಂಬದ ಸದಸ್ಯರಿಗೆ ಹಣ ಕಳುಹಿಸುವವರಿಗೆ ಹೆಚ್ಚು ಪ್ರಯೋಜನ ಸಿಗಲಿದೆ. ಒಂದು ಡಾಲರ್ ರವಾನಿಸಿದರೆ, ಕುಟುಂಬದ ಸದಸ್ಯರಿಗೆ ಹೆಚ್ಚು ರೂಪಾಯಿ ಸಿಗುವಂತಾಗುತ್ತದೆ.


ಆಧಾರ: ಪಿಟಿಐ, ರಾಯಿಟರ್ಸ್

ಸುದ್ದಿ 2 ನಿಮಿಷ

ಒಎನ್‌ಜಿಸಿ, ರಿಲಯನ್ಸ್, ವೇದಾಂತ ಷೇರು ಮೌಲ್ಯ ಹೆಚ್ಚಳ

ಮುಂಬೈ (ಪಿಟಿಐ): ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯ ಕಡಿತ ಮತ್ತು ವಿದೇಶಿ ಸಾಂಸ್ಥಿಕ ಬಂಡವಾಳ (ಎಫ್‌ಐಐ) ಒಳಹರಿವಿನ ಕಾರಣಗಳಿಂದಾಗಿ ದೇಶದ ಷೇರುಪೇಟೆಗಳಲ್ಲಿ ಬುಧವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಐ.ಟಿ., ತೈಲ ಮತ್ತು ಅನಿಲ ಹಾಗೂ ಲೋಹ ವಲಯದ ಷೇರುಗಳ ಹೆಚ್ಚಿನ ಗಳಿಕೆಯಿಂದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 630 ಅಂಶ ಏರಿಕೆಯಾಗಿ, ಶೇಕಡ 1ಕ್ಕೂ ಹೆಚ್ಚಿನ ಪ್ರಮಾಣದ ಜಿಗಿತ ಕಂಡಿತು.



ರಿಲಯನ್ಸ್ ಇಂಡಸ್ಟ್ರೀಸ್ ಷೇರು ಮೌಲ್ಯ ಬಿಎಸ್‌ಇನಲ್ಲಿ ಶೇ 2.47ರಷ್ಟು ಹೆಚ್ಚಾಗಿ ಪ್ರತಿ ಷೇರಿನ ಬೆಲೆ ₹ 2,501ಕ್ಕೆ ತಲುಪಿತು. ಇದರಿಂದಾಗಿ ರಿಲಯನ್ಸ್‌ನ ಮಾರುಕಟ್ಟೆ ಮೌಲ್ಯ ₹ 40,516 ಕೋಟಿ ಏರಿಕೆ ಕಂಡು ಒಟ್ಟಾರೆ ಮೌಲ್ಯವು ₹ 16.92 ಲಕ್ಷ ಕೋಟಿಗೆ ತಲುಪಿತು.

ಒಎನ್‌ಜಿಸಿ ಷೇರು ಮೌಲ್ಯ ಶೇ 4ರಷ್ಟು ಹೆಚ್ಚಾಗಿ ಪ್ರತಿ ಷೇರಿನ ಬೆಲೆ ₹ 132ಕ್ಕೆ ಏರಿಕೆ ಆಯಿತು. ವೇದಾಂತ ಷೇರು ಮೌಲ್ಯ ಶೇ 6.22ರಷ್ಟು ಹೆಚ್ಚಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 16,500ರ ಗಡಿ ದಾಟಿ ವಹಿವಾಟು ನಡೆಸಿತು.

ಜೂನ್‌ನಲ್ಲಿ 15,183 ಅಂಶಗಳಿಗೆ ಇಳಿಕೆ ಕಂಡಿದ್ದ ನಿಫ್ಟಿ ಶೇ 8ರಷ್ಟು ಚೇತರಿಕೆ ಕಂಡುಕೊಂಡಿದೆ. ಮಾರುಕಟ್ಟೆಗೆ ಪೂರಕವಾದ ಬೆಳವಣಿಗೆಗಳಿಂದಾಗಿ ಮುಂದಿನ ದಿನಗಳಲ್ಲಿಯೂ ಚೇತರಿಯು ಮುಂದುವರಿಯುವ ನಿರೀಕ್ಷೆ ಇದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಸಿಟ್ರಾನ್ ಸಿ3 ಬಿಡುಗಡೆ

ಬೆಂಗಳೂರು: ಸಿಟ್ರಾನ್ ಇಂಡಿಯಾ ಕಂಪನಿಯು ಭಾರತದ ಮಾರುಕಟ್ಟೆಗೆ ಹೊಸ 'ಸಿಟ್ರಾನ್ ಸಿ3' ಬಿಡುಗಡೆ ಮಾಡಿದೆ. ಇದರ ಪರಿಚಯಾತ್ಮಕ ವಿಶೇಷ ಬೆಲೆ ₹ 5.70 ಲಕ್ಷ (ಎಕ್ಸ್ ಷೋರೂಂ).

ಈ ಮಾದರಿಯು ಶೇಕಡ 90ರಷ್ಟು ಸ್ಥಳೀಯವಾಗಿ ತಯಾರಾಗಿದೆ. ತಮಿಳುನಾಡಿನ ತಿರುವಲ್ಲೂರು ಬಳಿ ಇರುವ ಘಟಕದಲ್ಲಿ ಇದನ್ನು ತಯಾರಿಸಲಾಗಿದೆ. 1.2 ಲೀಟರ್ ಪೆಟ್ರೋಲ್ ಎಂಜಿನ್ ಹೊಂದಿದೆ ಎಂದು ಕಂಪನಿಯು ತಿಳಿಸಿದೆ.

ಎಸ್‌ಯುವಿಯಿಂದ ಪ್ರೇರಿತ ಹ್ಯಾಚ್‌ಬ್ಯಾಕ್ ಕಾರು ಇದು. ಈ ವಾಹನವು 4 ಮೀಟರ್‌ಗಿಂತ ಕಡಿಮೆ ಉದ್ದವಿದೆ ಎಂದು ಕಂಪನಿ ತಿಳಿಸಿದೆ.

19 ನಗರಗಳಲ್ಲಿ ಇರುವ ಎಲ್ಲಾ ಲಾ ಮೈಸನ್ ಸಿಟ್ರಾನ್ ಫಿಜಿಟಲ್ ಷೋರೂಂಗಳಲ್ಲಿ ಬುಧವಾರದಿಂದಲೇ ವಿತರಣೆ ಆರಂಭ ಆಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-11000
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	490
ಅಡಿಕೆ	
ಪುತ್ತೂರು	
ಕೋಕ	11000-26000
ಹೊಸತು	31000-44000
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-55500
ಶಿವಮೊಗ್ಗ	
ಗೊರಬಲು	17082-37799
ರಾಶಿ	43899-49399
ಸಿದ್ದಾಪುರ	
ಬಿಳಿಗೋಟು	26799-32380
ಚಾಲಿ	34399-38749
ಕೋಕ	21799-31369
ಕೆಂಪುಗೋಟು	28012-33500
ರಾಶಿ	47509-47999
ತಟ್ಟಿಬೆಟ್ಟೆ	38869-42699
ಶಿರಸಿ	
ಬೆಟ್ಟೆ	35009-43099
ಬಿಳಿಗೋಟು	22119-32599
ಚಾಲಿ	34769-39391
ರಾಶಿ	46323-49739

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15500	15700	215.20
ಎಸಿ	8680	8300	8550	
ಆರ್‌ಪಿ	9500	9500	9500	ಲಂಡನ್
ಆರ್‌ಸಿ	4800	4500	4550	1992 ಡಾಲರ್ಸ್

ಹೋಟೆಲ್ ಸೇವಾ ಶುಲ್ಕ: ಆದೇಶಕ್ಕೆ ಹೈಕೋರ್ಟ್ ತಡೆ

ನವದೆಹಲಿ (ಪಿಟಿಐ): ಹೋಟೆಲ್‌ಗಳು ಮತ್ತು ರೆಸ್ಟಾರೆಂಟ್‌ಗಳು ಆಹಾರದ ಬಿಲ್ ಜೊತೆ ಸೇವಾ ಶುಲ್ಕ ಸಂಗ್ರಹಿಸುವಂತೆ ಇಲ್ಲ ಎಂದು ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರ (ಸಿಸಿಪಿಎ) ನೀಡಿದ್ದ ಆದೇಶಕ್ಕೆ ದೆಹಲಿ ಹೈಕೋರ್ಟ್ ತಡೆ ನೀಡಿದೆ.



ಸಿಸಿಪಿಎ ಆದೇಶ ಪ್ರಶ್ನಿಸಿ ರಾಷ್ಟ್ರೀಯ ರೆಸ್ಟಾರೆಂಟ್ ಸಂಘ (ಎನ್‌ಆರ್‌ಎಐ) ಹಾಗೂ ಹೋಟೆಲ್ ಮತ್ತು ರೆಸ್ಟಾರೆಂಟ್‌ಗಳ ಸಂಘಗಳ ಒಕ್ಕೂಟ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಯಶವಂತ ವರ್ಮ, ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸಿಸಿಪಿಎಗೆ ಸೂಚಿಸಿದ್ದಾರೆ.

ಅರ್ಜಿದಾರ ಸಂಘಟನೆ, ಒಕ್ಕೂಟದ ಸದಸ್ಯರು ಆಹಾರದ ಬಿಲ್ ಮೇಲೆ ಸೇವಾ ಶುಲ್ಕ ಪಾವತಿಸಬೇಕು ಎಂಬುದನ್ನು ಮೆನು ಮೇಲೆ ಪ್ರಮುಖವಾಗಿ ಮುದ್ರಿಸಿದ್ದರೆ, ಸಿಸಿಪಿಎ ಆದೇಶಕ್ಕೆ ತಡೆ ಅನ್ವಯವಾಗುತ್ತದೆ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಮುಂಬೈ ಧಾರಣೆ

ಶೇಂಗಾ

20-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1175 (1195)
ಪಾಮ್ ವಾರದ ಡೆಲಿವರಿ	1200 (1193)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1520)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,400 (50,550)

ಬೆಳ್ಳಿ ಕೆ.ಜಿ 55,450 (55,550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡವು ಬುಧವಾರ ಒಡಿಶಾದ ಭುವನೇಶ್ವರದಲ್ಲಿ ಮುಕ್ತಾಯವಾದ ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಕರ್ನಾಟಕದ ಈಜುಪಟುಗಳು ಒಟ್ಟು 623 ಅಂಕಗಳನ್ನು ಗಳಿಸಿ ಚಾಂಪಿಯನ್ ಪಟ್ಟಕ್ಕೇರಿದರು. ಮಹಾರಾಷ್ಟ್ರ ತಂಡವು ರನ್ನರ್ಸ್ ಅಪ್ ಪಡೆಯಿತು.

ತಂಡ ವಿಭಾಗದಲ್ಲಿಯೂ ಕರ್ನಾಟಕ ತಂಡಗಳು ಪಾರಮ್ಯ ಮೆರೆದವು.

ಕರ್ನಾಟಕದ ಉತ್ಕರ್ಷ ಪಾಟೀಲ (3 ಚಿನ್ನ, 1 ಬೆಳ್ಳಿ) ಬಾಲಕರ ವಿಭಾಗದಲ್ಲಿ ಗುಜರಾತ್‌ನ ದೇವಾಂಶ್ (3 ಚಿನ್ನ, 1 ಬೆಳ್ಳಿ) ಅವರೊಂದಿಗೆ ಶ್ರೇಷ್ಠ ಈಜುಪಟು ಪ್ರಶಸ್ತಿ ಹಂಚಿಕೊಂಡರು. ಕರ್ನಾಟಕದ ನವನೀತ್ ಗೌಡ (ಐದು ಚಿನ್ನ) ಎರಡನೇ ಸ್ಥಾನ ಪಡೆದರು.

ಬಾಲಕಿಯರ ವಿಭಾಗದಲ್ಲಿ ಮಹಾರಾಷ್ಟ್ರದ ಅಪೇಕ್ಷಾ ಫರ್ನಾಂಡಿಸ್ (5 ಚಿನ್ನ, 5 ಕೂಟ ದಾಖಲೆ) ಮತ್ತು ಕರ್ನಾಟಕದ ಹಷಿಕಾ ರಾಮಚಂದ್ರ (4ಚಿನ್ನ, 1 ಬೆಳ್ಳಿ, 4 ಕೂಟದಾಖಲೆ) ಕ್ರಮವಾಗಿ ಮೊದಲ ಹಾಗೂ ಎರಡನೇ ಸ್ಥಾನ ಪಡೆದುಕೊಂಡಿದ್ದಾರೆ.



ಹಷಿಕಾ ರಾಮಚಂದ್ರ

ಕರ್ನಾಟಕಕ್ಕೆ ಕಂಚು: ವಾಟರ್ ಪೋಲೊನಲ್ಲಿ ಕರ್ನಾಟಕ ಬಾಲಕಿಯರ ತಂಡವು ಕಂಚಿನ ಪದಕ ಗಳಿಸಿತು. ಕೇರಳ ತಂಡವು ಪ್ರಥಮ ಸ್ಥಾನ ಪಡೆಯಿತು.

ಬಾಲಕರ ವಿಭಾಗದಲ್ಲಿ ಬಂಗಾಳ ತಂಡವು ಚಿನ್ನದ ಪದಕ ಜಯಿಸಿತು.

ಹಷಿಕಾ, ವಿದಿತ್‌ಗೆ ಚಿನ್ನ: ಕರ್ನಾಟಕದ ಹಷಿಕಾ ರಾಮಚಂದ್ರ ಮತ್ತು ವಿದಿತ್ ಎಸ್ ಶಂಕರ್ ಅವರು ಕ್ರಮವಾಗಿ ಬಾಲಕಿಯರ 400 ಮೀ. ಮೆಡ್ಲೆ ಮತ್ತು ಬಾಲಕರ 200 ಮೀ. ಬ್ರೆಸ್ಟ್‌ಸ್ಟ್ರೋಕ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು. ಹಷಿಕಾ (5ನಿ,10.70ಸೆ) ನೂತನ ದಾಖಲೆ ಬರೆದರು. 2019ರಲ್ಲಿ ಗುಜರಾತ್‌ನ ಅಪೇಕ್ಷಾ ಫರ್ನಾಂಡಿಸ್ (5ನಿ,13.80ಸೆ) ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ವಿದಿತ್ 2ನಿ,23.50 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಬಾಲಕರ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ರಾಜ್ಯದ ಆರ್. ನವನೀತ್ ಗೌಡ (2ನಿ,33.45ಸೆ) ಚಿನ್ನದ ಪದಕ ಜಯಿಸಿದರು.

ಮಹಿಳೆಯರ 200 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಕರ್ನಾಟಕದ ಎಸ್. ಲಕ್ಷ್ಯ ಮತ್ತು ಸಾನ್ವಿ ರಾವ್ ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗಳಿಸಿದರು. 12–14 ವರ್ಷದೊಳಗಿನವರ ಬಾಲಕಿಯರ 200 ಮೀ ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಕರ್ನಾಟಕದ ಮಾನವಿ ವರ್ಮಾ ಚಿನ್ನದ ಪದಕ ಜಯಿಸಿದರು. 100 ಮೀ ಫ್ರೀಸ್ಟೈಲ್‌ನಲ್ಲಿ ಕರ್ನಾಟಕದ ನೀನಾ ವೆಂಕಟೇಶ್ (59.91ಸೆ) ಚಿನ್ನದ ಪದಕ ಗಳಿಸಿದರು.

12–14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕರ್ನಾಟಕದ ಧಿನಿದಿ ದೆಸಿಂಗು (59.47ಸೆ) ಮತ್ತು ಎಸ್ ರುಜುಲಾ (59.93ಸೆ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕ ಜಯಿಸಿದರು.

ಕಂಬಳ: ಶ್ರೀನಿವಾಸ ಗೌಡ ಹೆಸರಿನಲ್ಲಿ ಸುಳ್ಳು ದಾಖಲೆ ಸೃಷ್ಟಿ- ದೂರು

ಮಂಗಳೂರು: ಕಂಬಳ ಅಕಾಡೆಮಿಯ ಗುಣಪಾಲ ಕಡಂಬ, ಶ್ರೀನಿವಾಸ ಗೌಡ ಹಾಗೂ ಕಂಬಳದ ಫಲಿತಾಂಶ ಘೋಷಿಸುವ 'ಸ್ಕೈ ವೀವ್'ನ ರತ್ನಾಕರ ಅವರು ನಕಲಿ ದಾಖಲೆ ಸೃಷ್ಟಿಸಿ ವಂಚಿಸಿದ್ದಾರೆ ಎಂದು ಮುಚ್ಚೂರಿನ ಲೋಕೇಶ್ ಶೆಟ್ಟಿ ಅವರು ಮೂಡುಬಿದಿರೆ ಪೊಲೀಸ್ ಠಾಣೆಗೆ ಬಗ್ಗೆ ದೂರು ನೀಡಿದ್ದಾರೆ.

'ಕಡಂಬ ಅವರು ತಮ್ಮ ಕಂಬಳ ಅಕಾಡೆಮಿಯಲ್ಲಿ ತರಬೇತಿ ಪಡೆದ ಶ್ರೀನಿವಾಸ ಗೌಡ ಅವರ ಹೆಸರಿನಲ್ಲಿ ಹಲವಾರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರ ಹಾಗೂ ಸಾರ್ವಜನಿಕರಿಂದ ಲಕ್ಷಾಂತರ ರೂಪಾಯಿ ದೇಣಿಗೆ ಪಡೆದಿದ್ದಾರೆ. ಅದಕ್ಕೆ ಲೆಕ್ಕಪತ್ರಗಳನ್ನೂ ನಿರ್ವಹಿಸಿಲ್ಲ. ಅವರ ಕೃತ್ಯಗಳಿಗೆ ರತ್ನಾಕರ ಅವರು ಸಹಕರಿಸಿದ್ದಾರೆ. ಇಂತಹ ಕೃತ್ಯಗಳಿಂದಾಗಿ ಕಂಬಳದ ಘನತೆಗೆ ಧಕ್ಕೆ ಉಂಟಾಗಿದೆ. ಈ ಬಗ್ಗೆ ಧ್ವನಿ ಎತ್ತಿದವರಿಗೆ ಆರೋಪಿಗಳು ಜೀವ ಬೆದರಿಕೆ ಒಡ್ಡಿದ್ದಾರೆ' ಎಂದು ಅವರು ಆರೋಪಿಸಿದ್ದಾರೆ.

ಕಂಬಳ ಓಟದ ವೇಗವನ್ನು ದಾಖಲಿಸಲು ಬಳಸುವ ತಂತ್ರಜ್ಞಾನವು ಅವೈಜ್ಞಾನಿಕ ಎಂದೂ ಅವರು ಆರೋಪಿಸಿದ್ದಾರೆ. ಪೊಲೀಸರು ಪ್ರಕರಣವನ್ನು ಸರಿಯಾಗಿ ತನಿಖೆ ನಡೆಸದಿದ್ದರೆ ನ್ಯಾಯಾಲಯದಲ್ಲಿ ದಾವೆ ಹೂಡುವುದಾಗಿ ಅವರು ಎಚ್ಚರಿಸಿದ್ದಾರೆ. ಶ್ರೀನಿವಾಸ್ ಗೌಡ ಅವರು 'ಕಂಬಳದ ಉಸೇನ್ ಬೋಲ್ಟ್' ಎಂದೇ ಖ್ಯಾತರಾಗಿದ್ದಾರೆ. ರಾಜ್ಯದ ಗೃಹಸಚಿವರು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ, ನಗರ ಪೊಲೀಸ್ ಕಮಿಷನರ್ ಅವರಿಗೂ ದೂರಿನ ಪ್ರತಿ ಕಳುಹಿಸಿದ್ದಾರೆ. ಎಫ್‌ಐಆರ್ ದಾಖಲಾಗಿಲ್ಲ.

ವಿಶ್ವಕಪ್ ಶೂಟಿಂಗ್: ಭಾರತಕ್ಕೆ ಅಗ್ರಸ್ಥಾನ

ಚಾಂಗ್ವಾನ್, ದಕ್ಷಿಣ ಕೊರಿಯಾ(ಪಿಟಿಐ): ಗಮನಸೆಳೆದ ಭಾರತದ ಶೂಟರ್‌ಗಳು ಈ ಬಾರಿ ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯಲ್ಲಿ ಒಟ್ಟು 15 ಪದಕಗಳನ್ನು ಬಾಚಿಕೊಂಡರು. ಇದರೊಂದಿಗೆ ಪದಕಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದರು.

ಇಲ್ಲಿ ನಡೆದ ಟೂರ್ನಿಯ ಕೊನೆಯ ದಿನವಾದ ಬುಧವಾರ ಅನೀಶ್ ಭಾನ್ವಾಲ, ವಿಜಯವೀರ್ ಸಿಧು ಮತ್ತು ಸಮೀರ್ ಅವರಿದ್ದ ತಂಡ ಪುರುಷರ 25 ಮೀಟರ್ಸ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿತು.

ಇದರೊಂದಿಗೆ ಭಾರತ ಒಟ್ಟು ಐದು ಚಿನ್ನ, ಆರು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ತನ್ನದಾಗಿಸಿಕೊಂಡಿತು.

ಫೈನಲ್‌ನಲ್ಲಿ ಜೆಕ್ ಗಣರಾಜ್ಯದ ಮಾರ್ಟಿನ್ ಪೊದರಸ್ಕಿ, ಥಾಮಸ್ ಟೆಹಾನ್, ಮಟೆಜ್ ರಂಪುಲಾ ಎದುರು ಸ್ಪರ್ಧಿಸಿದ್ದ ಶೂಟರ್‌ಗಳು 15–17ರಿಂದ ಸೋಲು ಅನುಭವಿಸಿದರು.



ಪ್ರಶಸ್ತಿ ವಿಜೇತ ಸೇಂಟ್ ಜೋಸೆಫ್ ತಂಡ: ಎಡದಿಂದ– ನಿಂತವರು: ಸ್ಟೀಫನ್, ಹಮ್ಜಾ, ಹಯಾತ್, ಕ್ರಿಶವ್, ಅಮೀನ್, ರಾಜಾ, ಮೆಹಬೂಬ್ (ಕೋಚ್), ಫಾ. ವಿಶಾಲ್ ಡಿಸೋಜ (ಪ್ರೈಮರಿ ಸ್ಕೂಲ್ ಅಡ್ಮಿನ್), ಫಾ. ಸುನಿಲ್ ಫರ್ನಾಂಡಿಸ್ (ಪ್ರಾಂಶುಪಾಲರು), ಬ್ರಯನ್ ಮೆಕರ್ಟಿಶ್ (ಉಪ ಪ್ರಾಂಶುಪಾಲರು), ಅಗ್ರಿಮ್, ವಿವಾನ್, ರೇಹಾನ್, ಅಕ್ಷತ್, ಆ್ಯಂಟನಿ. ಮಂಡಿಯೂರಿದವರು: ಕರಣ್, ಅಧಿರಾಜ್, ನಿತೀಶ್, ವೈಭವ್, ಶಿವ, ಅನಿರುದ್ಧ, ಆದಿತ್ಯ, ಅಭಿನವ್, ಸಮರ್ಥ್, ಗೋವಿಂದ್

ಕ್ರಿಕೆಟ್: ಸೇಂಟ್ ಜೋಸೆಫ್‌ಗೆ ಪ್ರಶಸ್ತಿ

ಬೆಂಗಳೂರು: ಸೇಂಟ್ ಜೋಸೆಫ್ ಬಾಯ್ಸ್ ಹೈಸ್ಕೂಲ್ (ಎಸ್‌ಜೆಬಿಎಚ್‌ಎಸ್) ತಂಡವು 16 ವರ್ಷದೊಳಗಿನವರ ಕಾಟನ್ ಶೀಲ್ಡ್ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದೆ.

ಇಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಎಸ್‌ಜೆಬಿಎಚ್‌ಎಸ್ ಎರಡು ವಿಕೆಟ್‌ಗಳಿಂದ ಬಿಸಿಬಿಎಸ್ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಬಿಸಿಬಿಎಸ್ ತಂಡವು 19.4 ಓವರ್‌ಗಳಲ್ಲಿ 109 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ವೈಭವ್ (25ಕ್ಕೆ 2), ಅಮೀನ್ (15ಕ್ಕೆ 3) ಮತ್ತು ಶಿವ ಆರ್. (15ಕ್ಕೆ 2) ಬೌಲಿಂಗ್‌ನಲ್ಲಿ ಮಿಂಚಿದರು.

ಎಸ್‌ಜೆಬಿಎಚ್‌ಎಸ್ 17.5 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಶಿವ ಆರ್. 29, ಕ್ರಿಶವ್ 27, ರೇಹಾನ್ 25 ರನ್ ಗಳಿಸಿದರು.

ಎಫ್‌ಐಎಚ್: ಸೀಫ್ ನೇಮಕ

ಲಾಸನ್ (ಪಿಟಿಐ): ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಹಂಗಾಮಿ ಅಧ್ಯಕ್ಷರಾಗಿ ಈಜಿಪ್ಟ್‌ನ ಸೀಫ್ ಅಹ್ಮದ್ ನೇಮಕಗೊಂಡಿದ್ದಾರೆ.

ಇತ್ತೀಚೆಗೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಭಾರತದ ನರೀಂದರ್ ಬಾತ್ರಾ ಅವರ ಸ್ಥಾನಕ್ಕೆ ಸೀಫ್ ನೇಮಕವಾಗಿದೆ.

ದಕ್ಷಿಣ ಆಫ್ರಿಕಾ ಕ್ರಿಕೆಟ್ ಲೀಗ್: ಎಲ್ಲ ತಂಡಗಳ ಖರೀದಿ

ಆರು ತಂಡಗಳೂ ಭಾರತೀಯ ಫ್ರ್ಯಾಂಚೈಸಿಗಳ ಪಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫ್ರ್ಯಾಂಚೈಸಿಗಳು ಈಗ ದಕ್ಷಿಣ ಆಫ್ರಿಕಾದಲ್ಲಿಯೂ ತಮ್ಮ ಹೆಜ್ಜೆಗುರುತು ಮೂಡಿಸಲಿವೆ.

ಕ್ರಿಕೆಟ್ ದಕ್ಷಿಣ ಆಫ್ರಿಕಾ ಪ್ರೀಮಿಯರ್ ಲೀಗ್ ಟಿ20 ಟೂರ್ನಿಯಲ್ಲಿ ಆಡಲಿರುವ ಆರು ತಂಡಗಳನ್ನೂ ಐಪಿಎಲ್‌ನ ಫ್ರ್ಯಾಂಚೈಸಿಗಳೇ ತಮ್ಮ ತೆಕ್ಕೆಗೆ ಹಾಕಿಕೊಂಡಿವೆ. 2023ರ ಜನವರಿಯಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಈ ಟೂರ್ನಿ ನಡೆಯಲಿದೆ. ಈಗಾಗಲೇ ವೆಸ್ಟ್ ಇಂಡೀಸ್‌ನ ಕೆರಬಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿಯೂ ಐಪಿಎಲ್ ಫ್ರ್ಯಾಂಚೈಸ್‌ಗಳಾದ ಕೋಲ್ಕತ್ತ ನೈಟ್‌ರೈಡರ್ಸ್, ರಾಜಸ್ಥಾನ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ಸಹಮಾಲೀಕತ್ವ ಹೊಂದಿವೆ. ಆರು ತಂಡಗಳನ್ನು ಪಡೆಯಲು 25 ಆಸಕ್ತರು ಅರ್ಜಿ ಸಲ್ಲಿಸಿದ್ದರು. ಈ ಪೈಪೋಟಿಯಲ್ಲಿ ಮುಂಬೈ ಇಂಡಿಯನ್ಸ್ ತಂಡದ ಮಾಲೀಕತ್ವ ಹೊಂದಿರುವ ರಿಲಯನ್ಸ್ ಸಮೂಹವು ಕೇಪ್ ಟೌನ್ ತಂಡವನ್ನು ತನ್ನದಾಗಿಸಿಕೊಂಡಿತು. ಮುಂಬೈ ತಂಡವು ಐದು ಬಾರಿ ಐಪಿಎಲ್ ಪ್ರಶಸ್ತಿ ಜಯಿಸಿದೆ. ನಾಲ್ಕು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಕೂಡ ಜೊಹಾನ್ಸ್‌ಬರ್ಗ್ ತಂಡವನ್ನು ಸೆಳೆದುಕೊಂಡಿದೆ. ಸನ್‌ರೈಸರ್ಸ್ ಹೈದರಾಬಾದ್ (ಸನ್ ಟಿ.ವಿ) ಫ್ರ್ಯಾಂಚೈಸಿಯು ಪೋರ್ಟ್ ಎಲಿಜಬೆತ್, ಲಖನೌ ಸೂಪರ್ ಜೈಂಟ್ಸ್‌ನ ಆರ್.ಪಿ. ಸಂಜೀವ್ ಗೊಯೆಂಕಾ ಅವರು ಡರ್ಬನ್, ರಾಜಸ್ಥಾನ ರಾಯಲ್ಸ್ ಫ್ರ್ಯಾಂಚೈಸಿಯು ಪಾರ್ಲ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್‌ನ ಸಹ ಮಾಲೀಕರಾದ ಪಾರ್ಥ್ ಜಿಂದಾಲ್ ಅವರು ಪ್ರಿಟೋರಿಯಾ ತಂಡವನ್ನು ಪಡೆದಿದ್ದಾರೆ.



ಗ್ರೆಮ್ ಸ್ಮಿತ್

ಈ ಟೂರ್ನಿಯ ಪ್ರವರ್ತಕರು ಕೂಡ ಭಾರತದವರೇ ಆದ ಸುಂದರ್ ರಾಮನ್ ಅವರು ಐಪಿಎಲ್‌ಗೆ ಮುಖ್ಯಸ್ಥರಾಗಿದ್ದರು.

ಈ ಟೂರ್ನಿಗೆ ದಕ್ಷಿಣ ಆಫ್ರಿಕಾ ತಂಡದ ಮಾಜಿ ನಾಯಕ ಗ್ರೆಮ್ ಸ್ಮಿತ್ ಅವರನ್ನು ಕಮಿಷನರ್ ಆಗಿ ನೇಮಕ ಮಾಡಲಾಗಿದೆ.'ನೂತನ ಟೂರ್ನಿಯ ಕಮಿಷನರ್ ಆಗಿ ಕಾರ್ಯನಿರ್ವಹಿಸಲು ಅವಕಾಶ ಸಿಕ್ಕಿರುವುದು ಅಪಾರ ಸಂತಸ ತಂದಿದೆ. ಅಪ್ಪಟ ಸ್ಪರ್ಧಾತ್ಮಕವಾಗಲಿರುವ ಈ ಟೂರ್ನಿಯು ದೇಶದ ಕ್ರಿಕೆಟ್‌ಗೆ ಅಗತ್ಯವಿರುವ ಹೂಡಿಕೆಯನ್ನು ಆಕರ್ಷಿಸಲಿದೆ. ಆಟಗಾರರಿಗೂ ಹೊಸ ವೇದಿಕೆ ಸಿಗಲಿದೆ' ಎಂದು ಸ್ಮಿತ್ ಹೇಳಿದ್ದಾರೆ.

ಐಪಿಎಲ್ ಫ್ರ್ಯಾಂಚೈಸಿಗಳು ಖರೀದಿಸಿದ ತಂಡಗಳು	
ಮುಂಬೈ ಇಂಡಿಯನ್ಸ್	ಕೇಪ್‌ಟೌನ್
ಚೆನ್ನೈ ಸೂಪರ್ ಕಿಂಗ್ಸ್	ಜೋಹಾನ್ಸ್‌ಬರ್ಗ್
ಡೆಲ್ಲಿ ಕ್ಯಾಪಿಟಲ್ಸ್	ಪ್ರಿಟೋರಿಯಾ
ಲಖನೌ ಸೂಪರ್‌ಜೈಂಟ್ಸ್	ಡರ್ಬನ್
ರಾಜಸ್ಥಾನ ರಾಯಲ್ಸ್	ಪಾರ್ಲ್
ಸನ್‌ರೈಸರ್ಸ್ ಹೈದರಾಬಾದ್	ಪೋರ್ಟ್ ಎಲಿಜಬೆತ್

ಬಿಸಿಸಿಐ: ಸುಪ್ರೀಂ ವಿಚಾರಣೆ ಇಂದು

ನವದೆಹಲಿ (ಪಿಟಿಐ): ನಿವೃತ್ತ ನ್ಯಾಯಮೂರ್ತಿ ಆರ್.ಎಂ. ಲೋಧಾ ಶಿಫಾರಸುಗಳ ಅನ್ವಯ ರೂಪಿಸಿ, ಜಾರಿಗೊಳಿಸಲಾದ ನಿಯಮಾವಳಿಯ ಪರಿಷ್ಕರಣೆಗೆ ಕೋರಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮುಂದೂಡಿತು.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ, ಜಸ್ಟಿಸ್ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಅವರ ಪೀಠವು ಗುರುವಾರ ಈ ಮೇಲ್ಮನವಿಯ ವಿಚಾರಣೆ ನಡೆಸಲಿದೆ.

ಮಂಡಳಿಯ ಅಧ್ಯಕ್ಷ ಸೌರವ್ ಗಂಗೂಲಿ, ಕಾರ್ಯದರ್ಶಿ ಜಯ್ ಶಾ ಸೇರಿದಂತೆ ಇನ್ನೂ ಕೆಲವು ಪದಾಧಿಕಾರಿಗಳ ಅಧಿಕಾರಾವಧಿಯ ಕುರಿತು ಇರುವ ನಿಯಮವನ್ನು ಪರಿಷ್ಕರಿಸಬೇಕು ಎಂದು ಮನವಿ ಸಲ್ಲಿಸಲಾಗಿದೆ.

'ಪದಾಧಿಕಾರಿಗಳು ತಮ್ಮ ಅಧಿಕಾರದ ಅವಧಿಯು ಮುಗಿದಿದ್ದರೂ ಮುಂದುವರಿದಿದ್ದಾರೆ' ಎಂದು ಬಿಹಾರ ಕ್ರಿಕೆಟ್ ಸಂಸ್ಥೆ ಪರ ವಕೀಲರು ವಾದಿಸಿದರು.

ಬಾಲ್ ಬ್ಯಾಡ್ಮಿಂಟನ್: ಸಹನಾ ಆಯ್ಕೆ

ಬೆಂಗಳೂರು: ನಗರದ ಸಹನಾ ನರೇಶ್, ದಕ್ಷಿಣ ವಲಯ ಬಾಲ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.



ಸಹನಾ

ದಕ್ಷಿಣ ವಲಯ ಟೂರ್ನಿಯು ತಮಿಳುನಾಡಿನಲ್ಲಿ ಶುಕ್ರವಾರದಿಂದ ಜುಲೈ 24ರವರೆಗೆ ನಡೆಯಲಿದೆ.


ತೀವ್ರ ಕುತೂಹಲ ಕೆರಳಿಸಿದ್ದ ಚುನಾವಣೆ: ರಾನಿಲ್ ಪರ 134, ವಿರುದ್ಧವಾಗಿ 82 ಮತ

ಶ್ರೀಲಂಕಾ ಅಧ್ಯಕ್ಷರಾಗಿ ರಾನಿಲ್ ವಿಕ್ರಮಸಿಂಘೆ ಆಯ್ಕೆ

ಪ್ರಜಾವಾಣಿ ವಾರ್ತೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ನೂತನ ಅಧ್ಯಕ್ಷರಾಗಿ ರಾನಿಲ್ ವಿಕ್ರಮಸಿಂಘೆ ಬುಧವಾರ ಆಯ್ಕೆಯಾದರು. 225 ಸದಸ್ಯ ಬಲದ ಸಂಸತ್ತಿನಲ್ಲಿ ರಾನಿಲ್ ಅವರು 134, ಸಮೀಪದ ಪ್ರತಿಸ್ಪರ್ಧಿ ಡುಲ್ಲಾಸ್ ಅಲಹಪ್ಪೆರುಮ ಅವರು 82 ಮತ ಪಡೆದರು.

ಕಣದಲ್ಲಿದ್ದ ಮತ್ತೊಬ್ಬ ಅಭ್ಯರ್ಥಿ ಜನತಾ ವಿಮುಕ್ತಿ ಪೆರಮುನ ನಾಯಕ ಅನುರ ಕುಮಾರ ಡಿಸ್ಸಾನಾಯಕೆ 3 ಮತಗಳನ್ನಷ್ಟೇ ಪಡೆದರು. ತೀವ್ರ ಕುತೂಹಲ ಕೆರಳಿಸಿದ್ದ ಚುನಾವಣೆಯ ಫಲಿತಾಂಶವನ್ನು ಸ್ಪೀಕರ್ ಮಹಿಂದಾ ಯಪ ಅಬೆವರ್ದನಾ ಅವರು ಪ್ರಕಟಿಸಿದರು.



ರಾನಿಲ್ ವಿಕ್ರಮಸಿಂಘೆ

ಅವರು ಗುರುವಾರ ಪ್ರಮಾಣ ವಚನ ಸ್ವೀಕರಿಸುವರು. 'ನಾವಿನ್ನು ಭಿನ್ನಾಭಿಪ್ರಾಯ ಮರೆಯಬೇಕು. ದೇಶ ಸಂಕಷ್ಟದಲ್ಲಿದೆ.ಯುವಜನರು ಬದಲಾವಣೆ ನಿರೀಕ್ಷೆಯಲ್ಲಿದ್ದಾರೆ. ಅಭಿವೃದ್ಧಿ ಕುರಿತು ಎಲ್ಲರ ಜೊತೆಗೆ ಚರ್ಚಿಸಲು ನಾನು ಮುಕ್ತನಿದ್ದೇನೆ' ಎಂದು ರಾನಿಲ್ ಹೇಳಿದರು.

ದೇಶದ ಇತಿಹಾಸದಲ್ಲೇ ಇದೇ ಪ್ರಥಮ ಬಾರಿಗೆ ಸಂಸತ್ತಿನ ಸದಸ್ಯರು ಮತದಾನದ ಮೂಲಕ ಅಧ್ಯಕ್ಷರನ್ನು ಆಯ್ಕೆ ಮಾಡಿದರು. 73 ವರ್ಷದ ರಾನಿಲ್ ಅವರು ಐದು ದಶಕಗಳ ಆಡಳಿತ ಅನುಭವ ಹೊಂದಿದ್ದು, ಆರು ಬಾರಿ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ.

ದೇಶದದಲ್ಲಿ ಸರ್ಕಾರ ವಿರುದ್ಧದ ಜನಾಕ್ರೋಶಕ್ಕೆ ಮಣಿದು ಅಧ್ಯಕ್ಷ ಗೊಟಬಯ ರಾಜಪಕ್ಸ ರಾಜೀನಾಮೆ ನೀಡಿದ್ದರು. ತೆರವಾದ ಸ್ಥಾನಕ್ಕೆ ಉಳಿದ ಅವಧಿಗೆ ಚುನಾವಣೆ ನಡೆದಿದೆ. ಅಧ್ಯಕ್ಷರಾಗಿ ರಾನಿಲ್ ಅವರ ಅಧಿಕಾರವಧಿ ನವೆಂಬರ್ 2024ರಲ್ಲಿ ಅಂತ್ಯವಾಗಲಿದೆ.

ರಾನಿಲ್ ವಿಕ್ರಮಸಿಂಘೆ ಈ ವರ್ಷದ ಮೇ ತಿಂಗಳಲ್ಲಿ ಪ್ರಧಾನಿಯಾಗಿ ನೇಮಕಗೊಂಡಿದ್ದರು. ಬಳಿಕ ಹಂಗಾಮಿ ಅಧ್ಯಕ್ಷರಾಗಿ ಜು.13ರಂದು ಅಧಿಕಾರ ಸ್ವೀಕರಿಸಿದ್ದರು.ಆಗಸ್ಟ್ 2020ರಲ್ಲಿ ನಡೆದಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಇವರ ನೇತೃತ್ವದ ಸಂಯುಕ್ತ ರಾಷ್ಟ್ರೀಯ ಪಕ್ಷ(ಯುಎನ್‌ಪಿ) ಒಂದು ಸ್ಥಾನ ಗೆಲ್ಲದೇ ಹೀನಾಯ ಸೋಲುಕಂಡಿತ್ತು.

ಸಂಸದರ ಮೇಲೆ ಪ್ರಭಾವ; ವರದಿ ಅಲ್ಲಗಳೆದ ಭಾರತ

ಕೊಲಂಬೊ (ಪಿಟಿಐ): ಶ್ರೀಲಂಕಾದ ನೂತನ ಅಧ್ಯಕ್ಷರ ಆಯ್ಕೆಯಲ್ಲಿ ಸಂಸದರ ಮೇಲೆ ಭಾರತ ಪ್ರಭಾವ ಬೀರಿದೆ ಎಂಬ ಮಾಧ್ಯಮ ವರದಿಗಳನ್ನು 'ಆಧಾರರಹಿತ ಮತ್ತು ಕೇವಲ ವದಂತಿ' ಎಂದು ಭಾರತ ತಳ್ಳಿಹಾಕಿದೆ.

ಇದೇ ವೇಳೆ ದೇಶದ ಆರ್ಥಿಕ ಸ್ಥಿರತೆ ಮತ್ತು ಚೇತರಿಕೆಗೆ ಭಾರತ ಅಗತ್ಯ ಬೆಂಬಲ ನೀಡಲಿದೆ ಎಂದು ಭರವಸೆ ನೀಡಿದೆ.

ಯಾವುದೇ ದೇಶದ ಆಂತರಿಕ ವ್ಯವಹಾರ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಲ್ಲಿ ಭಾರತ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ. ಈ ಕುರಿತು ಭಾರತದ ರಾಯಭಾರ ಕಚೇರಿಯು ಸರಣಿ ಟ್ವೀಟ್ ಮಾಡಿದೆ. 'ಭಾರತ ಪ್ರಭಾವ ಬೀರಿದೆ ಎಂಬರ್ಥದ ವರದಿಗಳು ಆಧಾರರಹಿತ. ಭಾರತ ಅದನ್ನು ಬಲವಾಗಿ ಅಲ್ಲಗಳೆಯಲಿದೆ. ಭಾರತವು ಎಂದಿಗೂ ಶ್ರೀಲಂಕಾದ ಜನರ ಆಶೋತ್ತರಗಳಿಗೆ ಬೆಂಬಲಿಸಲಿದೆ' ಎಂದು ಟ್ವೀಟ್‌ನಲ್ಲಿ ಹೇಳಿದೆ.

ಅಂತಿಮ ಸ್ಪರ್ಧೆ: ಸುನಕ್ ಸ್ಥಾನ ಭದ್ರ

ಬ್ರಿಟನ್ ಪ್ರಧಾನಿ: ಕಣದಲ್ಲಿ ಉಳಿದ ಮತ್ತೊಬ್ಬ ಅಭ್ಯರ್ಥಿ ಟ್ರಸ್

ಲಂಡನ್ (ಪಿಟಿಐ): ಭಾರತ ಮೂಲದ ರಿಷಿ ಸುನಕ್ ಅವರು ಬುಧವಾರ ನಡೆದ ಅಂತಿಮ ಹಾಗೂ ಐದನೇ ಸುತ್ತಿನ ಮತದಾನದಲ್ಲಿ 137 ಮತಗಳನ್ನು ಪಡೆದಿದ್ದಾರೆ. ಆ ಮೂಲಕ ಟೋರಿ ಪಕ್ಷದ ಮುಖ್ಯಸ್ಥ ಹಾಗೂ ಬ್ರಿಟನ್‌ನ ಪ್ರಧಾನಿ ಹುದ್ದೆಗೆ ನಡೆಯುವ ಸ್ಪರ್ಧೆಯಲ್ಲಿ ತಮ್ಮ ಸ್ಥಾನವನ್ನು ಭದ್ರ ಪಡಿಸಿಕೊಂಡಿದ್ದಾರೆ.

113 ಮತಗಳನ್ನು ಪಡೆಯುವ ಮೂಲಕ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಅವರು ಪ್ರಧಾನಿ ಹುದ್ದೆಯ ಸ್ಪರ್ಧಾಕಣದಲ್ಲಿ ಉಳಿದಿರುವ ಎರಡನೇ ಅಭ್ಯರ್ಥಿಯಾಗಿದ್ದಾರೆ. 105 ಮತಗಳಿಂದ ಮೂರನೇ ಸ್ಥಾನ ಪಡೆದ ಪೆನಿ ಮೊರ್ಡಾಂಟ್ ಅವರು ಸ್ಪರ್ಧೆಯಿಂದ ಹೊರ ಬಿದ್ದಿದ್ದಾರೆ.



ಈ ವರೆಗೆ ನಡೆದ ಎಲ್ಲ ಸುತ್ತುಗಳಲ್ಲಿಯೂ ಸುನಕ್ ಅವರು ತಮ್ಮ ಮತ ಗಳಿಕೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಮುನ್ನಡೆ ಸಾಧಿಸಿದರು. ಮಂಗಳವಾರ 19 ಮತಗಳನ್ನು ಪಡೆದು ತಮ್ಮ ಒಟ್ಟು ಮತಗಳಿಕೆಯನ್ನು 118ಕ್ಕೆ ಹೆಚ್ಚಿಸಿಕೊಂಡರು. ಬುಧವಾರ 137 ಮತಗಳನ್ನು ಪಡೆದ ಅವರು, ಅಂತಿಮ ಕಣದಲ್ಲಿ ಉಳಿಯಲು ಅಗತ್ಯ ಇರುವ 120 ಮತಗಳ ಗಡಿಯನ್ನು ದಾಟಿದರು.

ಬಿಬಿಸಿ ಸೋಮವಾರ ಚರ್ಚೆ ಆಯೋಜಿಸಿದ್ದು, ನೇರ ಪ್ರಸಾರವಾಗಲಿದೆ. ಈ ಚರ್ಚೆಯಲ್ಲಿ ರಿಷಿ ಸುನಕ್ ಹಾಗೂ ಟ್ರಸ್ ಅವರು ಮುಖಾಮುಖಿಯಾಗಲಿದ್ದಾರೆ.

ರಷ್ಯಾ ಸೇನೆಯ ಸಂಚಾರಕ್ಕೆ ತೊಡಕು

ಕೀವ್, ಉಕ್ರೇನ್ (ಎ.ಪಿ): ರಷ್ಯಾ ಆಕ್ರಮಿತ ದಕ್ಷಿಣ ಉಕ್ರೇನ್‌ನಲ್ಲಿ ಸೇನೆಯ ಜಮಾವಣೆ, ಸಂಚಾರಕ್ಕೆ ಬಳಕೆಯಾಗುತ್ತಿದ್ದ ಪ್ರಮುಖ ಸೇತುವೆಯನ್ನು ಉಕ್ರೇನ್ ಸೇನೆ ಜಖಂಗೊಳಿಸಿದೆ.

ರಷ್ಯಾ ನಿಯಂತ್ರಣದಲ್ಲಿರುವ ಕೇರ್ಸನ್ ಪ್ರಾಂತ್ಯದಲ್ಲಿ ರಷ್ಯಾ ಬೆಂಬಲಿತ ಆಡಳಿತದ ಉಪ ಮುಖ್ಯಸ್ಥ ಕಿರಿಲ್ ಈ ಅಂಶವನ್ನು ದೃಢಪಡಿಸಿದ್ದಾರೆ. ಡ್ನೀಪರ್ ನದಿಗೆ ನಿರ್ಮಿಸಲಾಗಿದ್ದ ಅಂಟೊನಿವ್‌ಸ್ಕಿ ಸೇತುವೆ ಕ್ಷಿಪಣಿ ದಾಳಿಯಿಂದ ಹಾನಿಗೊಂಡಿದೆ ಎಂದಿದ್ದಾರೆ.

ಉಕ್ರೇನ್ ಪಡೆಗಳು ಈ ದಾಳಿ ನಡೆಸಲು ಅಮೆರಿಕವು ಪೂರೈಸಿದ್ದ ಹಿಮಾರ್ಸ್ ಬಹುಪಯೋಗಿ ರಾಕೆಟ್ ಉಡಾವಣಾ ವಾಹಕ ಬಳಸಿದೆ. ಸೇತುವೆಯಲ್ಲಿ ಸದ್ಯ ಸಂಚಾರವನ್ನು ಬಂದ್ ಮಾಡಲಾಗಿಲ್ಲ. ಆದರೆ ಪರಿಸ್ಥಿತಿಯು ಗಂಭೀರವಾಗಿದೆ ಎಂದೂ ತಿಳಿಸಿದ್ದಾರೆ.

ಬಾಲಕ ಸಾವು: ಈ ಮಧ್ಯೆ ರಷ್ಯಾದ ಶೆಲ್ ದಾಳಿಯಿಂದ ಸಲ್‌ಟಿವ್ಕಾ ನಗರದಲ್ಲಿ ಬಸ್ ನಿಲುಗಡೆ ಸ್ಥಳವು ಧ್ವಂಸವಾಗಿದ್ದು, ಬಾಲಕನೊಬ್ಬ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಉಕ್ರೇನ್ ಜೊತೆ ಬಾಂಧವ್ಯ ಕಡಿತ: ಉಕ್ರೇನ್ ಜೊತೆಗಿನ ಎಲ್ಲ ರಾಜತಾಂತ್ರಿಕ ಬಾಂಧವ್ಯವನ್ನು ಕಡಿದುಕೊಳ್ಳಲಾಗುವುದು ಎಂದು ಸಿರಿಯಾ ಬುಧವಾರ ಪ್ರಕಟಿಸಿದೆ. ಉಕ್ರೇನ್ ಕೈಗೊಂಡಿದ್ದ ಕ್ರಮಕ್ಕೆ ಪ್ರತಿಕ್ರಿಯೆಯಾಗಿ ಈ ನಿಲುವು ತಳೆಯಲಾಗಿದೆ ಎಂದು ಸಿರಿಯಾದ ವಿದೇಶಾಂಗ ಸಚಿವಾಲಯವು ಹೇಳಿಕೆಯನ್ನು ನೀಡಿದೆ.

ಶಿವಸೇನಾ ಬಂಡಾಯ: ಅರ್ಜಿ 'ಸುಪ್ರೀಂ'ನ ವಿಸ್ತೃತ ಪೀಠಕ್ಕೆ

ನವದೆಹಲಿ (ಪಿಟಿಐ): ಶಿವಸೇನಾ ಮತ್ತು ಅದರ ಬಂಡಾಯ ಶಾಸಕರು ಸಲ್ಲಿಸಿರುವ ಅರ್ಜಿಯಲ್ಲಿ ಪಕ್ಷಾಂತರ, ವಿಲೀನ ಮತ್ತು ಅನರ್ಹತೆಗೆ ಸಂಬಂಧಿಸಿದಂತೆ ಹಲವು ಸಾಂವಿಧಾನಿಕ ಪ್ರಶ್ನೆಗಳು ಇರುವ ಕಾರಣ ಅದರ ವಿಚಾರಣೆಯು ಹೆಚ್ಚು ನ್ಯಾಯಮೂರ್ತಿಗಳಿರುವ ವಿಸ್ತೃತ ಪೀಠದಲ್ಲಿ ನಡೆಯುವುದು ಸೂಕ್ತ ಎಂದು ಸುಪ್ರೀಂಕೋರ್ಟ್ ಬುಧವಾರ ಅಭಿಪ್ರಾಯಪಟ್ಟಿದೆ.

ವಿಸ್ತೃತ ಪೀಠದಲ್ಲಿ ಈ ವಿಷಯಗಳ ವಿಚಾರಣೆ ಆಗಬೇಕು ಎಂಬುದಕ್ಕೆ ಪೂರಕವಾಗಿ ವಿಷಯಗಳನ್ನು ರೂಪಿಸಿ ಇದೇ 27ರೊಳಗೆ ಸಲ್ಲಿಸುವಂತೆ ನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಅವರ ಪೀಠವು ಕಕ್ಷಿದಾರರಿಗೆ ನಿರ್ದೇಶಿಸಿತು.

'ಕಕ್ಷಿದಾರರ ಪರ ವಕೀಲರ ವಾದಗಳನ್ನು ಆಲಿಸಿದ ನ್ಯಾಯಪೀಠವು, ಈ ವಿಷಯಗಳನ್ನು ವಿಸ್ತೃತ ಪೀಠಕ್ಕೆ ರವಾನಿಸುವುದು ಸೂಕ್ತ. ಅದಕ್ಕೆ ಪೂರಕವಾಗಿ ವಿಷಯಗಳನ್ನು ಸಿದ್ಧಪಡಿಸಿ ಮುಂದಿನ ಬುಧವಾರದೊಳಗೆ ಸಲ್ಲಿಸಿ. ಈ ಕುರಿತ ವಿಚಾರಣೆಯನ್ನು ಆಗಸ್ಟ್ 1 ರಂದು ನಡೆಸಲಾಗುವುದು' ಎಂದು ಪೀಠ ಹೇಳಿತು.

ಚಿಹ್ನೆ ಹಂಚಿಕೆ ಕೋರಿ ಚುನಾವಣಾ ಆಯೋಗಕ್ಕೆ ಪತ್ರ

ನವದೆಹಲಿ (ಪಿಟಿಐ): ಪಕ್ಷದ ಚಿಹ್ನೆಯನ್ನು (ಬಿಲ್ಲು ಮತ್ತು ಬಾಣ) ತಮ್ಮ ಬಣಕ್ಕೇ ಹಂಚಿಕೆ ಮಾಡಬೇಕು ಎಂದು ಕೋರಿ ಚುನಾವಣಾ ಆಯೋಗಕ್ಕೆ ಶಿವಸೇನಾದ ಏಕನಾಥ ಶಿಂದೆ ಬಣವು ಮನವಿ ಮಾಡಿದೆ.

ಈ ಸಂಬಂಧ ಆಯೋಗಕ್ಕೆ ಶಿಂದೆ ಬಣ ಪತ್ರ ಬರೆದಿದೆ.

ಇಂದು ಸೋನಿಯಾ ಇ.ಡಿ ಎದುರು ಹಾಜರು?

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಗುರುವಾರ ವಿಚಾರಣೆಗೆ ಹಾಜರಾಗಲು ಸೂಚಿಸಿದ್ದಾರೆ.

ಇ.ಡಿ ವಿಚಾರಣೆ ಖಂಡಿಸಿ ನವದೆಹಲಿಯಲ್ಲಿ ಕಾಂಗ್ರೆಸ್ ವತಿಯಿಂದ ಪ್ರತಿಭಟನೆಗಳು ನಡೆಯುವ ಸಾಧ್ಯತೆ ಇದೆ.

'ಒಂದೆಡೆ ಸಂಸತ್‌ನ ಅಧಿವೇಶನ ನಡೆಯುತ್ತಿದೆ. ವಿವಿಧೆಡೆ ಕಾಂಗ್ರೆಸ್ ಪ್ರತಿಭಟನೆ ನಡೆಸಲು ಉದ್ದೇಶಿಸಿದೆ. ಈ ಹಿನ್ನೆಲೆಯಲ್ಲಿ ಸಂಚಾರ ದಟ್ಟಣೆ ಉಂಟಾಗಲಿದ್ದು, ಪರ್ಯಾಯ ಮಾರ್ಗಗಳನ್ನು ಗುರುತಿಸಲಾಗಿದೆ. ವ್ಯಾಪಕ ಭದ್ರತಾ ವ್ಯವಸ್ಥೆಯನ್ನು ಮಾಡಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಕಾಂಗ್ರೆಸ್ ಕಚೇರಿ ಬಳಿಯ ಕೆಲ ರಸ್ತೆಗಳಲ್ಲಿ ಸಂಚಾರ ನಿರ್ಬಂಧಿಸಲಾಗಿದೆ' ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೀಟ್– ಸಮಿತಿ ರಚನೆ: 4 ವಾರಗಳಲ್ಲಿ ವರದಿ ಸಲ್ಲಿಕೆ

ನವದೆಹಲಿ(ಪಿಟಿಐ): ನೀಟ್ ಪರೀಕ್ಷೆ ಬರೆಯುವ ಮುನ್ನ ವಿದ್ಯಾರ್ಥಿನಿಯೊಬ್ಬರ ಒಳ ಉಡುಪು ತೆಗೆಸಿದ ಪ್ರಕರಣ ಪರಿಶೀಲಿಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ರಚಿಸಿರುವ ಮೂವರು ಸದಸ್ಯರ ಸಮಿತಿ ನಾಲ್ಕು ವಾರಗಳಲ್ಲಿ ವರದಿ ಸಲ್ಲಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಎನ್‌ಟಿಎ ನಿರ್ದೇಶಕರಾದ ಸಾಧನಾ ಪರಾಶರ, ಕೇರಳದ ಸರಸ್ವತಿ ವಿದ್ಯಾಲಯದ ಪ್ರಾಂಶುಪಾಲರಾದ ಅರಪ್ಪುರ ಶೈಲಜಾ ಮತ್ತು ಪ್ರಗತಿ ಅಕಾಡೆಮಿಯ ಸುಚಿತ್ರಾ ಶೈಜಿಂತ್ ಅವರು ಸಮಿತಿಯಲ್ಲಿದ್ದಾರೆ. ಸಮಿತಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಸಂಬಂಧಪಟ್ಟವರ ಜತೆ ಚರ್ಚಿಸಿ, ವಿಷಯದ ಬಗ್ಗೆ ಸತ್ಯಾಸತ್ಯತೆ ಪರಿಶೀಲಿಸಲಿದೆ.

'ಸಂಬಂಧಿಸಿದ ಎಲ್ಲರೊಂದಿಗೆ ಮಾತನಾಡಿದ ಬಳಿಕ ಸಮಿತಿಯು ಸ್ಥಳಕ್ಕೆ ಭೇಟಿ ನೀಡಿ ವಾಸ್ತವಾಂಶ ಪರಿಶೀಲಿಸಲಿದೆ. ಎನ್‌ಟಿಎ ಭದ್ರತೆ, ಶಿಷ್ಟಾಚಾರಗಳು, ನಿಷೇಧಿತ ವಸ್ತುಗಳು, ವಸ್ತ್ರ ಸಂಹಿತೆ ಹಾಗೂ ನಗರ ಸಂಯೋಜಕರು, ಕೇಂದ್ರದ ಅಧೀಕ್ಷಕರು, ವೀಕ್ಷಕರು ಮಾರ್ಗಸೂಚಿ ಅನುಸರಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಲಿದೆ. ಸಮಿತಿಯು ಅಗತ್ಯ ಶಿಫಾರಸುಗಳನ್ನು ಮಾಡಲಿದೆ' ಎಂದು ಎನ್‌ಟಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.


ಪಳನಿಸ್ವಾಮಿ ಸ್ವಾಧೀನಕ್ಕೆ ಕಚೇರಿ

ಚೆನ್ನೈ (ಪಿಟಿಐ): ಎಐಎಡಿಎಂಕೆ ಕೇಂದ್ರ ಕಚೇರಿಯ ಬೀಗದ ಕೀಲಿಕೈಯನ್ನು ಪಕ್ಷದ ಅಧ್ಯಕ್ಷ ಕೆ.ಪಳನಿಸ್ವಾಮಿ ಅವರಿಗೆ ಒಪ್ಪಿಸಬೇಕು ಎಂದು ಮದ್ರಾಸ್ ಹೈಕೋರ್ಟ್ ಬುಧವಾರ ಹೇಳಿದೆ.

ಪಕ್ಷದ ಕೇಂದ್ರ ಕಚೇರಿ 'ಎಂಜಿಆರ್ ಮಾಳಿಗೈ'ಯನ್ನು ತಮ್ಮ ವಶಕ್ಕೆ ನೀಡಬೇಕು ಎಂದು ಒ.ಪನ್ನೀರಸೆಲ್ವಂ ಅವರು ಸಲ್ಲಿಸಿದ್ದ ಅರ್ಜಿಯನ್ನು ಪೀಠ ವಜಾ ಮಾಡಿದೆ.

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: 1500 ಮೀಟರ್ಸ್‌ನಲ್ಲಿ ವೈಟ್‌ಮನ್ ಮಿಂಚು

400 ಮೀ. ಹರ್ಡಲ್ಸ್: ಅಲಿಸನ್‌ಗೆ ಚಿನ್ನ



ಗುರಿಯತ್ತ ಮುನ್ನುಗ್ಗಿದ ಅಲಿಸನ್ ಡಾಸ್ ಸ್ಯಾಂಟೊಸ್ (ಮಧ್ಯೆ)– ಎಎಫ್‌ಪಿ ಚಿತ್ರ

ಯೂಜೀನ್, ಅಮೆರಿಕ (ಎಎಫ್‌ಪಿ/ ರಾಯಿಟರ್ಸ್): ಫೆವರೀಟ್ ಅಥ್ಲೀಟ್ ಕರ್ಸ್ಟನ್ ವರೋಮ್ ಅವರ ಸವಾಲು ಮೀರಿದ ಬ್ರೆಜಿಲ್‌ನ ಅಲಿಸನ್ ಡಾಸ್ ಸ್ಯಾಂಟೊಸ್ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಪುರುಷರ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಅವರು 46.29 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ ಅಲಿಸನ್ ಅವರು 1993ರಲ್ಲಿ ಅಮೆರಿಕದ ಕೆವಿನ್ ಯಂಗ್ (47.18 ಸೆ.), ಜರ್ಮನಿಯ ಸ್ಟುಟ್‌ಗಾರ್ಟ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಥಾಪಿಸಿದ್ದ ಕೂಟ ದಾಖಲೆಯನ್ನು ಅಳಿಸಿಹಾಕಿದರು. ಅಲ್ಲದೆ ಮೂರನೇ ಸಾರ್ವಕಾಲಿಕ ಶ್ರೇಷ್ಠ ಸಾಧನೆ ದಾಖಲಿಸಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದ ನಾರ್ವೆಯ ಕರ್ಸ್ಟನ್ ಇಲ್ಲಿ 48.42 ಸೆಕೆಂಡುಗಳಲ್ಲಿ ಗುರಿ ತಲುಪಿ ಏಳನೇ ಸ್ಥಾನಕ್ಕೆ ಸಮಾಧಾನಪಡಬೇಕಾಯಿತು. ಅವರು ಗಾಯದಿಂದ ಚೇತರಿಸಿಕೊಂಡು ಇಲ್ಲಿ ಕಣಕ್ಕಿಳಿದಿದ್ದರು. ಅಮೆರಿಕದ ರಾಯ್ ಬೆಂಜಮಿನ್ (46.89 ಸೆ.) ಮತ್ತು ಟ್ರೆವರ್ ಬಾಸಿಟ್ (47.39) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಒಲಿಂಪಿಕ್ ಚಾಂಪಿಯನ್‌ಗೆ ವೈಟ್‌ಮನ್ ಆಘಾತ: ಸ್ಕಾಟ್ಲೆಂಡ್‌ನ ಜೇಕ್ ವೈಟ್‌ಮನ್ ಅವರು ಒಲಿಂಪಿಕ್ ಚಾಂಪಿಯನ್, ನಾರ್ವೆಯ ಜೇಕಬ್ ಇಂಗಬ್ರಿಸನ್ ಅವರನ್ನು ಹಿಂದಿಕ್ಕಿ ಪುರುಷರ 1500 ಮೀಟರ್ಸ್ ವಿಭಾಗದಲ್ಲಿ ಅಗ್ರಸ್ಥಾನ ಗಳಿಸಿದರು.

ವೈಟ್‌ಮನ್ 3 ನಿಮಿಷ 29.23 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇಂಗಬ್ರಿಸನ್ (3 ನಿ. 29.47 ಸೆ.) ಬೆಳ್ಳಿ ಮತ್ತು ಸ್ಪೇನ್‌ನ ಮೊಹಮ್ಮದ್ ಕತಿರ್ (3 ನಿ. 29. 90 ಸೆ.) ಕಂಚು ಜಯಿಸಿದರು. ವೈಟ್‌ಮನ್ ಅವರ ತಂದೆ ಜೆಫ್ ಈ ಚಾಂಪಿಯನ್‌ಷಿಪ್‌ನಲ್ಲಿ ಕಮೆಂಟೇಟರ್ ಆಗಿದ್ದಾರೆ.

ಎಲೆನೊರ್‌ಗೆ ಹೈಜಂಪ್ ಚಿನ್ನ: ಆಸ್ಟ್ರೇಲಿಯಾದ ಎಲೆನೊರ್ ಪ್ಯಾಟರ್ಸನ್ ಅವರು ಮಹಿಳೆಯರ ಹೈಜಂಪ್‌ನಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡರು. ಫೈನಲ್‌ನಲ್ಲಿ ಅವರು 2.02 ಮೀಟರ್ಸ್ ಸಾಧನೆ ಮಾಡಿದರು.

ಉಕ್ರೇನ್‌ನ ಯರೋಸ್ಲಾವ್ ಮಹುಚಿಕ್ ಬೆಳ್ಳಿ ಮತ್ತು ಇಟಲಿಯ ಎಲೆನಾ ವಲ್ಲೊರ್ಟಿಗಾರ ಕಂಚು ಜಯಿಸಿದರು.

ಪುರುಷರ ಡಿಸ್ಕಸ್ ಥ್ರೊನಲ್ಲಿ ಸ್ಲೊವೇನಿಯಾದ ಕ್ರಿಸ್ಟಿಯನ್ ಸೆಹ್ (71.13 ಮೀ.) ಚಿನ್ನ ಗೆದ್ದರು. ಲಿಥುವೇನಿಯಾದ ಮಿಕೊಲಸ್ ಅಲೆಕ್ನಾ (69. 27 ಮೀ.) ಮತ್ತು ಆ್ಯಂಡ್ರಿಯಸ್ ಗುಜಿಯಸ್ (67.55 ಮೀ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಮುಖ್ಯಾಂಶಗಳು

- ಒಲಿಂಪಿಕ್ ಚಾಂಪಿಯನ್ ಕರ್ಸ್ಟನ್ ವರೋಮ್‌ಗೆ ಆಘಾತ ನೀಡಿದ ಅಲಿಸನ್
- ಮಹಿಳೆಯರ ಹೈಜಂಪ್‌ನಲ್ಲಿ ಚಿನ್ನ ಗೆದ್ದ ಆಸ್ಟ್ರೇಲಿಯಾದ ಎಲೆನೊರ್
- ಡಿಸ್ಕಸ್ ಥ್ರೊನಲ್ಲಿ ಕ್ರಿಸ್ಟಿಯನ್ ಮಿಂಚು

ಕಾಮನ್‌ವೆಲ್ತ್ ಕ್ರೀಡಾಕೂಟ: ಪ್ರಧಾನಿ ಮೋದಿ ಸಂವಾದ

ಸಾಧನೆಯ ಕಥೆ ಬಿಚ್ಚಿಟ್ಟ ಅಥ್ಲೀಟ್‌ಗಳು



ಪ್ರಧಾನಿ ನರೇಂದ್ರ ಮೋದಿ ವಿಡಿಯೊ ಸಂವಾದ ನಡೆಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 'ಹತ್ತು ವರ್ಷಗಳ ಹಿಂದೆ ಭಾರತೀಯ ಸೇನೆಯನ್ನು ಸೇರಿದೆ. ಆಗ ನನ್ನ ತೂಕ 74 ಕೆ.ಜಿ. ಇತ್ತು. ಕ್ರೀಡೆಯಲ್ಲಿ ಭಾಗವಹಿಸಿ ತೂಕ ಕಡಿಮೆ ಮಾಡಿಕೊಂಡು ಫಿಟ್ ಆಗಲು ನಾನಿದ್ದ ತುಕಡಿಯಲ್ಲಿ ಎಲ್ಲರೂ ಪ್ರೋತ್ಸಾಹಿಸಿದರು. ತರಬೇತಿಗಾಗಿ ಹೆಚ್ಚುವರಿ ಸಮಯ ನೀಡುತ್ತಿದ್ದರು. ಮೂರ್ನಾಲ್ಕು ತಿಂಗಳಲ್ಲಿ ಸುಮಾರು ಇಪ್ಪತ್ತು ಕೆಜಿ ತೂಕ ಕಳೆದುಕೊಂಡೆ. ಅಲ್ಲಿಂದ ಓಟವೇ ನನ್ನ ಉಸಿರಾಯಿತು'

3000 ಮೀಟರ್ಸ್ ಸ್ಟೀಪಲ್ ಚೇಸ್ ಅಥ್ಲೀಟ್ ಅವಿನಾಶ್ ಸಬ್ಳೆ ತಾವು ಕ್ರೀಡಾಲೋಕಕ್ಕೆ ಕಾಲಿಟ್ಟ ಕಥೆಯನ್ನು ಬಿಚ್ಚಿಟ್ಟರು. ಇದೇ 28ರಿಂದ ಬರ್ಮಿಂಗ್ ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್ ವೆಲ್ತ್ ಕ್ರೀಡಾಕೂಟದಲ್ಲಿ ಅವರು ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗಿನ ವಿಡಿಯೊ ಸಂವಾದದಲ್ಲಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಪ್ರಧಾನಿ ಮೋದಿ 'ನಿಮ್ಮ ಮುಂದೆ ಎದುರಾಳಿಗಳೇ ಇಲ್ಲ ಎಂಬ ಗಟ್ಟಿ ಮನೋಬಲದೊಂದಿಗೆ ಮುನ್ನುಗ್ಗಿ' ಎಂದು ಕರೆ ನೀಡಿದರು.

'ನಿಮ್ಮ ಜೀವನದಲ್ಲಿ ಎದುರಾದ ಅಡೆತಡೆಗಳನ್ನು ಮೀರಿ ನಿಂತಿದ್ದು ಹೇಗೆ' ಎಂದು ಪ್ರಧಾನಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ 27 ವರ್ಷದ ಅವಿನಾಶ್, 'ಸ್ಟೀಪಲ್ ಚೇಸ್ ಸ್ಪರ್ಧೆ ಯಲ್ಲಿ ಅಡೆತಡೆಗಳು ಹೆಚ್ಚು. ಆದರೆ ನಾನು ಸೇನೆಯಲ್ಲಿ ಪಡೆದ ಕಠಿಣ ತರಬೇತಿ ಯಿಂದಾಗಿ ಈ ಕ್ರೀಡೆಯಲ್ಲಿ ಯಶಸ್ಸು ಸಾಧಿಸಲು ಸಾಧ್ಯವಾಗುತ್ತಿದೆ' ಎಂದರು.

ಈ ಸಂದರ್ಭದಲ್ಲಿ ಹಾಜರಿದ್ದ ಸೈಕ್ಲಿಸ್ಟ್ ಡೇವಿಡ್ ಬೆಕಮ್ ಅವರನ್ನುದ್ದೇಶಿಸಿ ಮೋದಿಯವರು, 'ವೃತ್ತಿಪರ ಫುಟ್‌ಬಾಲ್ ಆಡಿದ್ದೀರಾ. ನಿಮ್ಮ ಸಹಕ್ರೀಡಾಪಟು ರೊನಾಲ್ಡೊ ಸಿಂಗ್ ಅವರೊಂದಿಗೆ ಫುಟ್‌ಬಾಲ್ ಆಡಿದ್ದೀರಾ' ಎಂದರು.

ಅದಕ್ಕೆ ಪ್ರತಿಕ್ರಿಯಿಸಿದ ಡೇವಿಡ್, 'ನಾವು ಫುಟ್‌ಬಾಲ್ ಆಡಿಲ್ಲ. ನಮ್ಮ ಬಹುಪಾಲು ಸಮಯವು ಟ್ರ್ಯಾಕ್‌ನಲ್ಲಿ ಸೈಕ್ಲಿಂಗ್ ಅಭ್ಯಾಸದಲ್ಲಿಯೇ ಕಳೆದುಹೋಗುತ್ತದೆ' ಎಂದರು.

ಅಂಡಮಾನ್ ಮತ್ತು ನಿಕೊಬಾರ್ ದ್ವೀಪದ ಡೇವಿಡ್ ಅವರ ತಂದೆ 2004ರ ಸುನಾಮಿಯಲ್ಲಿ ಮೃತಪಟ್ಟಿದ್ದರು. ಅದಾಗಿ ಒಂದು ವರ್ಷದ ನಂತರ ತಾಯಿ ಕೂಡ ನಿಧನರಾಗಿದ್ದರು. ಬಹಳಷ್ಟು ಸವಾಲುಗಳನ್ನು ಮೆಟ್ಟಿ ನಿಂತು ಸೈಕ್ಲಿಂಗ್‌ನಲ್ಲಿ ಛಾಪು ಮೂಡಿಸಿರುವ ಡೇವಿಡ್ ಸಾಧನೆಯನ್ನು ಮೋದಿ ಶ್ಲಾಘಿಸಿದರು.

34ನೇ ವಯಸ್ಸಿನಲ್ಲಿ ಕ್ರೀಡೆಗೆ ಕಾಲಿಟ್ಟ ಪ್ಯಾರಾ ಶಾಟ್‌ಪಟ್ ಅಥ್ಲೀಟ್ ಶರ್ಮಿಳಾ, 'ನಮ್ಮದು ಬಡ ಕುಟುಂಬ, ಅಮ್ಮ ಅಂಧೆಯಾಗಿದ್ದರು. ನಾವು ಮೂವರು ಅಕ್ಕತಂಗಿಯರು ಮತ್ತು ಒಬ್ಬ ಸಹೋದರ ಇದ್ದ ಕುಟುಂಬ. ಸಣ್ಣ ವಯಸ್ಸಿನಲ್ಲಿಯೇ ನನಗೆ ಮದುವೆ ಮಾಡಿದರು. ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಆದರೆ, ನಾವು ಮೂವರೂ ಬಹಳಷ್ಟು ಕಿರುಕುಳ ಅನುಭವಿಸಿದೆವು. ಆಗ ನನ್ನ ತವರುಮನೆಯವರು ಮರಳಿ ಕರೆದುಕೊಂಡು ಬಂದರು. ಸಂಬಂಧಿಕರೊಬ್ಬರ ಸಹಕಾರದಿಂದ ಕ್ರೀಡೆಗೆ ಬಂದೆ. ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದೆ' ಎಂದರು.

'ಶರ್ಮಿಳಾ ಅವರ ಸಾಧನೆ ಎಲ್ಲರಿಗೂ ಸ್ಫೂರ್ತಿದಾಯಕ' ಎಂದು ಮೋದಿ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಬ್ಯಾಡ್ಮಿಂಟನ್ ತಾರೆಯರಾದ ಪಿ.ವಿ.ಸಿಂಧು, ಕಿದಂಬಿ ಶ್ರೀಕಾಂತ್ ಮತ್ತು ಲಕ್ಷ್ಯ ಸೇನ್, ವೇಟ್‌ಲಿಫ್ಟರ್ ಮೀರಾಬಾಯಿ ಚಾನು, ಹಾಕಿ ಗೋಲ್‌ಕೀಪರ್ ಸವಿತಾ ಪೂನಿಯಾ, ಕುಸ್ತಿಪಟು ಸಾಕ್ಷಿ ಮಲಿಕ್, ಬಾಕ್ಸರ್ ಶಿವ ಥಾಪಾ, ಸುಮಿತ್, ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್, ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಐಒಎ ಹಂಗಾಮಿ ನಾಯಕ ಅನಿಲ್ ಖನ್ನಾ, ಮಹಾಕಾರ್ಯದರ್ಶಿ ರಾಜೀವ್ ಮೆಹ್ತಾ ಹಾಜರಿದ್ದರು.



ಅಬ್ದುಲ್ಲಾ ಶಫೀಕ್– ಎಎಫ್‌ಪಿ ಚಿತ್ರ

ಶಫೀಕ್ ಮಿಂಚು: ಪಾಕ್‌ಗೆ ಜಯ

ಗಾಲ್ (ಎಎಫ್‌ಪಿ): ಅಬ್ದುಲ್ಲಾ ಶಫೀಕ್ ಗಳಿಸಿದ ಅಮೋಘ 160 ರನ್‌ಗಳ ನೆರವಿನಿಂದ ಪಾಕಿಸ್ತಾನ ತಂಡವು ಮೊದಲ ಟೆಸ್ಟ್‌ನಲ್ಲಿ ಶ್ರೀಲಂಕಾ ಎದುರು ನಾಲ್ಕು ವಿಕೆಟ್‌ಗಳಿಂದ ಜಯ ಸಾಧಿಸಿತು.

ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ ಗೆದ್ದು, ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿದ ಪಾಕಿಸ್ತಾನ, ಗಾಲ್‌ನಲ್ಲಿ ಗರಿಷ್ಠ ರನ್ ಗುರಿಯನ್ನು ಯಶಸ್ವಿಯಾಗಿ ಬೆನ್ನತ್ತಿದ ದಾಖಲೆ ಬರೆಯಿತು.

ಪಾಕಿಸ್ತಾನ 127.2 ಓವರ್‌ಗಳಲ್ಲಿ ಆರು ವಿಕೆಟ್ ನಷ್ಟಕ್ಕೆ 344 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಶ್ರೀಲಂಕಾ 222, ಪಾಕಿಸ್ತಾನ 218. ಎರಡನೇ ಇನಿಂಗ್ಸ್ ಶ್ರೀಲಂಕಾ 337, ಪಾಕಿಸ್ತಾನ 127.2 ಓವರ್‌ಗಳಲ್ಲಿ 6ಕ್ಕೆ 344 (ಅಬ್ದುಲ್ಲಾ ಶಫೀಕ್ ಔಟಾಗದೆ 160, ಇಮಾಮ್ ಉಲ್ ಹಕ್ 35, ಬಾಬರ್ ಅಜಮ್ 55, ಮಹಮ್ಮದ್ ರಿಜ್ವಾನ್ 40, ಪ್ರಭಾತ್ ಜಯಸೂರ್ಯ 135ಕ್ಕೆ 4). ಫಲಿತಾಂಶ: ಪಾಕಿಸ್ತಾನ ತಂಡಕ್ಕೆ ನಾಲ್ಕು ವಿಕೆಟ್‌ಗಳ ಜಯ

ಧನಲಕ್ಷ್ಮೀ, ಐಶ್ವರ್ಯಾ ಉದ್ದೀಪನ ಮದ್ದು ಸೇವನೆ ಖಚಿತ


ಧನಲಕ್ಷ್ಮೀ


ಐಶ್ವರ್ಯಾ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಬೇಕಿದ್ದ ಓಟಗಾರ್ತಿ ಎಸ್. ಧನಲಕ್ಷ್ಮೀ ಮತ್ತು ಟ್ರಿಪಲ್ ಜಂಪ್ ಅಥ್ಲೀಟ್ ಐಶ್ವರ್ಯಾ ಬಾಬು ಅವರು ಉದ್ದೀಪನ ಮದ್ದು ಸೇವನೆ ಮಾಡಿರುವುದು ಪರೀಕ್ಷೆಯಲ್ಲಿ ದೃಢಪಟ್ಟಿದೆ. ಅವರನ್ನು ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ.

28ರಿಂದ ಆರಂಭವಾಗಲಿರುವ ಕೂಟಕ್ಕೆ ಇನ್ನೆರಡು ದಿನಗಳ ನಂತರ ತಂಡವು ಬರ್ಮಿಂಗ್‌ಹ್ಯಾಮ್‌ಗೆ ತೆರಳಲಿದೆ. ಈಚೆಗೆ ಪ್ರಕಟಿಸಲಾಗಿದ್ದ 37 ಅಥ್ಲೀಟ್‌ಗಳ ತಂಡದಲ್ಲಿ ಇವರಿಬ್ಬರೂ ಇದ್ದರು. ಇದೀಗ ಅವರು ಕೂಟಕ್ಕೆ ತೆರಳುವುದು ಖಚಿತವಿಲ್ಲ ಎಂದು ಮೂಲಗಳು ತಿಳಿಸಿವೆ.

ಆದರೆ ಸ್ಪರ್ಧೆಯಿಂದ ಹೊರಗೆ ಮಾಡಲಾಗುವ ಎರಡು ಟೆಸ್ಟ್‌ಗಳಲ್ಲಿ ಧನಲಕ್ಷ್ಮೀ ಮತ್ತು ಸ್ಪರ್ಧೆಗಳ ಭಾಗವಾಗಿ ಮಾಡಲಾಗುವ ಎರಡು ಪರೀಕ್ಷೆಗಳಲ್ಲಿ ಐಶ್ವರ್ಯಾ ಅವರು ನಿಷೇಧಿತ ಮದ್ದು ಸೇನವೆ ಮಾಡಿರುವುದು ದೃಢವಾಗಿದೆ.

ಧನಲಕ್ಷ್ಮೀಯವರ ಮಾದರಿಯಲ್ಲಿ ಅನಾಬೊಲಿಕ್ ಸ್ಟೆರಾಯ್ಡ್ ಮತ್ತು ಐಶ್ವರ್ಯಾ ಅವರ ಮಾದರಿಯಲ್ಲಿ ಒಸ್ಟೆರೈನ್ ಮದ್ದುಗಳ ಅಂಶ ಪತ್ತೆಯಾಗಿದೆ. ಚೆನ್ನೈನಲ್ಲಿ ಜೂನ್ 13 ಮತ್ತು 14ರಂದು ನಡೆದಿದ್ದ ಅಂತರರಾಜ್ಯ ಚಾಂಪಿಯನ್‌ಷಿಪ್ ವೇಳೆ ಮಾದರಿಗಳನ್ನು ನಾಡಾ (ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ) ಸಂಗ್ರಹಿಸಿತ್ತು.

ಬೆಂಗಳೂರು ಗಾಲ್ಫ್: ಸೆಹೆರ್– ನೇಹಾ ಮುನ್ನಡೆ

ಬೆಂಗಳೂರು: ನೇಹಾ ತ್ರಿಪಾಠಿ ಮತ್ತು ಸೆಹೆರ್ ಅತ್ವಾಲ್ ಅವರು ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್ (ಡಬ್ಲ್ಯುಪಿಜಿಟಿ) 10ನೇ ಲೆಗ್ ಟೂರ್ನಿಯಲ್ಲಿ ಮೊದಲ ಸುತ್ತಿನ ಅಂತ್ಯಕ್ಕೆ ಜಂಟಿ ಮುನ್ನಡೆ ಸಾಧಿಸಿದ್ದಾರೆ.

ಇಲ್ಲಿನ ಪ್ರೆಸ್ಟೀಜ್ ಗಾಲ್ಫ್‌ಶೈರ್ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಬುಧವಾರ ಇವರಿಬ್ಬರು ಅಗ್ರಸ್ಥಾನದಲ್ಲಿದ್ದರು.ವಿಧಾತ್ರಿ ಅರಸ್, ಸ್ನೇಹಾ ಸಿಂಗ್ ಮತ್ತು ಈಶ್ವರಿ ಪ್ರಸನ್ನ ಜಂಟಿ ಮೂರನೇ ಸ್ಥಾನದಲ್ಲಿದ್ದರು.

ಸಂಕ್ಷಿಪ್ತ ಸುದ್ದಿ

ಪಟ್ನಾ ಪೈರೆಟ್ಸ್‌ಗೆ ಕನ್ನಡಿಗ ರವಿ ಮುಖ್ಯ ಕೋಚ್


ರವಿ ಶೆಟ್ಟಿ

ಬೆಂಗಳೂರು: ಕರ್ನಾಟಕದ ರವಿ ಶೆಟ್ಟಿ ಅವರು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಆಡುವ ಪಟ್ನಾ ಪೈರೆಟ್ಸ್ ತಂಡದ ಮುಖ್ಯ ಕೋಚ್ ಆಗಿ ನೇಮಕವಾಗಿದ್ದಾರೆ.

ಮುಂಬರಲಿರುವ ಒಂಬತ್ತನೇ ಆವೃತ್ತಿಯ ಟೂರ್ನಿಯಲ್ಲಿ ಅವರು ಪಟ್ನಾ ತಂಡದಲ್ಲಿ ಕಾರ್ಯನಿರ್ವಹಿಸಲಿದ್ದಾರೆ ಎಂದು ತಂಡದ ಆಡಳಿತವು ಟ್ವೀಟ್ ಮಾಡಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ರವಿ ಶೆಟ್ಟಿ, 'ಅನುಭವ ಮತ್ತು ಈ ಹಿಂದೆ ಕಾರ್ಯನಿರ್ವಹಿಸಿದ ತಂಡಗಳು ಮಾಡಿದ ಸಾಧನೆಗೆ ಸಂದ ಮನ್ನಣೆ ಇದಾಗಿದೆ. ಕಬಡ್ಡಿ ಪ್ರತಿಭೆಗಳಿಗೆ ಮಹತ್ವದ ವೇದಿಕೆಯಾಗಿರುವ ಈ ಟೂರ್ನಿಯಲ್ಲಿ ಉತ್ತಮ ಆಟಗಾರರು ಇರುವ ತಂಡ ಇದಾಗಿದೆ. ಈ ತಂಡದಲ್ಲಿ ಕಾರ್ಯನಿರ್ವಹಿಸುವುದು ಹೆಮ್ಮೆಯ ವಿಷಯ' ಎಂದರು.

ಯು ಮುಂಬಾ ಮತ್ತು ಜೈಪುರ ಪಿಂಕ್ ಪ್ಯಾಂಥರ್ಸ್ ತಂಡಗಳಲ್ಲಿಯೂ ರವಿ ಕೋಚ್ ಆಗಿ ಕಾರ್ಯನಿರ್ವಹಿಸಿದ್ದಾರೆ. –

ಪೂಜಾರ ದ್ವಿಶತಕ


ಚೇತೇಶ್ವರ್ ಪೂಜಾರ

ಲಂಡನ್ (ಪಿಟಿಐ): ಸಸೆಕ್ಸ್ ತಂಡದ ನಾಯಕತ್ವ ವಹಿಸಿದ ಮೊದಲ ಪಂದ್ಯದಲ್ಲಿಯೇ ಭಾರತದ ಚೇತೇಶ್ವರ್ ಪೂಜಾರ ದ್ವಿಶತಕ ದಾಖಲಿಸಿದ್ದಾರೆ.

ಬುಧವಾರ ಲಾರ್ಡ್ಸ್‌ನಲ್ಲಿ ನಡೆದ ಇಂಗ್ಲಿಷ್ ಕೌಂಟಿ ಕ್ರಿಕೆಟ್‌ನಲ್ಲಿ ಪೂಜಾರ (231; 403ಎಸೆತ, 4X21, 6X3) ಮಿಂಚಿದರು. ಅವರ ಆಟದ ನೆರವಿನಿಂದ ಸಸೆಕ್ಸ್ ತಂಡವು ಮಿಡ್ಲಸೆಕ್ಸ್ ತಂಡದ ಎದುರು ಮೊದಲ ಇನಿಂಗ್ಸ್‌ನಲ್ಲಿ 523 ರನ್ ಗಳಿಸಿತು.

ತಂಡವು 99 ರನ್‌ಗಳಿಗೆ ಎರಡು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿತ್ತು. ಈ ಹಂತದಲ್ಲಿ ಪೂಜಾರ ಮತ್ತು ಟಾಮ್ ಅಲ್ಸಾಪ್ (135; 277ಎಸೆತ, 4X15) ಮೂರನೇ ವಿಕೆಟ್ ಜೊತೆಯಾಟದಲ್ಲಿ 219 ರನ್ ಸೇರಿಸಿದರು.

ತಂಡದ ನಾಯಕ ಟಾಮ್ ಹೆನ್ಸ್ ಅವರು ಗಾಯಗೊಂಡಿರುವುದರಿಂದ ಪೂಜಾರ ತಂಡವನ್ನು ಮುನ್ನಡೆಸುತ್ತಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್ ಸ್ಪರ್ಧೆ ಇಲ್ಲ: ಕಾರ್ಲ್‌ಸನ್

ನವದೆಹಲಿ (ಪಿಟಿಐ): ಐದು ಬಾರಿಯ ವಿಶ್ವ ಚೆಸ್ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ 2023ರ ಚಾಂಪಿಯನ್‌ಷಿಪ್‌ನಲ್ಲಿ ಕಣಕ್ಕಿಳಿಯವುದಿಲ್ಲ ಎಂದು ಹೇಳಿದ್ದಾರೆ.

ಹಾಲಿ ಚಾಂಪಿಯನ್ ಆಗಿರುವ ಅವರು ಆಟದಿಂದ ಇನ್ನೂ ನಿವೃತ್ತಿಯಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. 'ದ ಮ್ಯಾಗ್ನಸ್ ಎಫೆಕ್ಟ್' ಎಂಬ ಪಾಡ್‌ಕಾಸ್ಟ್‌ನಲ್ಲಿ ಕಾರ್ಲ್‌ಸನ್ ಈ ಮಾಹಿತಿ ನೀಡಿದ್ದಾರೆ.

ಕಾರ್ಲ್‌ಸನ್ ಅವರ ನಿರ್ಧಾರದಿಂದಾಗಿ ನೆಪೊಮ್ನಿಯಾಚಿ ಅವರು, ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ರನ್ನರ್‌ಅಪ್ ಆ ಚೀನಾದ ದಿಂಗ್ ಲಿರೆನ್ ಅವರನ್ನು 2023ರಲ್ಲಿ ಎದುರಿಸಬಹುದು.